ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 20 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 185 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹ 4

ಆದಾಯಕ್ಕೂ ಮೀರಿ ಆಸ್ತಿ ಸಂಪಾದನೆ ಆರೋಪ

ಡಿಕೆಶಿ ವಿರುದ್ಧ ಸಿಬಿಐ ತನಿಖೆ

● ರಾಜ್ಯ ಹೈಕೋರ್ಟ್ ಹಸಿರು ನಿಶಾನೆ ● ಮೂರು ತಿಂಗಳೊಳಗೆ ವಿಚಾರಣೆ ನಡೆಸಿ, ದೋಷಾರೋಪ ಪಟ್ಟಿ ಸಲ್ಲಿಸಲು ಸೂಚನೆ



"ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇನೆ. ನೆಲದ ಕಾನೂನನ್ನು ಗೌರವಿಸುತ್ತೇನೆ. ಏನೂ ತಪ್ಪು ಮಾಡಿಲ್ಲ ಎಂಬುದು ನನಗೆ ತಿಳಿದಿದೆ. ನಾನು ಶುದ್ಧವಾಗಿದ್ದೇನೆ. ಬಿಜೆಪಿ ಸೇಡಿನ ರಾಜಕಾರಣ ಮಾಡುತ್ತಿದೆ. ಆದ್ದರಿಂದಲೇ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿತ್ತು. ಈಗಾಗಲೇ ಶೇ.90ರಷ್ಟು ತನಿಖೆ ಪೂರ್ಣಗೊಂಡಿದೆ. ಯಾವ ಹಂತದಲ್ಲೂ ವಿಚಾರಣೆಗೆ ನನ್ನ ಒಳಪಡಿಸಿಲ್ಲ. ನನ್ನ ಮತ್ತು ನನ್ನ ಪತ್ನಿಗೆ ಸೇರಿದ ಆಸ್ತಿ ಬಗ್ಗೆ ವಿಚಾರಣೆ ನಡೆಯಬೇಕಿದೆ. ನಾನು ಕಾನೂನು ಚೌಕಟ್ಟಿನಲ್ಲಿ ಹೋರಾಟ ಮುಂದುವರೆಸುತ್ತೇನೆ. ಬಿಜೆಪಿಯ ಪಿತೂರಿ ಏನೇ ಇರಲಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಒದಗಿಸುತ್ತೇನೆ.

–ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ




ಬೆಂಗಳೂರು, ಅ.19–(ಕೆಎಂಶಿ) **ಆದಾಯ ಮೀರಿದ ಆಸ್ತಿ ಸಂಪಾದನೆ ಆರೋಪ ಪ್ರಕರಣದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ರಾಜ್ಯ ಹೈಕೋರ್ಟ್ ಹಸಿರು ನಿಶಾನೆ ತೋರಿದೆ.**

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ರದ್ದುಪಡಿಸಬೇಕು ಎಂದು ಶಿವಕುಮಾರ್ ನ್ಯಾಯಾಲಯದ ಮೊರೆ ಹೋಗಿದ್ದರು. ವಾದ–ಪ್ರತಿವಾದ ಆಲಿಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೆ.ನಟರಾಜ್ ನೇತೃತ್ವದ ಏಕ ಸದಸ್ಯ ಪೀಠ ಇಂದು ಪ್ರಕಟಿಸಿ ತನಿಖೆಯನ್ನು ಮೂರು ತಿಂಗಳೊಳಗೆ ಮುಗಿಸಿ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವಂತೆ ಸಿಬಿಐಗೆ ಆದೇಶ ಮಾಡಿದೆ. ನ್ಯಾಯಾಲಯದ ಈ ಆದೇಶ ಡಿ.ಕೆ.ಶಿವಕುಮಾರ್ ಅವರಿಗೆ ತೀವ್ರ ಹಿನ್ನಡೆಯಾದಂತಾಗಿದೆ.

ಕಳೆದ 2020ರ ಅಕ್ಟೋಬರ್‌ನಲ್ಲಿ ಸಿಬಿಐ ದಾಖಲಿಸಿದ್ದ ಎಫ್‌ಐಆರ್ ಅನ್ನು ಶಿವಕುಮಾರ್ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದರು. ಫೆಬ್ರವರಿ 2023ರಲ್ಲಿ ವಿಚಾರಣಾ ನ್ಯಾಯಾಲಯ ತೀರ್ಪನ್ನು ತಡೆ ಹಿಡಿದಿತ್ತು. ಇದೀಗ ●9ನೇ ಪುಟಕ್ಕೆ

ಕಾಲು ಜಾರಿ ನಾಲೆಯಲ್ಲಿ ದಂಪತಿ ಜಲಸಮಾಧಿ



ನಂಜನಗೂಡು, ಅ.19–ಬಟ್ಟೆ ತೊಳೆಯುವಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ದಂಪತಿ ಮೃತಪಟ್ಟಿರುವ ಘಟನೆ ತಾಲೂಕಿನ ಹರತಲೆ ಗ್ರಾಮದ ಬೀಚನಹಳ್ಳಿ ಬಲದಂಡೆ ನಾಲೆಯಲ್ಲಿ ಬುಧವಾರ ಸಂಜೆ ನಡೆದಿದೆ. ತಾಲೂಕಿನ ಹುಸ್ಕೂರು ಗ್ರಾಮದ ಶಂಕರ ಮತ್ತು ಬೇಬಿ ಮೃತಪಟ್ಟ ದಂಪತಿ. ಬುಧವಾರ ಸಂಜೆ ಹುಸ್ಕೂರು ಗ್ರಾಮದಿಂದ ಹರತಲೆ ಬಳಿಯ ಬೀಚನಹಳ್ಳಿ ನಾಲೆಗೆ ಬಟ್ಟೆ ತೊಳೆಯಲು ಪತ್ನಿ ಬೇಬಿ ತೆರಳಿದ್ದರು. ನಂತರ ಪತ್ನಿಯನ್ನು ಮನೆಗೆ ಕರೆದುಕೊಂಡು ಬರುವುದಾಗಿ ಪತಿ ಶಂಕರ ನಾಲೆಯ ಹತ್ತಿರ ಬಂದಿದ್ದಾರೆ. ಈ ವೇಳೆ ಬೇಬಿ ಆಕಸ್ಮಿಕವಾಗಿ ಕಾಲು ಜಾರಿ ನಾಲೆಗೆ ಬಿದ್ದು ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದರು ಎನ್ನಲಾಗಿದ್ದು, ಪತ್ನಿಯನ್ನು ರಕ್ಷಿಸಲು ನಾಲೆಗೆ ಇಳಿದ ಶಂಕರ ಕೂಡ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿ ಇಬ್ಬರೂ ಮೃತಪಟ್ಟಿದ್ದಾರೆ. ವಿಷಯ ತಿಳಿದ ಗ್ರಾಮಸ್ಥರು, ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಸ್ಥಳಕ್ಕೆ ಆಗಮಿಸಿ ಶವಗಳ ಹುಡುಕಾಟ ನಡೆಸಿದ್ದಾರೆ. ಆದರೆ, ರಾತ್ರಿ ಆಗಿದ್ದರಿಂದ ಶವಗಳನ್ನು ಪತ್ತೆಹಚ್ಚಲು ಸಾಧ್ಯವಾಗಿರಲಿಲ್ಲ. ಗುರುವಾರ ಮಧ್ಯಾಹ್ನ ತಾಲೂಕಿನ ಕಳಲೆ ಗ್ರಾಮದ ಬಳಿ ಇಬ್ಬರ ಶವಗಳು ಸಿಕ್ಕಿವೆ. ನಂತರ ಪೊಲೀಸರು ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ಶವಗಳನ್ನು ಹಸ್ತಾಂತರಿಸಿದರು.

ಈ ವೇಳೆ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ನೆರೆದಿದ್ದ ಜನರು ಕಣ್ಣೀರು ಸುರಿಸುತ್ತಿದ್ದರು. ದಂಪತಿಗೆ 5 ವರ್ಷದ ಗಂಡು ಮಗುವಿದೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೆಡಿಎಸ್ ರಾಜ್ಯ ಘಟಕ ವಿಸರ್ಜನೆ; ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹಂಗಾಮಿ ಅಧ್ಯಕ್ಷರು

ಆಟೋಮ್ಯಾಟಿಕ್ಕಾಗಿ ಅಧಿಕಾರ ಕಳೆದುಕೊಂಡ ಸಿ.ಎಂ. ಇಬ್ರಾಹಿಂ!

ಬೆಂಗಳೂರು, ಅ.19–(ಕೆಎಂಶಿ) ರಾಜ್ಯ ಘಟಕವನ್ನು ವಿಸರ್ಜನೆ ಮಾಡುವ ಮೂಲಕ ನಾನೇ ಒರಿಜಿನಲ್ ರಾಜ್ಯಾಧ್ಯಕ್ಷರೆಂದು ಹೇಳಿಕೊಂಡಿದ್ದ ಸಿ.ಎಂ. ಇಬ್ರಾಹಿಂ, ಅಧಿಕಾರ ಕಳೆದುಕೊಳ್ಳುವಂತೆ ಜೆಡಿಎಸ್ ತಂತ್ರಗಾರಿಕೆ ಮೆರೆದಿದೆ.

ಅಲ್ಲದೆ, ಹಂಗಾಮಿ ರಾಜ್ಯಾಧ್ಯಕ್ಷರಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ. ಜೆಡಿಎಸ್ ವರಿಷ್ಠ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಜೆಪಿ ಭವನದಲ್ಲಿ ನಡೆದ ಎಲ್ಲಾ ಜಿಲ್ಲಾಧ್ಯಕ್ಷರು, ಶಾಸಕರು, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರು, ಸದಸ್ಯರನ್ನು ಒಳಗೊಂಡ ಸಭೆಯಲ್ಲಿ ಮಹತ್ವದ ಈ ನಿರ್ಣಯ ತೆಗೆದುಕೊಳ್ಳಲಾಗಿದೆ. ಜೆಡಿಎಸ್ ರಾಜ್ಯ ಘಟಕವನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿಸರ್ಜನೆ ಮಾಡಿರುವುದರಿಂದ ರಾಜ್ಯಾಧ್ಯಕ್ಷರಾಗಿದ್ದ ಸಿ.ಎಂ.ಇಬ್ರಾಹಿಂ ಅವರು



ಅಧಿಕಾರ ಕಳೆದುಕೊಂಡಂತಾಗಿದೆ. ಪಕ್ಷ ವಿರೋಧಿ ಚಟುವಟಿಕೆ ನೆಪವೊಡ್ಡಿ ಅವರ ವಿರುದ್ಧ ಅಮಾನತು, ವಜಾ ಹಾಗೂ ಉಚ್ಚಾಟನೆಯಂತಹ ಯಾವುದೇ ಶಿಸ್ತು ಕ್ರಮ ಕೈಗೊಂಡಿಲ್ಲ. ಆದರೆ, ವರಿಷ್ಠರ ವಿರುದ್ಧವೇ ಬಂಡಾಯ ಸಾರಿದ ಇಬ್ರಾಹಿಂ ವಿರುದ್ಧ ಪರೋಕ್ಷವಾಗಿ ಕ್ರಮ ಕೈಗೊಂಡಿದ್ದು, ಒಂದರ್ಥದಲ್ಲಿ ವಜಾ ಮಾಡಿದಂತಾಗಿದೆ. ಅಧಿಕಾರವಿಲ್ಲದ ಅವರು ಇಷ್ಟವಿದ್ದರೆ ಪಕ್ಷದಲ್ಲಿ ಮುಂದುವರೆಯಬಹುದು ಅಷ್ಟೆ.

ಕಳೆದ ವಿಧಾನಸಭೆ ಚುನಾವಣೆ ಮುಗಿದ ಮೇಲೆ ಸ್ಥಗಿತಗೊಂಡಿದ್ದ ಪಕ್ಷದ ಚಟುವಟಿಕೆಗಳಿಗೆ ವೇಗ ನೀಡುವ ಉದ್ದೇಶದಿಂದ ಹೆಚ್.ಡಿ.ದೇವೇಗೌಡರು ರಾಜ್ಯದ ಜೆಡಿಎಸ್ ಘಟಕದ ಕಾರ್ಯಕಾರಿ ಸಮಿತಿಯನ್ನು ವಿಸರ್ಜಿಸಿ, ಆದೇಶ ಹೊರಡಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ರಾಜ್ಯ ●9ನೇ ಪುಟಕ್ಕೆ

ನನ್ನನ್ನು ಕೆಣಕಿದ್ದೀರಿ... ಪರಿಣಾಮ ಕಾದು ನೋಡಿ...!

"ಇವತ್ತಿನವರೆಗೂ ದೇವೇಗೌಡರನ್ನು ನಾನು ನನ್ನ ತಂದೆ ಸಮಾನ ಅಂದುಕೊಂಡಿದ್ದೆ. ಇದೇನಾ ಮಗನಿಗೆ ಕೊಡುವ ಪ್ರೀತಿ. ಇನ್ನೂ ನಾಲ್ಕು ವರ್ಷ ಇದ್ದ ನನ್ನ ವಿಧಾನ ಪರಿಷತ್ ಸ್ಥಾನ ಬಿಟ್ಟು ಬಂದೆ. ಆದರೆ ಹೀಗೆ ಮಾಡಿದರು. ಯಾವ ಒಕ್ಕಲಿಗ ನಾಯಕರನ್ನು ಬೆಳೆಸಿದ್ದೀರಿ? ಇಷ್ಟು ದೊಡ್ಡ ವಯಸ್ಸಿನಲ್ಲಿ ನಿಮ್ಮಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಇನ್ನೂ ಎಷ್ಟು ಮನೆ ಹಾಳು ಮಾಡಬೇಕು ಅಂತಾ ಮಾಡಿದ್ದೀರಿ. ಇವತ್ತಿನ ಸಭೆಗೆ ನನಗೆ ಆಹ್ವಾನ ಇರಲಿಲ್ಲ. ಸಭೆ ಬಗ್ಗೆ ನನಗೆ ಗೊತ್ತೂ ಇಲ್ಲ. ಕಂಡೋರ ಮಕ್ಕಳು ಸಿಕ್ಕಿದ್ದೇವೆ ಅಂತ ಹೀಗೆಲ್ಲಾ ಮಾಡುವುದು ಸರಿಯಲ್ಲ ಗೌಡ್ರೇ. ನನಗೆ ಅಧಿಕಾರದ ಆಸೆ ಇಲ್ಲ. ಜೆಡಿಎಸ್ ಕುಟುಂಬದ ಸ್ವತ್ತು ಅಂತ ತೋರಿಸಿಬಿಟ್ಟಿರಿ. ಗೌಡರಿಗೆ ಸ್ವಲ್ಪವಾದರೂ ಪ್ರಜ್ಞೆ ಬೇಡವಾ? ನನ್ನ ಜೊತೆ ಮಾತಾಡಬೇಕು ಎಂದು ಅವರಿಗೆ ಅನ್ನಿಸಲಿಲ್ವಾ?



ರಾತ್ರಿ ಹಗಲು ಓಡಾಡಿ ಅವರ ಮಗನನ್ನು ಗೆಲ್ಲಿಸಿದ್ದೇನೆ. ನನಗೆ ಅವರು ಒಳ್ಳೆಯ ಬಹುಮಾನ ಕೊಟ್ಟಿದ್ದಾರೆ. ನಾನು ಕೋರ್ಟ್‌ಗೆ ಹೋಗುತ್ತೇನೆ, ವಕೀಲರಿಂದ ನಿಮ್ಮ ಆದೇಶಕ್ಕೆ ತಡೆಯಾಜ್ಞೆ ತರುತ್ತೇನೆ. ದೇವೇಗೌಡರಿಗೆ ನನ್ನನ್ನು ತೆಗೆಯುವ ಅಧಿಕಾರ ಇಲ್ಲ. ಕಾರ್ಯಕಾರಿ ಸಮಿತಿಯ 3/2ರಷ್ಟು ಸದಸ್ಯರ ಅನುಮತಿ ಪಡೆದು ಮೊದಲು ನನಗೆ ನೋಟಿಸ್ ಕೊಡಬೇಕು. ನನ್ನನ್ನು ಕೆಣಕಿದ್ದೀರಿ, ಇದರ ಪರಿಣಾಮ ಮುಂದೆ ಏನಿರುತ್ತದೆ ಎಂದು ಕಾದು ನೋಡಿ.

–ಸಿ.ಎಂ.ಇಬ್ರಾಹಿಂ, ಪದಚ್ಯುತ ಜೆಡಿಎಸ್ ರಾಜ್ಯಾಧ್ಯಕ್ಷ

ನವ ವೈದ್ಯರಿಗೆ ಗ್ರಾಮೀಣ ಸೇವೆ ಕಡ್ಡಾಯ ರದ್ದು

ಸಂಪುಟ ಸಭೆ ನಿರ್ಧಾರ

ಬೆಂಗಳೂರು, ಅ.19– ವೈದ್ಯಕೀಯ ಶಿಕ್ಷಣ ಪದವಿ ಪಡೆದ ನಂತರ ಸಲ್ಲಿಸಬೇಕಿದ್ದ ಕಡ್ಡಾಯ ಗ್ರಾಮೀಣ ಸೇವೆಯನ್ನು ರದ್ದುಪಡಿಸಿರುವ ಸರ್ಕಾರ, ಚಳಿಗಾಲದ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ತೀರ್ಮಾನ ಮಾಡಿದೆ. ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಗ್ರಾಮೀಣ ಪ್ರದೇಶದ ಸರ್ಕಾರಿ ಆಸ್ಪತ್ರೆಯಲ್ಲಿ ಖಾಲಿ ●9ನೇ ಪುಟಕ್ಕೆ

ಮೈಸೂರಲ್ಲಿ ಗಮನ ಸೆಳೆದ ಪಾರಂಪರಿಕ ಸೈಕಲ್ ಸವಾರಿ



ಮೈಸೂರು, ಅ.19(ಆರ್‌ಕೆ)– ದಸರಾ ಮಹೋತ್ಸವದ ಅಂಗವಾಗಿ ಇಂದು ಮೈಸೂರಲ್ಲಿ ಪಾರಂಪರಿಕ ಟ್ರಿಣ್ ಟ್ರಿಣ್ ಸೈಕಲ್ ಸವಾರಿ ಮಾಡಲಾಯಿತು.

ಪುರಾತತ್ವ ಸಂಗ್ರಹಾಲಯಗಳ ಮತ್ತು ಪಾರಂಪರಿಕ ಇಲಾಖೆ ಆಯೋಜಿಸಿದ್ದ ಸೈಕಲ್ ಸವಾರಿಗೆ ಪುರಭವನ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹಾಗೂ ಮೇಯರ್ ಶಿವಕುಮಾರ್ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ನಂತರ ಅವರು ಸಹ ಅನತಿ ದೂರ ಸೈಕಲ್‌ನಲ್ಲಿ ಸಾಗಿ ಎಲ್ಲರ ಗಮನ ಸೆಳೆದರು.

ದೊಡ್ಡಗಡಿಯಾರ, ಅರಮನೆ ಉತ್ತರ ದ್ವಾರ, ಕೆ.ಆರ್.ಸರ್ಕಲ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಜಗನ್ಮೋಹನ ಅರಮನೆ, ವಾಣಿಜ್ಯ ತೆರಿಗೆ ಕಚೇರಿ, ಹಳೇ ಡಿಸಿ ಕಚೇರಿ, ಕ್ರಾಫರ್ಡ್ ಹಾಲ್, ಮೆಟ್ರೋಪೋಲ್ ಸರ್ಕಲ್, ರೈಲು ನಿಲ್ದಾಣ, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಓಲ್ಡ್ ಬ್ಯಾಂಕ್ ರೋಡ್, ಗಾಂಧಿ ವೃತ್ತ ಮೂಲಕ ಸಾಗಿದ ಸೈಕಲ್ ಸವಾರಿ ಮರಳಿ ಪುರಭವನ ತಲುಪಿತು.

ಹೆರಿಟೇಜ್ ಆಯುಕ್ತ ಎ.ದೇವರಾಜ್, ಉಪನಿರ್ದೇಶಕ ಮಂಜುಳಾ, ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಶೆಲ್ವಪಿಳ್ಳೆ ಅಯ್ಯಂಗಾರ್ ಸೇರಿದಂತೆ ನೂರಾರು ಮಂದಿ ಪಾರಂಪರಿಕ ಸೈಕಲ್ ಸವಾರಿಯಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡ ಮತ್ತು ಸ್ಮಾರಕಗಳನ್ನು ಉಳಿಸಿ ಸಂರಕ್ಷಿಸುವುದು ಎಲ್ಲರ ಕರ್ತವ್ಯ. ವಿಶೇಷ ನೈಪುಣ್ಯತೆ, ವಿನ್ಯಾಸದೊಂದಿಗೆ ನಿರ್ಮಾಣವಾಗಿರುವ ಹಳೇ ಕಟ್ಟಡಗಳು ಮೈಸೂರಿನ ಭವ್ಯ ಇತಿಹಾಸವನ್ನು ಸಾರುತ್ತಿವೆ ಎಂದರು.

ಮೇಯರ್ ಶಿವಕುಮಾರ್ ಮಾತನಾಡಿ, ಪಾರಂಪರಿಕ ನಗರಿ ಎಂದು ವಿಶ್ವಪ್ರಸಿದ್ಧಿಯಾಗಿರುವ ಮೈಸೂರಿನಲ್ಲಿ ದುಸ್ಥಿತಿಯಲ್ಲಿರುವ ಹಳೇ ಪಾರಂಪರಿಕ ಕಟ್ಟಡಗಳ ಸಮೀಕ್ಷೆ ಮುಗಿದಿದ್ದು ಅವುಗಳ ದುರಸ್ತಿ ಹಾಗೂ ಸಂರಕ್ಷಣೆಗೆ ಸರ್ಕಾರ ಅನುದಾನ ನೀಡಬೇಕು ಎಂದರು.

ಇಂದು ಸಾಂಪ್ರದಾಯಿಕ ಉಡುಗೆಯೊಂದಿಗೆ ದಂಪತಿಗಳ ಟಾಂಗಾ ಸವಾರಿ

ಟಾಂಗಾ ರೈಡ್: ನಾಳೆ (ಅ.20) ಬೆಳಗ್ಗೆ 7 ಗಂಟೆಗೆ ಪುರಭವನದಿಂದ ಸಾಂಪ್ರದಾಯಿಕ ಉಡುಗೆತೊಟ್ಟ ದಂಪತಿಯ ಟಾಂಗಾ ಸವಾರಿ ಏರ್ಪಡಿಸಲಾಗಿದೆ.

ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮೇಯರ್ ಶಿವಕುಮಾರ್, ಉಪಮೇಯರ್ ಡಾ. ರೂಪಾ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪರಂಪರೆ ಆಯುಕ್ತ ಎ.ದೇವರಾಜು ಇತಿಹಾಸ ತಜ್ಞ ಪ್ರೊ.ಎನ್.ಎಸ್.ರಂಗರಾಜು ಸೇರಿದಂತೆ ಅಧಿಕಾರಿಗಳು, ಜನಪ್ರತಿನಿಧಿಗಳು ಟಾಂಗಾ ಸವಾರಿಯಲ್ಲಿ ಪಾಲ್ಗೊಳ್ಳುವರು.

ನಾಳೆ ದಸರಾ ಸಿಎಂ ಕಪ್ ಕ್ರೀಡಾಕೂಟ ಸಮಾರೋಪ



ಮೈಸೂರು, ಅ.19(ಜಿಎಂ)–ದಸರಾ ಅಂಗವಾಗಿ ಆಯೋಜಿಸಿರುವ ದಸರಾ ಸಿಎಂ ಕಪ್ ಯಶಸ್ವಿಯಾಗಿ ನಡೆಯುತ್ತಿದ್ದು, ಅ.21 ರಂದು ಸಿಎಂ ಕಪ್ ಕ್ರೀಡಾಕೂಟದ ಸಮಾರೋಪ ಸಮಾರಂಭ ಆಯೋಜಿಸಿದ್ದು ಅಂದು ಮುಖ್ಯಮಂತ್ರಿಗಳು ಕ್ರೀಡಾಪಟುಗಳಿಗೆ ಪದಕ, ಕಪ್‌ಗಳನ್ನು ವಿತರಿಸಲಿದ್ದಾರೆ ಎಂದು ದಸರಾ ಕ್ರೀಡಾ ಉಪಸಮಿತಿ ಅಧ್ಯಕ್ಷ, ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.11ರಿಂದ 14 ರವರೆಗೆ ಕ್ರೀಡಾಕೂಟದಲ್ಲಿ 28 ಕ್ರೀಡೆಗಳಲ್ಲಿ ಒಟ್ಟು 3509 ಕ್ರೀಡಾಪಟುಗಳು ಭಾಗವಹಿಸಿದ್ದರು. 540 ಮಂದಿ ತಾಂತ್ರಿಕ ಸಿಬ್ಬಂದಿ ಕಾರ್ಯಕ್ರಮ ಯಶಸ್ವಿಗೆ ಶ್ರಮಿಸಿದ್ದಾರೆ. ಬೆಂಗಳೂರು ನಗರ, ಗ್ರಾಮಾಂತರ, ಕಲ್ಬುರ್ಗಿ, ಮೈಸೂರು ಹಾಗೂ ಬೆಳಗಾವಿ ಜಿಲ್ಲೆಯ ಕ್ರೀಡಾಪಟುಗಳು ಪಾಲ್ಗೊಂಡು ಚಿನ್ನ, ಬೆಳ್ಳಿ, ಕಂಚು ಸೇರಿ ಒಟ್ಟು 696 ಪದಕಗಳನ್ನು ಪಡೆದಿದ್ದಾರೆ ಎಂದರು.

ಹೀಗೆ ಮೊದಲ ಹಂತದ ಪ್ರತಿಭಾನ್ವೇಷಣ ರಾಜ್ಯ ಮಟ್ಟದ ಸಿಎಂ ಕಪ್ ಕ್ರೀಡಾಕೂಟ ಯಶಸ್ವಿಯಾಗಿ ನಡೆದಿದ್ದು, 2ನೇ ಹಂತದ ಸಿಎಂ ಕಪ್ ಕ್ರೀಡಾಕೂಟ ಅ.15 ರಿಂದ 21ರವರೆಗೆ ನಡೆಯುತ್ತಿದ್ದು, ಒಟ್ಟು 25 ಕ್ರೀಡೆಗಳು 4076 ಕ್ರೀಡಾಪಟುಗಳು ಭಾಗವಹಿಸುತ್ತಿದ್ದು, ಊಟ, ವಸತಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ವಿಜೇತರಾದವರಿಗೆ ನೇರ ಅಕೌಂಟ್‌ಗೆ ಜಮಾ ಮಾಡಲಾಗುತ್ತಿದೆ ಎಂದರು.

ಅ.21ರಂದು ಚಾಮುಂಡಿ ವಿಹಾರ ಒಳ ಕ್ರೀಡಾಂಗಣದಲ್ಲಿ ಸಿಎಂ ಕಪ್ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಕ್ರೀಡಾ ಸಚಿವ ನಾಗೇಂದ್ರ, ಶಾಸಕ ತನ್ವೀರ್ ಸೇಠ್ ಸೇರಿ ಹಲವರು ಭಾಗವಹಿಸುವರು. ದಸರಾ ಸಿಎಂ ಕಪ್‌ನಲ್ಲಿ ಪಾಲ್ಗೊಂಡಿದ್ದ 2 ಸಾವಿರಕ್ಕೂ ಹೆಚ್ಚು ಮಂದಿಗೆ ಪಾರಿತೋಷಕ ಪ್ರದಾನ ಮಾಡಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಯುವ ಜನ ಸಬಲೀಕರಣ–ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ದಸರಾ ಕ್ರೀಡಾ ಉಪಸಮಿತಿ ಉಪಾಧ್ಯಕ್ಷರಾದ ಕಾಂತರಾಜು, ಪರಶಿವಮೂರ್ತಿ, ಸದಸ್ಯ ಹಿನಕಲ್ ವೆಂಕಟೇಶ್, ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಕಿರಣ್ ಇದ್ದರು.

ಅರ್ಜಿ ಆಹ್ವಾನ

ಮೈಸೂರು,ಅ.19–ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ 1ರಿಂದ 8ನೇ ತರಗತಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು https://Karnataka.gov.in/ ಅಥವಾ https://dom.karnatakagov.in/ ಮೂಲಕ ನ.30ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ 8951087207–ಮೈಸೂರು, 9845210242–ತಿ.ನರಸೀಪುರ, 9743567567–ನಂಜನಗೂಡು, 9663157476–ಹೆಚ್.ಡಿ.ಕೋಟೆ, 9986346893–ಕೆ.ಆರ್.ನಗರ, 9620750935–ಹುಣಸೂರು, 6362661474–ಪಿ.ಪಟ್ಟಣ ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.10.2023 ಶುಕ್ರವಾರ, ಮಳೆ ನಕ್ಷತ್ರ: ಚಿತ್ತ, 11.10.2023ರಿಂದ 24.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಮೂಲ ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ ಉತ್ಸವ, ಸಪ್ತಶತಿ ಪಾರಾಯಣ, ಸುಮಂಗಲಿಯರಿಂದ ಕುಂಕುಮಾರ್ಚನೆ, ಪೂರ್ಣಾಹುತಿ, ಶ್ರೀ ಸೂಕ್ತ ಹೋಮ, ಸರಸ್ವತಿ ಆವಾಹನೆ, ಸರಸ್ವತಿ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿ.ವಿ.ಮೊಹಲ್ಲಾ, ಬೆಳಗ್ಗೆಯಿಂದ.

■ **ಸ್ವರ್ಣ ನೃಸಿಂಹದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಸಪ್ತಶತಿ ಪಾರಾಯಣ, ಆಶೀರ್ವಾದ: ಶ್ರೀ ವೆಂಕಟಚಲ ಅವಧೂತ ಗುರು ಮಹಾರಾಜರು, ಸಾನ್ನಿಧ್ಯ: ಶ್ರೀ ಅರ್ಜುನ ಅವಧೂತರು, ಶ್ರೀ ಸೂಕ್ತ, ಮಹಾಲಕ್ಷ್ಮೀ ಹೋಮ, ಸ್ಥಳ: ಶ್ರೀರಾಮಮಂದಿರ, ಜಯನಗರ.

■ **ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಲರ್ಸ್ :** ಎಕ್ಸ್‌ಕ್ಲೂಸಿವ್ ದರ್ಬಾರ್ ಕಲೆಕ್ಷನ್ ಪ್ರದರ್ಶನ, ಸ್ಥಳ: ಹೋಟೆಲ್ ಸಂದೇಶ್ ದಿ ಪ್ರಿನ್ಸ್, ಬೆಳಗ್ಗೆ 10.30 ರಿಂದ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಶ್ರೀ ಕಾತ್ಯಾಯಿನಿ, ಶ್ರೀ ವಿದ್ಯಾ ಶಾಂತಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಸುಬ್ರಹ್ಮಣ್ಯ ಆವರಣಾಂಗ ಹೋಮ –ಶ್ರೀ ದಶವಾರಾಹಿ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ, ಬೆಳಗ್ಗೆ 9ರಿಂದ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀ ಚಕ್ರಪೂಜೆ, ನವಾವರಣ ಪೂಜೆ, ವಿದ್ವಾನ್ ಸಿದ್ಧಾರ್ಥ ಬೆಲ್ಮಣ್ಣು ಅವರಿಂದ ಹಿಂದೂಸ್ಥಾನಿ ಸಂಗೀತ ಗಾಯನ, ಮಧ್ಯಾಹ್ನ 12 ಗಂಟೆಗೆ ಅನ್ನಾರ್ಚನೆ, ವಿಶಾಲಾಕ್ಷಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4 ಗಂಟೆಗೆ ಮಹಾಮಂಗಳಾರತಿ, ಡೋಲೋತ್ಸವ, ಸುನಾಸಿನಿ ಪೂಜೆ, ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಆಶ್ರಮದ ಆವರಣ.

■ **ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಪಂಚಮಿ, ಬೆಳಗ್ಗೆ ಉತ್ಸವ, ಧನ್ವಂತ್ರಿ ಹೋಮ, ಸಂಜೆ ಹೂವಿನ ಚಪ್ಪರ, ಸ್ಥಳ: ದೇವಸ್ಥಾನದ ಆವರಣ, ದೇವರಾಜ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** 55ನೇ ವರ್ಷದ ನವರಾತ್ರಿ ಪೂಜಾ ಕಾರ್ಯಕ್ರಮ, ಸರಸ್ವತಿಪೂಜೆ, ಸಂಜೆ 5 ಗಂಟೆಗೆ.

■ **ಶ್ರೀ ವ್ಯಾಸರಾಜ ಮಠ :** ನವರಾತ್ರಿ ಪ್ರಯುಕ್ತ ವಿದ್ವಾನ್ ಎಸ್.ಎಂ. ಪ್ರಣವಾಚಾರ್ಯ ಅವರಿಂದ 'ಶ್ರೀನಿವಾಸ ಕಲ್ಯಾಣ ಪ್ರವಚನ' ಸ್ಥಳ: ಶ್ರೀ ವ್ಯಾಸರಾಜ ಮಠ ಸೋಸಲೆ ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ರಂಗಾಯಣ :** ನವರಾತ್ರಿ ರಂಗೋತ್ಸವ, ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಒಥೆಲೋ ನಾಟಕ ಪ್ರದರ್ಶನ, ಅನುವಾದ : ಕೆ.ಎಸ್. ನಿಸಾರ್ ಅಹಮದ್, ನಿರ್ದೇಶನ : ಪಿ. ಚಾಂದಿನಿ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಪತ್ರಿಕಾ ಬಳಗ :** ಮೈಸೂರು ಕಾವ್ಯ ದಸರಾ ಕವಿ ಸಮ್ಮೇಳನ, ದಸರಾ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಕವಯಿತ್ರಿ ಡಾ. ಲತಾ ರಾಜಶೇಖರ್, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಗ್ರಂಥಗಳ ಲೋಕಾರ್ಪಣೆ : ಡಾ. ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ದಸರಾ ಪ್ರಶಸ್ತಿ ಪ್ರದಾನ : ಡಾ. ವಸಂತಕುಮಾರ್ ತಿಮಕಾಪುರ, ಎಸ್. ರಾಮಪ್ರಸಾದ್, ಡಾ. ಕೆ. ರಘುರಾಂ ವಾಜಪೇಯಿ, ಸ್ಥಳ: ಶ್ರೀ ಹೊಸಮಠದ ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ನಮೋ ಯೋಗ ಭವನ :** ನಮೋ ಯೋಗ ದಸರಾ–2023, ಯೋಗ ಪಿತಾಮಹ ಮಹರ್ಷಿ ಪತಂಜಲಿ ವಿಗ್ರಹ ಪ್ರತಿಷ್ಠಾಪನೆ, ಡಾ. ಸಿ. ರಮೇಶ್ ಶೆಟ್ಟಿ ಅವರಿಗೆ ವಿಶ್ವ ಯೋಗರತ್ನ ಪ್ರಶಸ್ತಿ ಪ್ರದಾನ, ಡಾ. ನೀಲಕುಲಕರ್ಣಿ ವಿರಚಿತ ಈಶ್ವರ ಪ್ರಣಿಧಾನ್ ಸೂತ್ರಾಣಿ (ಸಂಸ್ಕೃತ ಮತ್ತು ಆಂಗ್ಲ ಭಾಷೆ) ಆಧ್ಯಾತ್ಮಿಕ ಯೋಗ ಗ್ರಂಥ ಲೋಕಾರ್ಪಣೆ, ಉಪಸ್ಥಿತರು : ನಮೋ ಯೋಗಭವನ ಅಧ್ಯಕ್ಷ ಯೋಗ ಪ್ರಕಾಶ್, ಗೌರವ ಕಾರ್ಯದರ್ಶಿ ಎಸ್. ಸೇತುರಾಮ್, ಸ್ಥಳ: ನಮೋ ಯೋಗ ಭವನ, ರಾಮಾನುಜ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ :** ಸಾಮೂಹಿಕ ಸರಸ್ವತಿ ಪೂಜೆ, ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ, ಮುಖ್ಯ ಅತಿಥಿಗಳು : ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಆರ್.ಎಚ್. ಪವಿತ್ರ, ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಸೌಮ್ಯ ಉಮೇಶ್, ಪ್ರಮೀಳಾ ಭರತ್, ಸ್ಥಳ: ನಮೋ ಯೋಗ ಭವನ, ರಾಮಾನುಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ರಾಘವಾಂತರಂಗ ಸಾಂಸ್ಕೃತಿಕ ಪ್ರತಿಷ್ಠಾನ :** ಶ್ರೀ ಶಾರದಾ ಶರನ್ನವರಾತ್ರೋತ್ಸವದ ಅಂಗವಾಗಿ ಸುಬೇಧಾರ್ ಮೇಜರ್ ಎಲ್.ಎನ್. ಸಿಂಹರವರ ಸ್ಮರಣಾರ್ಥ ಪ್ರಶಸ್ತಿ ಪ್ರದಾನ ಸಾಂಸ್ಕೃತಿಕ ಸಮಾರಂಭ, ಗೋಧೂಳಿ ಲಾಗ ಲಹರಿ, ಚಾಮುಂಡೇಶ್ವರಿ ಉದ್ಯಾನವನ ಉದ್ಘಾಟನಾ ಸಮಾರಂಭ, ಸಂಜೆ 5.30 ರಿಂದ ಕೆ.ವಿ.ಶ್ರೀಧರ್ ಮತ್ತು ಶಿವಮಾದು ಕುಟುಂಬದವರಿಂದ ಗೋಪೂಜೆ, ಸಂಧ್ಯಾರಾಗ, ರಾಘವ್ ಹಾಗೂ ವಿದ್ವಾನ್ ಗೋಪಾಲ್ ಅವರಿಂದ ಸ್ಯಾಕ್ಸೋಫೋನ್ ಕಾರ್ಯಕ್ರಮ, ಚಾಮುಂಡೇಶ್ವರಿ ಉದ್ಯಾನವನ ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಅಧ್ಯಕ್ಷತೆ: ಪ್ರತಿಷ್ಠಾನ ಅಧ್ಯಕ್ಷ ಎಸ್.ಆರ್.ಮಂಜುನಾಥ್, ಉಪಸ್ಥಿತರು : ಶಿಕ್ಷಣ ತಜ್ಞೆ ಡಾ.ಎಲ್.ಸವಿತಾ, ಭಾರತೀಯ ರಿಸರ್ವ್ ಬ್ಯಾಂಕ್‌ನ ಎಂ.ಎನ್.ಮಹೇಶ್, ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಹೆಚ್. ಅನಿಲ್‌ಕುಮಾರ್, ಮುಖ್ಯ ಅತಿಥಿಗಳು: ಪಾಲಿಕೆ ಸದಸ್ಯ ಕೆ.ವಿ. ಶ್ರೀಧರ್, ಪಾಲಿಕೆ ಮಾಜಿ ಸದಸ್ಯ ಶಿವಮಾದು, ಕಾಂಗ್ರೆಸ್ ಮುಖಂಡ ಸಿದ್ದರಾಜು, ಸಂಜೆ 6ಕ್ಕೆ ವಿದುಷಿ ಜಿ.ಎಸ್.ವಾಸವಿ ಅವರಿಂದ ಭರತನಾಟ್ಯ ಕಾರ್ಯಕ್ರಮ, ಸಂಜೆ 6.30ಕ್ಕೆ ಶ್ರೀಮತಿ ಲತಾ ಮಂಜುನಾಥ್ ಅವರಿಂದ ರಾಗ ಲತಾಂಗಿ, ಗೋಧೂಳಿ ರಾಗ ಲಹರಿ ಕಾರ್ಯಕ್ರಮ, ಸ್ಥಳ: ಶ್ರೀ ಚಾಮುಂಡೇಶ್ವರಿ ಬಯಲು ರಂಗ ಮಂಟಪ, ಮಹದೇಶ್ವರ ಬಡಾವಣೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವರ್ಲ್ಡ್ ಸ್ಟಾಂಡರ್ಡ್ ಡೇ ಅಂಗವಾಗಿ ಶ್ರೀನಿವಾಸ್ ಜಮಖಂಡಿ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಸಂಜೆ 6ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಡಾ.ತ್ರಿನೇಶ ಅವರಿಂದ ಜಿಎಸ್‌ಟಿಯ ಪ್ರಾಯೋಗಿಕ ಅಂಶಗಳು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 11.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಲಿಂಗಾಯತಗೌಡ ಮಹಾಸಭಾ:** ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಮಹೋತ್ಸವ ಹಾಗೂ ಸಾಧಕರಿಗೆ ಕಿತ್ತೂರು ರಾಣಿ ಚೆನ್ನಮ್ಮ ಸದ್ಭಾವನಾ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ: ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಶ್ರೀ ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ಮಹಾಸಭಾ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ಅಮ್ಮನಪುರ ಮಲ್ಲೇಶ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ವಿಶೇಷ ಗೀತಾರಾಧನ, 6.30 ಮೈಸೂರು ದಸರಾದಲ್ಲಿ ಇಂದು, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್, ಸಂಕಲನ–ಎಸ್. ಲಕ್ಷ್ಮೀನಾರಾಯಣ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಪದ ಸಂಸ್ಕೃತಿ–ಡಾ.ಬಿ.ವಿ.ವಸಂತಕುಮಾರ್, 7.15 ಭಾವಗೀತೆಗಳು–ವಿಕಾಸ್ ಕೆ.ವಸಿಷ್ಠ, 9.05 ಮೈಸೂರು ಮಹಲುಗಳು–ರೂಪಕ ಸರಣಿ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.00 ದಸರಾ ವಿಶೇಷ ಕಥಾ ಕಾಲಕ್ಷೇಪ–"ಶಾಕಂಬರಿ ಅವತಾರ", ನಡೆಸಿಕೊಡುತ್ತಾರೆ ವಿ.ಮಾಲಿನಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 "ಕನಕ–ಜಾನಕಿ" ತಾಳ ಮದ್ದಲೆಯ ರೂಪಕ ಸರಣಿ, ಪರಿಕಲ್ಪನೆ ಮತ್ತು ಪ್ರಸ್ತುತಿ–ದಿವಾಕರ ಹೆಗಡೆ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ರಾಧಿಕಾ ಐ. ಭಟ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಕೆ.ಎಸ್.ಗೋಪಾಲಕೃಷ್ಣನ್–ವೇಣುವಾದನ, 4.00 ಮಹಿಳಾ ರಂಗ–ಸಖೀ ಸಂವಾದ. ವಿಷಯ–ದಸರಾ ಆಚರಣೆ, ಪ್ರಸ್ತುತಿ–ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ–ಗ್ರಾಮೀಣ ಅಭಿವೃದ್ಧಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರಶಾಂತ್ ಎಸ್.ಚಿನ್ನಪ್ಪನವರ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ರವಿರಾಜ್ ಎನ್. ಶೆಟ್ಟಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 8.00 ರಸಮಂಜರಿ, ವದತು ಸಂಸ್ಕೃತಂ–ಮಾತನಾಡುತ್ತಾರೆ ಟಿ.ಎನ್. ಪ್ರಭಾಕರ್, ವೇದ ಸಂಸ್ಕೃತ–ಮಾತನಾಡುತ್ತಾರೆ ಡಾ.ಎಂ.ಎ.ಆಳ್ವಾರ್, 9.30 ಹೈದಾಬಾದ್ ಸಹೋದರರು–ಹಾಡುಗಾರಿಕೆ, 10.30 ಸವಿನೆನಪು

ಪ್ಯಾಲೆಸ್ತೀನ್ ಅಧ್ಯಕ್ಷರೊಂದಿಗೆ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ; ಗಾಜಾ ಆಸ್ಪತ್ರೆ ದಾಳಿಯಲ್ಲಿ ಸಾವಿಗೀಡಾದವರಿಗೆ ಸಂತಾಪ



ನವದೆಹಲಿ, ಅ.19– ಇಸ್ರೇಲ್–ಹಮಾಸ್ ಸಂಘರ್ಷದ ನಡುವೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಪ್ಯಾಲೆಸ್ತೀನ್ ಪ್ರಾಧಿಕಾರದ ಅಧ್ಯಕ್ಷ ಮಹಮೂದ್ ಅಬ್ಬಾಸ್ ಅವರೊಂದಿಗೆ ಮಾತನಾಡಿದ್ದು, ಗಾಜಾ ಆಸ್ಪತ್ರೆ ದಾಳಿಯಲ್ಲಿ ಸಾವಿಗೀಡಾದವರಿಗೆ ಸಂತಾಪ ಸೂಚಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಪ್ಯಾಲೆಸ್ತೀನ್ ಪ್ರಾಧಿಕಾರದ ಅಧ್ಯಕ್ಷ ಎಚ್.ಇ. ಮಹಮೂದ್ ಅಬ್ಬಾಸ್ ಅವರೊಂದಿಗೆ ಮಾತನಾಡಿದೆ. ಗಾಜಾದ ಅಲ್ ಅಹ್ಲಿ ಆಸ್ಪತ್ರೆಯಲ್ಲಿ ನಾಗರಿಕರು ಸಾವಿಗೀಡಾಗಿದ್ದು, ಅದಕ್ಕೆ ನನ್ನ ಸಂತಾಪ ತಿಳಿಸಿದ್ದೇನೆ ಮತ್ತು ನಾವು ಪ್ಯಾಲೆಸ್ತೀನಿಯನ್ ಜನರಿಗೆ ಮಾನವೀಯ ನೆರವು ಕಳುಹಿಸುವುದನ್ನು ಮುಂದುವರಿಸುತ್ತೇವೆ ಎಂದಿದ್ದಾರೆ. ಭಯೋತ್ಪಾದನೆಯ ಆತಂಕದ ಬಗ್ಗೆಯೂ ಮಾತನಾಡಿದ್ದು, ಈ ಪ್ರದೇಶದಲ್ಲಿ ಹಿಂಸಾಚಾರ ಮತ್ತು ಹದಗೆಡುತ್ತಿರುವ ಭದ್ರತಾ ಪರಿಸ್ಥಿತಿ ಇಸ್ರೇಲ್–ಪ್ಯಾಲೆಸ್ತೀನ್ ವಿಷಯದಲ್ಲಿ ಭಾರತದ ದೀರ್ಘಕಾಲೀನ ತತ್ವದ ನಿಲುವನ್ನು ಪುನರುಚ್ಚರಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷೆ ಪಿ.ರಾಜೇಶ್ವರಿ ಅವರ ಹುಟ್ಟುಹಬ್ಬದ ಹಿನ್ನೆಲೆ ಅವರನ್ನು ಉಪಾಧ್ಯಕ್ಷ ಹೆಚ್.ಹರೀಶ್‌ಕುಮಾರ್, ನಿರ್ದೇಶಕರಾದ ಎ.ಮಂಚಪ್ಪ, ರಾಜಕೀಯ ರವಿಕುಮಾರ್, ಜೆ.ಯೋಗೇಶ್, ಪಿ.ಸವಿತಾ, ಪಡುವಾರಹಳ್ಳಿ ರಾಮಕೃಷ್ಣ, ಕಾರ್ಯದರ್ಶಿ ಹರ್ಷಿತ್‌ಗೌಡ, ಗಾಯತ್ರಿ ಹಾಗೂ ಮಹದೇವ್ ಅಭಿನಂದಿಸಿದರು.

ವಿದ್ಯಾರ್ಥಿನಿಯರಲ್ಲಿ ಉದ್ಯಮಶೀಲತೆ ಉತ್ತೇಜಿಸಲು ಎಂಸಿಸಿಐ ಒಡಂಬಡಿಕೆ



ಮೈಸೂರು,ಅ.19(ಪಿಎಂ)– ವಿದ್ಯಾರ್ಥಿನಿಯರಲ್ಲಿ ಉದ್ಯಮಶೀಲತಾ ಕೌಶಲ್ಯಗಳನ್ನು ಉತ್ತೇಜಿಸುವ ಸಂಬಂಧ ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನ ವಾಣಿಜ್ಯ ಅಭ್ಯಾಸ ವಿಭಾಗದೊಂದಿಗೆ ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಎಂಸಿಸಿಐ) ಒಡಂಬಡಿಕೆ ಮಾಡಿಕೊಂಡಿದೆ.


ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನ ವಾಣಿಜ್ಯ ಅಭ್ಯಾಸದಲ್ಲಿ ಡಿಪ್ಲೊಮಾ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಇಂಟರ್ನ್‌ಶಿಪ್ ಒದಗಿಸುವುದು, ವಿದ್ಯಾರ್ಥಿನಿಯರನ್ನು ಉದ್ಯಮಿಗಳಾಗಲು ಪ್ರೇರೇಪಿಸುವ ಮೂಲಕ ಉದ್ಯಮಶೀಲತಾ ಕೌಶಲ್ಯ ಬೆಳೆಸುವುದು, ಆರ್ಥಿಕ ಸ್ವಾವಲಂಬನೆ ಮತ್ತು ಆವಿಷ್ಕಾರ ಗುಣ ಬೆಳೆಸಿಕೊಳ್ಳಲು ಉತ್ತೇಜಿಸುವುದು ಈ ಒಡಂಬಡಿಕೆಯ ಉದ್ದೇಶವಾಗಿದೆ ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮಹಿಳಾ ವಿಭಾಗದ ಅಧ್ಯಕ್ಷೆ ಟಿ.ಎ. ವಸಂತಕುಮಾರಿ, ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಪಿ.ಎಸ್.ಶಿವಕುಮಾರ್, ವಾಣಿಜ್ಯ ಅಭ್ಯಾಸ ವಿಭಾಗದ ಮುಖ್ಯಸ್ಥೆ ಎಂ.ಸವಿತಾ, ಎಂಸಿಸಿಐ ವ್ಯವಸ್ಥಾಪಕಿ ಬಿ.ಆರ್.ಭಾರತಿ ಒಡಂಬಡಿಕೆ ಕಾರ್ಯಕ್ರಮದಲ್ಲಿ ಹಾಜರಿದ್ದರು.



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವ ಶರಣಬಸಪ್ಪ ದರ್ಶನಾಪುರ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಆಶೀರ್ವಾದ ಪಡೆದರು.

ಮೈಸೂರು ದಸರಾ ಕಾರ್ಯಕ್ರಮ

■ **ಅರಮನೆ ಆವರಣ**



ಸಂಜೆ 5.30ರಿಂದ ಮುಡಿಗುಂಡ ಮೂರ್ತಿ ಮತ್ತು ತಂಡದಿಂದ ಕಾವ್ಯ–ಕುಂಚ–ಗಾಯನ, ಸಂಜೆ 6ರಿಂದ ವಿದುಷಿ ರೇಖಾ ಸುಬ್ರಹ್ಮಣ್ಯ ಮತ್ತು ತಂಡದಿಂದ ಪಂಚ ವೀಣಾವಾದನ, ಸಂಜೆ 7ರಿಂದ ವಿದುಷಿ ಸೋಹಿನಿ ಬೋಸ್ ಬ್ಯಾನರ್ಜಿ ಅವರಿಂದ ತ್ರಿವೇಣಿ (ಒಡಿಸ್ಸಿ–ಕೂಚಿಪುಡಿ–ಭರತನಾಟ್ಯಂ), ರಾತ್ರಿ 8ಕ್ಕೆ ಪಂಡಿತ್ ಕುತ್ಲೇ ಖಾನ್ ಹಾಗೂ ವಿದುಷಿ ರಸಿಕಾ ಶೇಖರ್ ಮತ್ತು ತಂಡದಿಂದ ಜುಗಲ್‌ಬಂದಿ.

■ **ಜಗನ್ಮೋಹನ ಅರಮನೆ ವೇದಿಕೆ**

ಸಂಜೆ 5.30ರಿಂದ ವಿಶ್ವನಾಥ್ ಮತ್ತು ತಂಡದಿಂದ ಜನಪದ ಗಾಯನ, ಸಂಜೆ 6ರಿಂದ ಬೆಂಗಳೂರಿನ ಎನ್.ಎಲ್.ಶಿವಶಂಕರ ಅವರಿಂದ ತಾಳವಾದ್ಯ, ಸಂಜೆ 6.45ರಿಂದ ಚಿತ್ರದುರ್ಗದ ಎಂ.ಪಿ.ನಾಗಶ್ರೀ ಅವರಿಂದ ನೃತ್ಯರೂಪಕ, ಸಂಜೆ 7.30ರಿಂದ ಮೈಸೂರಿನ ರವಿರಾಜ್, ತಂಡದಿಂದ ವಚನ ಗಾಯನ, ರಾತ್ರಿ 8.30ರಿಂದ ಮೈಸೂರಿನ ಶ್ರೀ ಸರ್ವೇಶ್ವರ ನೃತ್ಯ ಕಲಾಮಂದಿರದ ಪಂಕಜಾ ರಾಮಕೃಷ್ಣಯ್ಯ ಅವರಿಂದ ನೃತ್ಯರೂಪಕ

■ **ಕರ್ನಾಟಕ ಕಲಾಮಂದಿರ ವೇದಿಕೆ**

ಸಂಜೆ 6 ರಿಂದ ಮೈಸೂರು ಜಿಲ್ಲಾ ಕಲಾವಿದರುಗಳಿಂದ ಸೋಬಾನೆ ಪದಗಳು, ಸಂಜೆ 6.45 ರಿಂದ ಮೈಸೂರಿನ ಸುರೇಶ್ ಪಿ. ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 7.30 ರಿಂದ ಚಿತ್ರದುರ್ಗದ ಶ್ರೀ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಮಹಾಸ್ವಾಮಿಗಳಿಂದ ವಚನ ಸಂಗೀತ, ರಾತ್ರಿ 8.30 ರಿಂದ ಶ್ರೀ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ ಟ್ರಸ್ಟ್‌ನ ಗೌರಿ ನಾಗರಾಜ್ ಅವರಿಂದ ನೃತ್ಯರೂಪಕ.

■ **ಗಾನಭಾರತಿ ವೇದಿಕೆ**

ಸಂಜೆ 6 ರಿಂದ ಮೈಸೂರಿನ ಗುರುರಾಜ್ ಮತ್ತು ತಂಡದಿಂದ ನಾದಸ್ವರ, ಬಾಗಲಕೋಟೆ ದುರ್ಗಾದೇವಿ ಹಲಗೆ ತಂಡದಿಂದ ಹಲಗೆ ವಾದನ, ಸಂಜೆ 6.45 ರಿಂದ ವೈ.ಬಿ. ಪ್ರಕಾಶ್ ಮತ್ತು ತಂಡದಿಂದ ಪೂಜಾ ಕುಣಿತ, ಮೈಸೂರು ಜಿಲ್ಲಾ ಸೋಬಾನೆ ಪದ ಕಲಾವಿದರುಗಳಿಂದ ಸೋಬಾನೆ ಪದ, ಸಂಜೆ 7.30 ರಿಂದ ಶ್ರವಣ ಬೆಳಗೊಳದ ಸರ್ವೇಶ್ ಜೈನ್ ಅವರಿಂದ ಸುಗಮ ಸಂಗೀತ, ರಾತ್ರಿ 8.30 ರಿಂದ ಅನಂತ್ ವಿಕ್ರಂ ಎನ್. ಮತ್ತು ತಂಡದಿಂದ ದೇವಿ ಆಧಾರಿತ ಕೃತಿಗಳು.

■ **ನಾದಬ್ರಹ್ಮ ಸಂಗೀತಾ ಸಭಾ ವೇದಿಕೆ**

ಸಂಜೆ 6 ರಿಂದ ಸಣ್ಣಸ್ವಾಮಿ ಮತ್ತು ತಂಡದಿಂದ ಡೊಳ್ಳು ಕುಣಿತ, ಸುತ್ತೂರು ಸ್ವಾಮಿ ಮತ್ತು ತಂಡದಿಂದ ಸ್ಯಾಕ್ಸೋಫೋನ್, ಸಂಜೆ 6.30ರಿಂದ ಬೆಂಗಳೂರಿನ ಸುಷ್ಮಾ ಮತ್ತು ತಂಡದಿಂದ ಸಮೂಹ ಶಾಸ್ತ್ರೀಯ ನೃತ್ಯ, ಸಂಜೆ 7ರಿಂದ ಹೆಗ್ಗೋಡು ಉಮಾ ಮಹೇಶ್ವರ್ ಹೆಗಡೆ ಅವರಿಂದ ತಾಳಮದ್ದಳೆ, ಸಂಜೆ 7.30ರಿಂದ ಮೈಸೂರಿನ ಮಂದಸ್ಮಿತ ಕೆ.ಸಿ. ಮತ್ತು ತಂಡದಿಂದ ಭರತನಾಟ್ಯ, ರಾತ್ರಿ 8 ರಿಂದ ಶಿವಮೊಗ್ಗದ ಎನ್.ವಿ.ಲಲಿತ ಅವರಿಂದ ಸಂಪ್ರದಾಯ ಗೀತೆ, ರಾತ್ರಿ 8.30 ರಿಂದ ಬಳ್ಳಾರಿ ಬಸವರಾಜು ಬಲಕುಂದಿ ಅವರಿಂದ ಕೂಚುಪುಡಿ ನೃತ್ಯ.

■ **ಚಿಕ್ಕ ಗಡಿಯಾರ ವೇದಿಕೆ**

ಸಂಜೆ 5.30ರಿಂದ ಲಿಂಗದಹಳ್ಳಿ ವೀರಭದ್ರಗೌಡ ಅವರಿಂದ ಪುರವಂತಿಕೆ, ಸಂಜೆ 6ರಿಂದ ಮೈಸೂರಿನ ಇಂಪು ಇಂಚರ ಸಾಂಸ್ಕೃತಿಕ ಸಂಸ್ಥೆಯಿಂದ ಜಾನಪದ ಗೀತೆ, ಸಂಜೆ 6.45ರಿಂದ ಚಾಮರಾಜನಗರದ ಮಧುರ ಸಂಗಮ ಕಲಾ ವೇದಿಕೆಯ ಆರ್.ಮಂಜುನಾಥ್ ಅವರಿಂದ ತತ್ವಪದ, ರಾತ್ರಿ 7.30ರಿಂದ ಕಡಬ ಶ್ರೀನಿವಾಸ್ ಮತ್ತು ಜಗ್ಗುದಾರ್ ಅವರಿಂದ ಜಾನಪದ ಜಾದು, ರಾತ್ರಿ 8.30ರಿಂದ ರಾಮನಗರದ ಶಿವಪ್ಪ ಮತ್ತು ತಂಡದಿಂದ ಜಾನಪದ ಗಾಯನ.

■ **ಪುರಭವನ ವೇದಿಕೆ**

ಬೆಳಗ್ಗೆ 10.30ರಿಂದ ಬಾಗಲಕೋಟೆ ಜಿಲ್ಲೆ ಜಮಖಂಡಿಯ ಶ್ರೀ ಮಲ್ಲಿಕಾರ್ಜುನ ನಾಟ್ಯ ಸಂಘದಿಂದ ಪೌರಾಣಿಕ ನಾಟಕ : ಹೇಮರೆಡ್ಡಿ ಮಲ್ಲಮ್ಮ, ಮಧ್ಯಾಹ್ನ 3ಕ್ಕೆ ಮೈಸೂರಿನ ಸುಭಾಷ್ ಯುವಕ ಮಿತ್ರ ಮಂಡಳಿಯಿಂದ ನಾಟಕ: ಸದಾರಮೆ, ಸಂಜೆ 6 ರಿಂದ ಚಿಕ್ಕಮ್ಮತಾಯಿ ಕಲಾ ಸಂಘ, ವಡ್ಡರಹುಂಡಿ, ಮಹದೇವಸ್ವಾಮಿ ಮತ್ತು ತಂಡದಿಂದ ಪೌರಾಣಿಕ ನಾಟಕ : ಭಕ್ತಪ್ರಹ್ಲಾದ

■ **ಕಿರುರಂಗಮಂದಿರ ವೇದಿಕೆ**

ಮಧ್ಯಾಹ್ನ 2ರಿಂದ ಬೆಂಗಳೂರು ಎಚ್.ಸಿ.ನಾರಾಯಣಸ್ವಾಮಿ ಅವರಿಂದ ಸುಗಮ ಸಂಗೀತ, ಮಧ್ಯಾಹ್ನ 3ರಿಂದ ಬೆಳಗಾವಿ ಕೆಂಪವ್ವ ಹರಿಜನ ಬಲಭೀಮ ಸಣ್ಣಾಟ ಸಂಘದಿಂದ ನಾಟಕ: ಸಂಗ್ಯಾ ಬಾಳ್ಯಾ, ರಾತ್ರಿ 7ರಿಂದ ಇಂಡಿಯನ್ ಥಿಯೇಟರ್ ಫೌಂಡೇಷನ್‌ನಿಂದ ನಾಟಕ : ಕುಪ್ಪಳ್ಳಿ ಪುಟ್ಟ

■ **ರಮಾಗೋವಿಂದ ರಂಗಮಂದಿರ ವೇದಿಕೆ**

ಸಂಜೆ 5.30 ರಿಂದ ಮಂಡ್ಯದ ನಿಶ್ಚಯ್ ಜೈನ್ ಎಂ.ಪಿ. ಅವರಿಂದ ಸುಗಮ ಸಂಗೀತ, ಸಂಜೆ 6.30 ರಿಂದ ಬಳ್ಳಾರಿ ಹುಲಿಕುಂಟೆರಾಯ ತೊಗಲುಗೊಂಬೆ ಕಲಾ ತಂಡದಿಂದ ತೊಗಲು ಗೊಂಬೆ, ರಾತ್ರಿ 7.30 ರಿಂದ ಕೆ.ಪಿ. ಲಕ್ಷ್ಮಣ್–ಸಂತೋಷ್ ದಿಂಡಗೂಡು ಜಂಗಮ ಕಲೆಕ್ಟಿವ್ ಅವರಿಂದ ನಾಟಕ : ದಕ್ಷ ಕಥಾದೇವಿ ಕಾವ್ಯ

■ **ನಟನ ರಂಗಮಂದಿರ**

ಸಂಜೆ 5ರಿಂದ ಧಾರವಾಡ ರಾಘವ ಕಮ್ಮಾರ್ ಅವರಿಂದ ರಂಗಗೀತೆ, ಸಂಜೆ 6.30ರಿಂದ ಶಿವಮೊಗ್ಗದ ಹೊಂಗಿರಣ ತಂಡದಿಂದ ನಾಟಕ : ಒಂದು ಕಾನೂನಾತ್ಮಕ ಕೊಲೆ, ರಚನೆ : ಶಿವಕುಮಾರ ಮಾವಲಿ, ನಿರ್ದೇಶನ : ಹೊಂಗಿರಣ ಚಂದ್ರು.

■ **ಮಹಾರಾಜ ಕಾಲೇಜು ಮೈದಾನ–ಯುವ ದಸರಾ ಕಾರ್ಯಕ್ರಮ**

ಸಂಜೆ ಸಂಜೆ 7 ರಿಂದ ಆಲ್ ಓಕೆ ಮತ್ತು ತಂಡದಿಂದ ರಸಮಂಜರಿ ಕಾರ್ಯಕ್ರಮ, ರಾತ್ರಿ 9 ರಿಂದ ಸಲೀಂ ಸುಲೈಮಾನ್ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ

ಶ್ರೀಕಂಠೇಶ್ವರ ದೇವಸ್ಥಾನ

■ **ನಂಜನಗೂಡು ವೇದಿಕೆ**

ಸಂಜೆ 6ರಿಂದ ಅರಸೀಕೆರೆ ಶ್ರೀ ಗಣಪತಿ ಚಿಟ್ಟಿಮೇಳ ಜಾನಪದ ಕಲಾ ಸಂಘ, ಪನ್ನಸಮುದ್ರ ಅವರಿಂದ ಚಿಟ್ಟಿಮೇಳ, ಮಂಜಪ್ಪ ಬಲ್ಲೂರು, ಶ್ರೀ ಕಸಬ ಮೈಲಾರಲಿಂಗೇಶ್ವರ ಡೊಳ್ಳಿನ ಯುವಕರ ಸಂಘ, ಹರಿಹರ ಅವರಿಂದ ಡೊಳ್ಳು ಕುಣಿತ, ಸಂಜೆ 6.30ರಿಂದ ಬೆಂಗಳೂರಿನ ವಸುಧೇಂದ್ರ ಎಲ್.ವೈದ್ಯ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಸಂಜೆ 7ರಿಂದ ನೂಪುರ ನೃತ್ಯಾಲಯದ ದಿವ್ಯ ಪ್ರಶಾಂತ್ ಅವರಿಂದ ಭರತನಾಟ್ಯ, ಸಂಜೆ 7.30ರಿಂದ ಮೈಸೂರು ರಾಜೇಶ್ವರಿ ಮತ್ತು ತಂಡದಿಂದ ಸುಗಮ ಸಂಗೀತ, ರಾತ್ರಿ 8.30ರಿಂದ ಡಾ. ಎ.ವಿ. ಸತ್ಯನಾರಾಯಣ ಅವರಿಂದ ನೃತ್ಯರೂಪಕ : ಮಹಾಬುದ್ಧ

ಮಹಿಳಾ ಮತ್ತು ಮಕ್ಕಳ ದಸರಾ–2023

■ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು:** ಬೆಳಗ್ಗೆ 10ರಿಂದ ಮ್ಯಾಜಿಕ್ ಶೋ, ಜಾನಪದ ಜಾದೂ, ರಸಮಂಜರಿ ಕಾರ್ಯಕ್ರಮ, ಬೆಳಗ್ಗೆ 11ಕ್ಕೆ ಅಂಗನವಾಡಿ ಮಕ್ಕಳಿಂದ ವೇಷಭೂಷಣ ಸ್ಪರ್ಧೆ, ಅಂಗನವಾಡಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸರಿಗಮಪ ಲಿಟಲ್ ಚಾಂಪ್ ಖ್ಯಾತಿಯ ಗುರುಪ್ರಸಾದ್ ಅವರಿಂದ ಸಂಗೀತ, ಅಂಗನವಾಡಿ ಕಾರ್ಯಕರ್ತೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮಧ್ಯಾಹ್ನ 2.30 ರಿಂದ ತೃತೀಯಲಿಂಗಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಒನ್ ಮಿನಿಟ್ ಗೇಮ್ಸ್, ಭರತನಾಟ್ಯ, ಸಂಜೆ 5.30ಕ್ಕೆ ಸಮಾರೋಪ, ಸ್ಥಳ: ಜೆ.ಕೆ.ಮೈದಾನ.

ನಾಡಕುಸ್ತಿ ಪಂದ್ಯಾವಳಿ

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ದಸರಾ ಮಹೋತ್ಸವ ಅಂಗವಾಗಿ ನಾಡಕುಸ್ತಿ ಪಂದ್ಯಾವಳಿ, ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕಿಶೋರ, ದಸರಾ ಕಿಶೋರಿ ಮತ್ತು ದಸರಾ ಕುಮಾರ್ ಪ್ರಶಸ್ತಿಗಾಗಿ ಪಂದ್ಯಾವಳಿ, ಸ್ಥಳ: ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ವಸ್ತು ಪ್ರದರ್ಶನ ಆವರಣ, ಬೆಳಗ್ಗೆ 8 ಗಂಟೆಯಿಂದ.

ದಸರಾ ಚಲನ ಚಿತ್ರೋತ್ಸವ

■ **ಐನಾಕ್ಸ್ (ಮಾಲ್ ಆಫ್ ಮೈಸೂರ್) :** ಕನ್ನಡ ಚಿತ್ರಗಳು: ಬೆಳಗ್ಗೆ 10ಕ್ಕೆ–ಎಸ್.ಪಿ.ಸಾಂಗ್ಲಿಯಾನ, ಮಧ್ಯಾಹ್ನ 1ಕ್ಕೆ–ಆಚಾರ ಅಂಡ್ ಕೋ, ಸಂಜೆ 4ಕ್ಕೆ–ಸಪ್ತ ಸಾಗರದಾಚೆ ಎಲ್ಲೋ, ಸಂಜೆ 7ಕ್ಕೆ–ನಟ ಭಯಂಕರ.

■ **ಭಾರತೀಯ ಚಿತ್ರಗಳು:** ಬೆಳಗ್ಗೆ 10.15ಕ್ಕೆ ಸಂಸ್ಕಾರ ಭಾರತ, 1.15ಕ್ಕೆ ಮಾವು ಬೇವು, ಸಂಜೆ 4.15ಕ್ಕೆ ಕೋಳಿ ಎಸ್ರು, ಸಂಜೆ 7.15ಕ್ಕೆ ಒಡನಾಡಿ

■ **ವಿಶ್ವ ಚಿತ್ರಗಳು:** ಬೆಳಗ್ಗೆ 10.30ಕ್ಕೆ ಲೀ ರೀಡೌಟಬಲ್, ಮಧ್ಯಾಹ್ನ 1.30ಕ್ಕೆ ನೋ ಬೇರ್ಸ್, ಸಂಜೆ 4.30ಕ್ಕೆ ಅವಾರ್ಡ್ ಸೆರಮನಿ, ಸಂಜೆ 7.30ಕ್ಕೆ ಬ್ಯಾಟಲ್‌ಶಿಪ್ ಪೊಟೆಂಪ್ಕಿನ್

ಡಿಆರ್‌ಸಿ (ಬಿ.ಎಂ.ಹ್ಯಾಬಿಟೆಟ್ ಮಾಲ್)

■ **ಕನ್ನಡ ಚಿತ್ರಗಳು:** ಬೆಳಗ್ಗೆ 10 ಗಂಟೆಗೆ–ಸವೆನ್ ಸಮುರಾಯ್, ಮಧ್ಯಾಹ್ನ 1 ಗಂಟೆಗೆ ಸತ್ಯ ಹರಿಶ್ಚಂದ್ರ, ಸಂಜೆ 4 ಗಂಟೆಗೆ ಶ್ರೀ ಕೃಷ್ಣ ದೇವರಾಯ, ಸಂಜೆ 7 ಗಂಟೆಗೆ ಪಥೇರ್ ಪಾಂಚಾಲಿ

■ **ಕಿರು ಚಿತ್ರಗಳು:** ಸಂಜೆ 4.15ಕ್ಕೆ 10 ನಿಮಿಷ, ಅಮ್ಮ, ಲಾಕ್

■ **ಆಹಾರ ಮೇಳ:** ಬೆಳಗ್ಗೆ 10ರಿಂದ ರಾತ್ರಿಯವರೆಗೆ, ವೈವಿಧ್ಯಮಯ ತಿಂಡಿ–ತಿನಿಸುಗಳ ಮಾರಾಟ, ಸ್ಥಳ: ಭಾರತ್ ಸ್ಕೌಟ್ಸ್–ಗೈಡ್ಸ್ ಮೈದಾನ.

■ **ವಸ್ತು ಪ್ರದರ್ಶನ:** ಮಧ್ಯಾಹ್ನ 3 ಗಂಟೆಯಿಂದ ರಾತ್ರಿಯವರೆಗೂ, ಸ್ಥಳ: ದೊಡ್ಡಕೆರೆ ಮೈದಾನ

■ **ಫಲಪುಷ್ಪ ಪ್ರದರ್ಶನ:** ಬೆಳಗ್ಗೆ 10ರಿಂದ ರಾತ್ರಿವರೆಗೂ ಸ್ಥಳ: ಕುಪ್ಪಣ್ಣ ಪಾರ್ಕ್, ನಜರ್‌ಬಾದ್.

■ **ಪಾರಂಪರಿಕ ಉಡುಗೆಯಲ್ಲಿ ದಂಪತಿಗಳಿಗಾಗಿ ಪಾರಂಪರಿಕ ಟಾಂಗಾ ಸವಾರಿ :** ಉದ್ಘಾಟನೆ: ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್, ಸ್ಥಳ: ಪುರಭವನ ಆವರಣ, ಬೆಳಗ್ಗೆ 7ಕ್ಕೆ

■ **ವಿಶಿಷ್ಟ ಯೋಗ, ಜೈಲು ಹಕ್ಕಿಗಳಿಗೆ ಯೋಗಾಭ್ಯಾಸ :** ಉದ್ಘಾಟನೆ: ಶಾಸಕ ತನ್ವೀರ್ ಸೇಠ್, ಸ್ಥಳ: ಜಿಲ್ಲಾ ಕಾರಾಗೃಹ, ಬೆಳಗ್ಗೆ 7ಕ್ಕೆ.

■ **ರೈತ ದಸರಾ ಮೆರವಣಿಗೆ :** ಉದ್ಘಾಟನೆ: ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 9.30ಕ್ಕೆ.

■ **ಕೃಷಿ ವಸ್ತುಪ್ರದರ್ಶನ :** ಉದ್ಘಾಟನೆ: ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ಬೆಳಗ್ಗೆ 11ಕ್ಕೆ.

■ **ರೈತ ದಸರಾ ವೇದಿಕೆ ಕಾರ್ಯಕ್ರಮ ಹಾಗೂ ಪ್ರಗತಿಪರ ರೈತರಿಗೆ ಸನ್ಮಾನ ಕಾರ್ಯಕ್ರಮ :** ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸ್ಥಳ: ಜೆ.ಕೆ. ಮೈದಾನ, ಬೆಳಗ್ಗೆ 11.15ಕ್ಕೆ.

ಫಲಪುಷ್ಪಕ್ಕೆ ಮನಸೋತ ಸಚಿವ ಡಾ. ಹೆಚ್.ಸಿ.ಮಹದೇವಪ್ಪ

ಆಹಾರ ಮೇಳದಲ್ಲಿ ಬಗೆಬಗೆ ತಿನಿಸು ಸವಿದ ಸಚಿವರು





ಮೈಸೂರು, ಅ.19(ಪಿಎಂ)– ದಸರಾ ಮಹೋತ್ಸವದ ಅಂಗವಾಗಿ ಕುಪ್ಪಣ್ಣ ಪಾರ್ಕ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಹಮ್ಮಿಕೊಂಡಿರುವ ಆಹಾರ ಮೇಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಗುರುವಾರ ಸಂಜೆ ಭೇಟಿ ನೀಡಿ, ವೀಕ್ಷಿಸಿದರು.

ಮೊದಲಿಗೆ ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡಿದ ಸಚಿವರು, ಗಾಜಿನ ಮನೆಯಲ್ಲಿ ಸಾವಿರಾರು ಹೂಗಳಿಂದ ಅರಳಿರುವ ಇಸ್ರೋ ವಿಜ್ಞಾನಿಗಳ ಸಾಧನೆಯಾದ ಚಂದ್ರಯಾನ–3ರ ಕಲಾಕೃತಿ ಕಂಡು ಮನಸೋತರು. ವಿಕ್ರಮ್ ಲ್ಯಾಂಡರ್ ಮತ್ತು ಪ್ರಜ್ಞಾನ್ ರೋವರ್‌ನ ಹೂವಿನ ಮಾದರಿಗಳನ್ನು ಕಂಡು ಬೆರಗಾದರು. ರಾಜ್ಯ ಸರ್ಕಾರದ ಮಹತ್ವದ ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಜ್ಯೋತಿ ಮತ್ತು ಗೃಹಲಕ್ಷ್ಮೀ ಪ್ರತಿಬಿಂಬಿಸುವ ಕಲಾಕೃತಿಗಳನ್ನು ಕಣ್ತುಂಬಿಕೊಂಡು ಮೆಚ್ಚುಗೆ ಸೂಚಿಸಿದರು. ವಾಕಿಂಗ್ ಪಾಥ್‌ನಲ್ಲಿ ಹೂ ಕುಂಡಗಳಲ್ಲಿ ಜೋಡಿಸಿರುವ ವಿವಿಧ ಬಗೆಯ ಹೂಗಳ ಸೌಂದರ್ಯವನ್ನು ಆಸ್ವಾದಿಸಿದರು.

ಫಲಪುಷ್ಪ ಪ್ರದರ್ಶನದಲ್ಲಿ ರಾಶಿರಾಶಿ ಹೂವುಗಳ ಸೌಂದರ್ಯ ಕಣ್ತುಂಬಿಕೊಂಡು ವರ್ಣರಂಜಿತ ಕುಸುಮಗಳ ಪರಿಮಳಕ್ಕೆ ಪರವಶರಾಗಲು ಕುಪ್ಪಣ್ಣ ಉದ್ಯಾನಕ್ಕೆ ಲಗ್ಗೆ ಇಟ್ಟಿದ್ದ ಜನರು, ಡಾ.ಹೆಚ್.ಸಿ.ಮಹದೇವಪ್ಪ ಅವರೊಡನೆ ಕುಟುಂಬ ಸಮೇತ ಸೆಲ್ಫಿ ಮತ್ತು ಫೋಟೋ ತೆಗೆಸಿಕೊಳ್ಳಲು ಮುಗಿಬಿದ್ದರು. ಸಚಿವರು ನಗುಮೊಗದಿಂದಲೇ ಎಲ್ಲರಿಗೂ ಸಹಕರಿಸಿ ಪೋಸು ನೀಡಿದರು. ಬಳಿಕ ಆಹಾರ ಮೇಳಕ್ಕೆ ಭೇಟಿ ನೀಡಿ, ಎಲ್ಲಾ ಮಳಿಗೆಗಳನ್ನು ವೀಕ್ಷಿಸಿದ ಸಚಿವರು, ವಿವಿಧ ತಿನಿಸುಗಳನ್ನು ಸವಿದರು. ಈ ವೇಳೆ ಆಹಾರ ಮೇಳದ ಆವರಣದಲ್ಲಿ ಸ್ವಚ್ಛತೆ ಕಾಪಾಡಬೇಕು. ಪ್ಲಾಸ್ಟಿಕ್ ವಸ್ತುಗಳ ಬಳಕೆ ಮಾಡುವುದಕ್ಕೆ ಕಡಿವಾಣ ಹಾಕಬೇಕು. ಆವರಣಕ್ಕೆ ಆಗಮಿಸುವ ಆಹಾರ ಪ್ರಿಯರಿಗೆ ಯಾವುದೇ ತೊಂದರೆ ಉಂಟಾಗದಂತೆ ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ದಸರಾ ಉರ್ದು ಕವಿಗೋಷ್ಠಿಯಲ್ಲಿ ಹರಿದ ವಿಶಿಷ್ಟ ಕಾವ್ಯಧಾರೆ....



ಮೈಸೂರು,ಅ.19(ಎಸ್‌ಪಿಎನ್)– ಮೈಸೂರು ರಾಜರು ಕಲೆ ಮತ್ತು ಸಾಹಿತ್ಯಕ್ಕೆ ನೀಡುತ್ತಿದ್ದ ಸಹಕಾರವನ್ನು ಈಗಿನ ದಸರಾ ಮಹೋತ್ಸವದಲ್ಲೂ ಸರ್ಕಾರ ನೀಡಿದೆ. ಈಗಿನ ಸರ್ಕಾರ, ಹಿಂದಿನ ಬಿಜೆಪಿ ಸರ್ಕಾರ ಸೇರಿದಂತೆ ಎಲ್ಲರೂ ಉರ್ದು ಕವಿಗೋಷ್ಠಿಗೆ ಹೆಚ್ಚಿನ ಮಹತ್ವ ನೀಡಿದ್ದಾರೆ ಎಂದು ಶಾಸಕ ತನ್ವೀರ್‌ಸೇಠ್ ಅಭಿಪ್ರಾಯಪಟ್ಟರು.

ಮೈಸೂರಿನ ಖಾಸಗಿ ಕಲ್ಯಾಣಮಂಟದಲ್ಲಿ ಮೈಸೂರು ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 4ನೇ ದಿನದ ಉರ್ದು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದಸರಾದ ಕವಿಗೋಷ್ಠಿಯಲ್ಲಿ ಉರ್ದು ಕವಿಗೋಷ್ಠಿ ವಿಭಿನ್ನ ಕಾರ್ಯಕ್ರಮವಾಗಿದೆ. ಈ ಹಿಂದೆ 2017ರಲ್ಲಿ ಡಾ.ಹೆಚ್.ಸಿ.ಮಹದೇವಪ್ಪ ಅವರು, ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಅರಮನೆ ವೇದಿಕೆಯಲ್ಲಿ ಉರ್ದು ಗಾಯನಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಅಲ್ಲದೆ, ಇಂದಿನ ಕವಿಗೋಷ್ಠಿಗೆ ವಿವಿಧ ರಾಜ್ಯಗಳಿಂದ ಖ್ಯಾತ ಕವಿಗಳು ಆಗಮಿಸಿದ್ದಾರೆ. ಹಾಗಾಗಿ ಈ ಗೋಷ್ಠಿ ವಿಶಿಷ್ಟ ಮತ್ತು ವಿನೂತನವಾದ ಕಾರ್ಯಕ್ರಮವಾಗಿದೆ ಎಂದರು.

ಸಂಪರ್ಕ ಸೇತುವೆ: ಜಿಲ್ಲಾ ಉಸ್ತುವಾರಿ ಸಚಿವ ಡಾಹೆಚ್.ಸಿ.ಮಹದೇವಪ್ಪ ಮಾತನಾಡಿ, ಭಾಷೆ ಎನ್ನುವುದು ಒಂದು ಸಂಪರ್ಕ ಸೇತುವೆ. ಇದನ್ನು ಒಂದು ಜಾತಿ ಮತ್ತು ಧರ್ಮದ ಹೆಸರಿನಲ್ಲಿ ನೋಡಲು ಸಾಧ್ಯವಿಲ್ಲ. ಸಾಹಿತ್ಯಕ್ಕೆ ಭಾಷೆಯ ಅಂತರವಿಲ್ಲ. ಸಾಹಿತ್ಯದ ಅಂಶಗಳು ಯಾವ ಭಾಷೆಯಲ್ಲಿದ್ದರೂ ಅರ್ಥ ಒಂದೇ ಎಂದು ತಿಳಿಸಿದರು.

ಈ ವೇಳೆ ರಜಾ ಮುರಾದ್, ಅಬ್ರಾರ್ ಖಾಶೀಫ್, ಶಫೀಕ್ ಆಬಿದಿ, ಅನಾದೆಹೆಲ್ವಿ, ಶಬಾನ ಶಜ್ನಂ, ಜಮೀಲ್ ಅಸ್ಗರ್ ದೆಹೆಲ್ವಿ, ಅಹಮದ್ ಅಲ್ವಿ, ಖಮರ್ ಸುರೂರ್, ಬಿ.ಆರ್.ಸುನೀಲ್‌ಕುಮಾರ್, ಹಫೀಜ್ ಅಮ್ಜದ್ ಹುಸೇನ್, ವಹೀದ್ ಪಾಷ ಖಾದ್ರಿ, ಡಾ.ಇಫೆಖಾರ್ ಶಕೀಲ್, ಸಯ್ಯದ್ ಅಹಮದ್ ರಾಹೀಲ್, ಡಾ.ಇರ್ಫಾನ್ ರಿಯಾಜ್, ಹಕೀಂ ಸಯೀದ್, ಅಸರ್ ಮೊಮಿನ ಮಿಖ್ತರ್ ಸೂಪಿ, ಆಫ್ಸರ್ ಮೈಸೂರಿ, ಶಫ್ಧರ್ ಕೈಸರ್, ಮುದ್ದಾಸೀರ್ ಅಹಮದ್, ಅಮ್ರಿನ್ ತಾಜ್ ತಮ್ಮ ಸ್ವರಚಿತ ಕವನ ಓದಿದರು.

ವೇದಿಕೆಯಲ್ಲಿ ಪಾಲಿಕೆ ಉಪಆಯುಕ್ತ ಡಾ.ದಾಸೇಗೌಡ, ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಡಾ.ಎಸ್.ವಿಜಯ್‌ಕುಮಾರಿ ಕರಿಕಲ್, ಪ್ರೊ.ಮುಲ್ಲಾಜ್ಫರ್ ಅಜಾದಿ ಹಾಜರಿದ್ದರು.

ಅಪಘಾತದಿಂದ ಮೆದುಳು ನಿಷ್ಕ್ರಿಯವಾಗಿದ್ದ ಮಗನ ಅಂಗಾಂಗ ದಾನ ಮಾಡಿದ ದಂಪತಿ




ಎಸ್.ಆದಿತ್ಯ

ಮೈಸೂರು, ಅ.19(ಆರ್‌ಕೆ)– ರಸ್ತೆ ಅಪಘಾತದಲ್ಲಿ ಮೆದುಳು ನಿಷ್ಕ್ರಿಯವಾಗಿದ್ದ ಮಗನ ಅಂಗಾಂಗ ದಾನ ಮಾಡಿ ಇತರರ ಪ್ರಾಣ ಉಳಿಸಿ ದಂಪತಿ ಮಾನವೀಯತೆ ಮೆರೆದಿದ್ದಾರೆ.

ಹುಣಸೂರು ತಾಲೂಕು, ಶ್ಯಾನುಭೋಗನಹಳ್ಳಿ ಗ್ರಾಮದ ಸೋಮಶೇಖರ್ ಅವರ ಕುಟುಂಬ ತಮ್ಮ ಪುತ್ರ ಎಸ್. ಆದಿತ್ಯನ ಅಂಗಾಂಗಗಳನ್ನು ದಾನ ಮಾಡಿದವರು. ಬಿಳಿಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದ ಆದಿತ್ಯ, ವಾರದ ಹಿಂದೆ ಶ್ಯಾನುಭೋಗನಹಳ್ಳಿ–ರಾಮನಹಳ್ಳಿ ಮಾರ್ಗ ಮಧ್ಯೆ ರಸ್ತೆ ಅಪಘಾತದಿಂದ ತೀವ್ರವಾಗಿ ಗಾಯಗೊಂಡಿದ್ದರು. ಮೈಸೂರಿನ ಕೆವಿಸಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಲಾಗಿತ್ತಾದರೂ, ಮೆದುಳು ನಿಷ್ಕ್ರಿಯವಾಗಿದೆ ಎಂದು ವೈದ್ಯರು ಘೋಷಿಸಿದ್ದರು. ತಕ್ಷಣ ದಂಪತಿ ಹಾಗೂ ಕುಟುಂಬದವರು ಆದಿತ್ಯನ ಅಂಗಾಂಗಗಳನ್ನು ದಾನ ಮಾಡಲು ಸಮ್ಮತಿಸಿದ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತರಾದ ವೈದ್ಯರು, ಅಂಗಾಂಗ ಸಂರಕ್ಷಿಸಿ ಅಗತ್ಯವುಳ್ಳ 6 ಮಂದಿ ರೋಗಿಗಳಿಗೆ ಕಳುಹಿಸಿ ಕೊಟ್ಟು, ಅವರ ಪ್ರಾಣ ಉಳಿಸಿದರು. ಅಂಗಾಂಗ ದಾನ ಮಾಡಿ ಇತರರ ಪ್ರಾಣ ಉಳಿಸಿದ ದಂಪತಿಗೆ ಸತ್ಯ ಎಂಎಎಸ್ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ ಕೃತಜ್ಞತೆ ಸಲ್ಲಿಸಿದ್ದಾರೆ.

ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವಕಾಶ ವಂಚಿತ ಡಾ. ಕಾ.ರಾಮೇಶ್ವರಪ್ಪ ಅಸಮಾಧಾನ



ಮೈಸೂರು, ಅ.19(ಆರ್‌ಕೆ)–ಅರಮನೆ ಆವರಣದ ದಸರಾ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಧಾನ ವೇದಿಕೆಯಲ್ಲಿ ಜಾನಪದ ಕಲಾ ಪ್ರದರ್ಶನ ಮಾಡಲು ಅವಕಾಶ ನೀಡದೆ 'ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ' ಶೀರ್ಷಿಕೆಗೆ ಆಯ್ಕೆ ಮಾಡಿರುವುದಕ್ಕೆ ಇನಿದನಿ ಮಣ್ಣಿ ಮಕ್ಕಳ ಹೊನ್ನ ಪದಗಳ ಬಳಗದ ಅಧ್ಯಕ್ಷರಾದ ನಿವೃತ್ತ ಅಧಿಕಾರಿ ಡಾ.ಕಾ.ರಾಮೇಶ್ವರಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ದಸರಾ ಸಾಂಸ್ಕೃತಿಕ ಉಪಸಮಿತಿ ಕಾರ್ಯದರ್ಶಿಗಳಿಗೆ ತೀಕ್ಷ್ಣವಾಗಿ ಪತ್ರ ಬರೆದಿರುವ ಅವರು, ನಮ್ಮ ಜಾನಪದ ಕಲಾ ತಂಡಕ್ಕೆ ಈವರೆಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾ ಪ್ರದರ್ಶನ ನೀಡಲು ಅವಕಾಶ ನೀಡದಿರುವುದರಿಂದ ಈ ಬಾರಿ ನಿರೀಕ್ಷಿಸಿದ್ದೆನಾದರೂ, ಅರ್ಥಹೀನ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸುವಂತೆ ದಸರಾ ಆರಂಭವಾದ ನಾಲ್ಕು ದಿನಗಳ ಬಳಿಕ ಅಕ್ಟೋಬರ್ 18ರಂದು ಆಹ್ವಾನ ಪತ್ರ ಕಳುಹಿಸಿರುವುದು ಕಲಾವಿದರಿಗೆ ಮಾಡಿದ ಅವಮಾನ ಎಂದು ತಿಳಿಸಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮದಿಂದ ನನ್ನ ಹೆಸರು ಕೈಬಿಟ್ಟಿರುವ ಬಗ್ಗೆ ಲಿಖಿತ ಪತ್ರ ನೀಡಬೇಕು. ಅರಮನೆ ವೇದಿಕೆಯಲ್ಲಿ ಹಲವು ಬಾರಿ ಹಾಡಿದವರಿಗೇ ಪುನಃ ಅವಕಾಶ ನೀಡಿ ನಮಗೆ ತಿರಸ್ಕರಿಸಿದ್ದೀರಿ. ನೀವು ಆಯ್ಕೆ ಮಾಡಿರುವ ಕಲಾವಿದರಿಗೆ ಇರಬಹುದಾದ ಜಾನಪದ ಸಂಗೀತದ ಸಾಮರ್ಥ್ಯ ನಮಗೂ ಇರುವ ಬಗ್ಗೆ ಸಾಬೀತು ಮಾಡುವ ಅಗತ್ಯವಿರುವುದರಿಂದ ಬಹಿರಂಗ ಸಭೆ ಏರ್ಪಡಿಸಿ ಎಂದಿರುವ ಡಾ.ರಾಮೇಶ್ವರಪ್ಪ, ತಪ್ಪಿದಲ್ಲಿ ಅಧಿಕಾರಿಗಳ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವುದಲ್ಲದೆ, ಲೋಕಾಯುಕ್ತ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವುದಾಗಿ ತಿಳಿಸಿದ್ದಾರೆ.

ಸಂಚಿತ್ ಹೆಗಡೆ ಸೋಲೋ ಗಾಯನ; ರಘು ದೀಕ್ಷಿತ್ ಗಿಟಾರ್ ವಾದನಕ್ಕೆ ಹರ್ಷಚಿತ್ತರಾದ ಯುವ ಸಮೂಹ





ಮೈಸೂರು, ಅ.19 (ಎಂಕೆ)– ಸಂಗೀತ ಸುಧೆಯ ಅಬ್ಬರದ ನಡುವೆ ಸಂಚಿತ್ ಹೆಗಡೆ ಸೋಲೋ ಗಾಯನ, ರಘು ದೀಕ್ಷಿತ್ ಗಿಟಾರ್ ವೈಭವ, ಶಿಲ್ಪಾರಾವ್ ಮಸ್ತ್ ಮೋಡಿ ಯುವ ಸಮೂಹವನ್ನು ತಬ್ಬಿಬ್ಬಾಗಿಸಿತು...!

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ 'ಯುವ ದಸರಾ' ನೃತ್ಯ–ಸಂಗೀತ ವೇದಿಕೆಯಲ್ಲಿ ಬೆಳಕಿನ ಚಿತ್ತಾರ, ಧ್ವನಿವರ್ಧಕಗಳಿಂದ ಚಿಮ್ಮಿದ ಸಂಗೀತದ ಅಬ್ಬರದ ನಡುವೆ ಖ್ಯಾತ ಗಾಯಕರಿಬ್ಬರ ಕಂಠಸಿರಿ ಯುವ ಮನಸುಗಳಿಗೆ ಮುದ ನೀಡಿತು.

ಸಂಚಿತ್ ಸೋಲೋ ಮೋಡಿ: ಯುವ ಗಾಯಕ ಸಂಚಿತ್ ಹೆಗಡೆ ಹತ್ತಾರು ಸುಮಧುರ ಹಾಡುಗಳನ್ನು ಹಾಡುವ ಮೂಲಕ ನೆರೆದಿದ್ದವರ ಮನಗೆದ್ದರು. 'ನಡುವೆ ಅಂತರವಿರಲಿ' ಸಿನಿಮಾದ 'ಶಾಕುಂತ್ಲೆ ಸಿಕ್ಕಳು ಸುಮ್‌ಸುಮ್ನೆ ನಕ್ಕಳು', 'ತಾಯಿಗೆ ತಕ್ಕ ಮಗ' ಚಿತ್ರದ 'ಮರಳಿ ಮನಸಾಗಿದೆ ನಿನ್ನ ಹೃದಯಕ್ಕೆ' ಹಾಗೂ 'ಜೇವರ್ಸ್' ಸಿನಿಮಾದ 'ಸಲಾಂ ಸೋಲ್ಜರ್' ಹಾಡನ್ನು ಹಾಡಿ ನೆರೆದಿದ್ದ ಪ್ರೇಕ್ಷಕರಲ್ಲಿ ಜೋಶ್ ತುಂಬಿದರು.

ಸಂಚಿತ್ 'ಮಳೆಯೇ ಮಳೆಯೇ' ಗಾಯನವಂತೂ ಯುವಜನರ ಮನವು ಪ್ರೀತಿಯಲ್ಲಿ ತೇಲುವಂತೆ ಮಾಡಿತು. 'ಜಂಟಲ್ ಮನ್' ಸಿನಿಮಾದ 'ಬೆಳಕಿನ ಕವಿತೆ ಬೆಡಗಿಗೆ ಸೋತೆ' ಹಾಡು ಹಾಡುತ್ತಿದ್ದಂತೆ ಯುವ ಜನರು ಜೋರಾಗಿ ಕೂಗಿ ಸಂಭ್ರಮಿಸಿದರು. ಅದೇ ರೀತಿ 'ಹಾಯಾಗಿದೆ ಎದೆಯೊಳಗೆ' ಹಾಡಂತೂ ಯುವಕರ ಎದೆಯಲ್ಲಿ ಪ್ರೇಮ ಕಾವ್ಯ ಬರೆಯಿತು. 'ಸಲಗ' ಸಿನಿಮಾದ 'ಟೈಟಲ್ ಟ್ರ್ಯಾಕ್ ಹಾಡಿ ರಂಜಿಸಿದ ಸಂಚಿತ್, ಪಡ್ಡೆ ಹೈಕಳ ಮನಗೆದ್ದರು.

ಗುಂಯ್‌ಗುಟ್ಟಿದ್ದ ದೀಕ್ಷಿತ್ ಗಿಟಾರ್..: ನಮಸ್ಕಾರ ಮೈಸೂರು ಎನ್ನುತ್ತಲೇ ಬೆಳಕಿನ ವೇದಿಕೆಗೆ ಆಗಮಿಸಿದ ಖ್ಯಾತ ಗಾಯಕ ರಘು ದೀಕ್ಷಿತ್ ತಮ್ಮ ಕಂಚಿನ ಕಂಠದ ಮೂಲಕ ನೆರೆದಿದ್ದವರು ಹುಚ್ಚೆದ್ದು ಕುಣಿಯುವಂತೆ ಮಾಡಿದರು. ಕೈಯಲ್ಲಿ ಕಂಸಾಳೆ ಹಿಡಿದು 'ಕಂಡೆ ಕಂಡೆ ನಾ ಶಿವನ' ಎಂದು ಹಾಡುತ್ತಲೇ ಭಕ್ತಿ ಸುಧೆ ಆರಿಸಿದ ಅವರು, ಗಿಟಾರ್ ನುಡಿಸಿ ಎಲ್ಲರ ಎದೆಯಲ್ಲೂ ಸಂಗೀತದ ಅಲೆ ಎಬ್ಬಿಸಿದರು.

'ಕೊಡಗಾನ ಕೋಳಿ ನುಂಗಿತ್ತಾ' ಜಾನಪದ ಹಾಡಿಗೆ ರಿದಂ ಸೇರಿಸಿ ಹಾಡಿದ ದೀಕ್ಷಿತ್ ಗಾನಕ್ಕೆ ಸಭಿಕರೆಲ್ಲರು ಶಿಳ್ಳೆ–ಚಪ್ಪಾಳೆ ಮೊಳಗಿಸಿದರು. 'ಲೋಕದ ಕಾಳಜಿ ಮಾಡತ್ತಿಯಾಕ..' ಎನ್ನುತ್ತಿದ್ದಂತೆ ಎಲ್ಲರೂ ಹುಚ್ಚೆದ್ದು ಕುಣಿದರು. ಇಡೀ ಗೀತೆ ಮುಗಿಯುವರೆಗೂ ಕಾಲೇಜು ವಿದ್ಯಾರ್ಥಿಗಳು ಹೆಜ್ಜೆ ಹಾಕುತ್ತಲೇ ಇದ್ದರು. ನಂತರ 'ಜಸ್ಟ್ ಮಾತ್ ಮಾತಲ್ಲಿ' ಚಿತ್ರದ 'ಮುಂಜಾನೆ ಮಂಜಲ್ಲಿ' ಹಾಡನ್ನು ಇಂಪಾಗಿ ಹಾಡುವ ಮೂಲಕ ಸಂಗೀತದ ಹೊಸ ಲೋಕವನ್ನೇ ಸೃಷ್ಟಿಸಿದರು. 'ಗುಡಿಗುಡಿಯಾ ಸೇದಿ ನೋಡೋ', 'ಈ ಜೀವನ ಮೂರೆ ದಿನಾ... ಕಳೆದೊಯ್ತು ಎರಡು ದಿನ.. ಉಳಿದಿರೊದು ಒಂದೇ ದಿನ ಎನ್‌ಲಾ ಮಾಡಿಯಾ' ಹಾಡು ಸೇರಿದಂತೆ ಹತ್ತಾರು ಹಾಡುಗಳನ್ನು ಹಾಡಿ ರಂಜಿಸಿದರು.

ಶಿಲ್ಪಾರಾವ್ ಮೋಡಿ: ಹಿಂದಿ ಹಾಡುಗಳ ಮೂಲಕ ಮೋಡಿ ಮಾಡಿದ ಬಾಲಿವುಡ್ ಗಾಯಕಿ ಶಿಲ್ಪಾರಾವ್ ಯುವ ಮನಸ್ಸುಗಳಿಗೆ ಮೋಡಿ ಮಾಡಿದರು. 'ತುಮ್ ಬಿನ್' ಹಿಂದಿ ಚಿತ್ರದ 'ಕೈಸೆ ಜೀಯ ಜಾಯೆ', 'ಸುಬಾಲನ್ನಾ' ಚಿತ್ರ 'ಇಕ್ ದಿನ್ ಕಬಿ ಜೋ' 'ಲಾಲ್ ಸಿಂಗ್ ಚಡ್ಡಾ' ಚಿತ್ರದ 'ನಾ ಹೋಕೆ ಭಿ' ಸೇರಿದಂತೆ ಹಲವು ಜನಪ್ರಿಯ ಹಿಂದಿ ಹಾಡುಗಳನ್ನು ಹಾಡುವ ಮೂಲಕ ಮಸ್ತ್ ಮನರಂಜನೆ ನೀಡಿದರು. ಇದಕ್ಕೂ ಮುನ್ನ ವಿವಿಧ ನೃತ್ಯ ತಂಡಗಳ ಅಮೋಘ ನೃತ್ಯ ಪ್ರದರ್ಶನ ಯುವ ದಸರಾ ನೃತ್ಯ–ಸಂಗೀತ ವೈಭವಕ್ಕೆ ಮೆರಗು ತಂದಿತು.

ರಾಜ್ಯಮಟ್ಟದ 'ದಸರಾ ಸಿಎಂ ಕಪ್' ಗ್ರೀಕ್ ರೋಮನ್, ಫ್ರೀ ಸ್ಟೈಲ್ ಪುರುಷರ ವಿಭಾಗದಲ್ಲಿ ದಾವಣಗೆರೆ ತಂಡ ಅಗ್ರಮಾನ್ಯ, ಮಹಿಳೆಯರ ವಿಭಾಗದಲ್ಲಿ ಹಳಿಯಾಳ ತಂಡಕ್ಕೆ ಸಮಗ್ರ ಪ್ರಶಸ್ತಿ



ಮೈಸೂರು,ಅ.19(ಎಂಕೆ)–ನಾಡಹಬ್ಬ ಮೈಸೂರು ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ರಾಜ್ಯಮಟ್ಟದ 'ದಸರಾ ಸಿಎಂ ಕಪ್' ಗ್ರೀಕ್ ರೋಮನ್ ಹಾಗೂ ಫ್ರೀ ಸ್ಟೈಲ್ ಕುಸ್ತಿಯ ಪುರುಷರ ವಿಭಾಗದಲ್ಲಿ ದಾವಣಗೆರೆಯ ಕ್ರೀಡಾ ನಿಲಯ ಹಾಗೂ ಮಹಿಳೆಯರ ವಿಭಾಗದಲ್ಲಿ ಹಳಿಯಾಳ ತಂಡ ಸಮಗ್ರ ಪ್ರಶಸ್ತಿ ಪಡೆಯುವ ಮೂಲಕ ಚಾಂಪಿಯನ್ ಆಗಿ ಹೊರಹೊಮ್ಮಿತು.

ನಗರದ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಗುರುವಾರ ನಡೆದ 'ದಸರಾ ಸಿಎಂ ಕಪ್' ಗ್ರೀಕೊ ರೋಮನ್ ಮತ್ತು ಫ್ರೀ ಸ್ಟೈಲ್‌ನ ಹಂತಿಮ ಹಂತದ ಹಣಾಹಣಿಯಲ್ಲಿ ಪುರುಷರ ವಿಭಾಗದ ಗ್ರೀಕೊ ರೋಮನ್ ಕುಸ್ತಿಯಲ್ಲಿ ದಾವಣಗೆರೆ ಕುಸ್ತಿಪಟುಗಳು 6 ಚಿನ್ನ, 6 ಬೆಳ್ಳಿ ಹಾಗೂ 8 ಕಂಚಿನ ಪದಕಗಳನ್ನು ಗೆದ್ದು 390 ಅಂಕಗಳೊಂದಿಗೆ ಸಮಗ್ರ ಪ್ರಶಸ್ತಿ ತಮ್ಮದಾಗಿಸಿಕೊಂಡರೆ, 1 ಚಿನ್ನ, 2 ಬೆಳ್ಳಿ, 2 ಕಂಚಿನೊಂದಿಗೆ 90 ಅಂಕ ಪಡೆದ ಬೆಳಗಾವಿ ರನ್ನರ್ ಅಪ್ ಆಯಿತು. ಹಾಗೆಯೇ ಪುರುಷರ ಫ್ರೀಸ್ಟೈಲ್ ಕುಸ್ತಿಯಲ್ಲೂ ಪಾರುಪತ್ಯ ಮೆರೆದ ದಾವಣಗೆರೆಯ ಕುಸ್ತಿಪಟುಗಳು ಸಮಗ್ರ ಪ್ರಶಸ್ತಿ ಬಾಚಿಕೊಂಡರೆ, ಮಹಿಳೆಯರ ವಿಭಾಗದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಕುಸ್ತಿಪಟುಗಳು 7 ಚಿನ್ನ, 2 ಬೆಳ್ಳಿ, 2 ಕಂಚಿನ ಪದಕ ಗೆದ್ದು, 245 ಅಂಕಗಳೊಂದಿಗೆ ಸಮಗ್ರ ಪಶಸ್ತಿಗೆ ಭಾಜನರಾದರು. ಹಾಗೆಯೇ 4 ಬೆಳ್ಳಿ, 3 ಕಂಚಿನ ಪದಕ ಜಯಿಸಿದ ಬೆಳಗಾವಿ 125 ಅಂಕಗಳೊಂದಿಗೆ 2ನೇ ಸ್ಥಾನ ಪಡೆಯಿತು.

ಫ್ರೀ ಸ್ಟೈಲ್ ಮಹಿಳೆಯರ 55 ಕೆ.ಜಿ ವಿಭಾಗದಲ್ಲಿ ಹಳಿಯಾಳದ ಶ್ವೇತಾ ಅಣ್ಣಿಗೇರಿ ಪ್ರಥಮ, ಬಾಗಲಕೋಟೆಯ ಗೋಪವ್ವ ಎಂ.ಖೋಡ್ಕಿ ದ್ವಿತೀಯ, ಬೆಳಗಾವಿಯ ಸಾನಿಕಾ ವಿಲಾಸ ಪಾಟೀಲ ತೃತೀಯ ಬಹುಮಾನ ಗೆದ್ದರೆ, **53 ಕೆ.ಜಿ ವಿಭಾಗದಲ್ಲಿ** ಹಳಿಯಾಳದ ಟಿ.ಕಾವ್ಯ ಪ್ರಥಮ, ಬಾಗಲಕೋಟೆಯ ಸಾನಿಯಾ ಜಾದವ್ ದ್ವಿತೀಯ, ಬೆಳಗಾವಿಯ ಕಲ್ಯಾಣಿ ಪಿ.ಪಾಟೀಲ್ ತೃತೀಯ, **55 ಕೆ.ಜಿ.ವಿಭಾಗದಲ್ಲಿ** ಬಾಗಲಕೋಟೆಯ ಐಶ್ವರ್ಯ ಕರಿಗಾರ್ ಪ್ರಥಮ, ಹಳಿಯಾಳದ ಕಾವೇರಿ ತಲಗೇರಿ ದ್ವಿತೀಯ, ಮೈಸೂರಿನ ಆರ್.ರಿತೂ ತೃತೀಯ, **57 ಕೆ.ಜಿ ವಿಭಾಗದಲ್ಲಿ** ಹಳಿಯಾಳದ ಗಾಯತ್ರಿ ಸುತಾರ್ ಪ್ರಥಮ, ಬೆಳಗಾವಿಯ ಬಿ.ಜಿ.ಭಾಗ್ಯಶ್ರೀ ದ್ವಿತೀಯ, ದಾವಣಗೆರೆಯ ಜಿ.ರೇಖಾ ತೃತೀಯ, **59 ಕೆ.ಜಿ ವಿಭಾಗದಲ್ಲಿ** ಹಳಿಯಾಳದ ಲಕ್ಷ್ಮಿ ಸಂಜಯ ಪಾಟೀಲ ಪ್ರಥಮ, ಬೆಳಗಾವಿಯ ಸ್ವಾತಿ ರಾಜು ಪಾಟೀಲ ದ್ವಿತೀಯ, ಹಳಿಯಾಳದ ರಕ್ಷಿತಾ ಎಂ.ಸೂರ್ಯವಂಶಿ ತೃತೀಯ, **62 ಕೆ.ಜಿ ವಿಭಾಗದಲ್ಲಿ** ಹಳಿಯಾಳದ ಶಾಲಿನಾ ಎಸ್. ಸಿದ್ದಿ ಪ್ರಥಮ, ದಾವಣಗೆರೆಯ ಸಿ.ಪೂಜಿತಾ ಬಾಯಿ ದ್ವಿತೀಯ, ಗದಗ್‌ನ ತನಿಜಾ ತೃತೀಯ, **65 ಕೆ.ಜಿ ವಿಭಾಗದಲ್ಲಿ** ಹಳಿಯಾಳದ ಪ್ರಿನ್ಸಿತಾ ಪಿ.ಸಿದ್ದಿ ಪ್ರಥಮ, ಬೆಳಗಾವಿಯ ನಿಹಾರಿಕಾ ಎ.ಯಾದವ್ ದ್ವಿತೀಯ ಹಾಗೂ ಪ್ರಾಂಜಲ್ ತೃತೀಯ, **68 ಕೆ.ಜಿ ವಿಭಾಗದಲ್ಲಿ** ಹಳಿಯಾಳದ ಪ್ರತೀಕ್ಷಾ ಭೋವಿ ಪ್ರಥಮ, ಬೆಳಗಾವಿ ಪ್ರಾನ್ಯ ಪಾಟೀಲ ದ್ವಿತೀಯ, ಹಳಿಯಾಳದ ಸುಜಾತಾ ಪಾಟೀಲ ತೃತೀಯ ಹಾಗೂ **76 ಕೆ.ಜಿ ವಿಭಾಗದಲ್ಲಿ** ಶಿವಮೊಗ್ಗದ ಬಿ. ಮೇಘನಾ ಪ್ರಥಮ, ಹಳಿಯಾಳದ ಮನೀಷಾ ಸಿದ್ದಿ ದ್ವಿತೀಯ ಮತ್ತು ಬೆಂಗಳೂರಿನ ಹೆಚ್.ಆರ್.ರಾಧಿಕಾ ತೃತೀಯ ಬಹುಮಾನ ಗೆದ್ದುಕೊಂಡರು.

ಫ್ರೀಸ್ಟೈಲ್ ಪುರುಷರ 57 ಕೆ.ಜಿ ವಿಭಾಗದಲ್ಲಿ ದಾವಣಗೆರೆಯ ಖಾಯಂಉದ್ದೀನ್ ಪ್ರಥಮ, ಬೆಳಗಾವಿ ರೂಪೇಶ್ ರಾಮಲಿಂಗ ದ್ವಿತೀಯ, ದಾವಣಗೆರೆಯ ಹೆಚ್.ಯುವರಾಜ್ ತೃತೀಯ, **61 ಕೆ.ಜಿ ವಿಭಾಗದಲ್ಲಿ** ಹಳಿಯಾಳದ ರೋಹನ್ ಮೋಟೇಶ ಸಿದ್ದಿ ಪ್ರಥಮ, ದಾವಣಗೆರೆಯ ಕೆಂಪಣ್ಣಗೌಡ ದ್ವಿತೀಯ ಮತ್ತು ವಿರೂಪಾಕ್ಷ ತೃತೀಯ, **65 ಕೆ.ಜಿ ವಿಭಾಗದಲ್ಲಿ** ಬೆಳಗಾವಿ ಉಮೇಶ ಯಲ್ಲಪ್ಪ ಪ್ರಥಮ, ದಾವಣಗೆರೆಯ ಅರ್ಜುನ್ ಕೊರವರ ದ್ವಿತೀಯ, ಬೆಳಗಾವಿಯ ಅನಿಲ್ ತಳವಾರ ಮತ್ತು ಬಾಗಲಕೋಟೆಯ ಸಮೀದ್ ಕಲ್ತಿಪ್ಪಿ ತೃತೀಯ, **70 ಕೆ.ಜಿ ವಿಭಾಗದಲ್ಲಿ** ದಾವಣಗೆರೆಯ ಮಹಂತೇಶ ಗದ್ದಿ ಪ್ರಥಮ, ಸರ್ಜಾ ರಾವ್ ಬೋರ್ಗೆ ದ್ವಿತೀಯ, ಹಳಿಯಾಳದ ಅಯಾನ್ ಬಾದ್‌ಷಹಾ ಮತ್ತು ಬೆಳಗಾವಿಯ ಸುಮೇತ ವಿಲಾಸ ಪಾಟೀಲ ತೃತೀಯ, **74 ಕೆ.ಜಿ ವಿಭಾಗದಲ್ಲಿ** ಬೆಳಗಾವಿಯ ಮಹೇಶ್ ಕುಮಾರ್ ಪ್ರಥಮ, ಹಳಿಯಾಳದ ಎನ್.ಮಂಜುನಾಥ ದ್ವಿತೀಯ, ದಾವಣಗೆರೆಯ ಇ.ಶ್ರೀನಿವಾಸ ತೃತೀಯ, **79 ಕೆ.ಜಿ ವಿಭಾಗದಲ್ಲಿ** ಬಾಗಲಕೋಟೆಯ ದರ್ಶನ್ ಪ್ರಥಮ, ಮೈಸೂರಿನ ಹರ್ಷರಾಜ್ ದ್ವಿತೀಯ, ದಾವಣಗೆರೆಯ ಸಚಿನ್ ತೃತೀಯ, **86 ಕೆ.ಜಿ ವಿಭಾಗದಲ್ಲಿ** ಬೆಳಗಾವಿಯ ಮಲ್ಲೇಶ ಎಸ್.ಮೇತ್ರಿ ಪ್ರಥಮ, ದಾವಣಗೆರೆಯ ಬಸವರಾಜ ಪಾಟೀಲ ದ್ವಿತೀಯ, ಬಾಗಲಕೋಟೆಯ ಗೋಪಾಲ್ ಕೋಳಿ ತೃತೀಯ, **92 ಕೆ.ಜಿ ವಿಭಾಗದಲ್ಲಿ** ಬಾಗಲಕೋಟೆಯ ಪಾಂಡುರಂಗ ಪ್ರಥಮ ಮತ್ತು ರಮೇಶ್ ದ್ವಿತೀಯ, **97 ಕೆ.ಜಿ ವಿಭಾಗದಲ್ಲಿ** ಬಾಗಲಕೋಟೆಯ ಬಾಪೂಸಾಹೇಬ ಶಿಂಧೆ ಪ್ರಥಮ, ಹಾಸನದ ಎನ್.ಜೆ.ಪ್ರಜ್ವಲ್ ದ್ವಿತೀಯ, **97 ಕೆ.ಜಿ ಮೇಲ್ಪಟ್ಟ ವಿಭಾಗದಲ್ಲಿ** ಬೆಳಗಾವಿಯ ಎಸ್. ಶಿವಾನಂದ ಎಸ್.ಅಂಬಿ ಪ್ರಥಮ ಹಾಗೂ ಕೆ.ಪೃಥ್ವಿರಾಜ ದ್ವಿತೀಯ ಬಹುಮಾನ ಜಯಿಸಿದರು.

ಪುರುಷರ ಗ್ರೀಕೊ ರೋಮನ್: 55 ಕೆ.ಜಿ ವಿಭಾಗದಲ್ಲಿ ದಾವಣಗೆರೆ ಲಿಂಗರಾಜ್ ಪ್ರಥಮ, ಬಾಗಲಕೋಟೆ ಲೋಕಪ್ಪ ತೋವಾಸ್ಕರ ದ್ವಿತೀಯ, ದಾವಣಗೆರೆಯ ಡಿ.ಸಿ.ಕೀರ್ತನ್ ಮತ್ತು ಲೋಹಿತ್ ಕುಮಾರ್ ತೃತೀಯ, **60 ಕೆ.ಜಿ ವಿಭಾಗದಲ್ಲಿ** ಹಳಿಯಾಳದ ಸುಲೇಮಾನ್ ಸಾಬ್ ಪ್ರಥಮ, ದಾವಣಗೆರೆ ಆಂಜನೇಯ ದ್ವಿತೀಯ, ಬೆಳಗಾವಿ ವಿಕಾಸ್ ಪಾಟೀಲ ಮತ್ತು ದಾವಣಗೆರೆ ಪಿ.ಮಂಜುನಾಥ ತೃತೀಯ, **63 ಕೆ.ಜಿ ವಿಭಾಗದಲ್ಲಿ** ಬೆಳಗಾವಿಯ ಭರತ್ ಕುಡ್ಡೇ ಮನಿ ಪ್ರಥಮ, ಬಾಗಲಕೋಟೆ ಈಶ್ವರ್ ಡಾಂಗಿ ದ್ವಿತೀಯ, ಹಳಿಯಾಳದ ಶಹೀದ್ ದೇವಕರ್ ತೃತೀಯ, **67 ಕೆ.ಜಿ ವಿಭಾಗದಲ್ಲಿ** ಹಳಿಯಾಳದ ಸಂದೀಪ್ ಹಳದಿಕರ್ ಪ್ರಥಮ, ದಾವಣಗೆರೆಯ ಕೆಂಚು ದ್ವಿತೀಯ ಹಾಗೂ ಕೆ.ಪಿ.ಪರಮೇಶ ತೃತೀಯ, **70 ಕೆ.ಜಿ ವಿಭಾಗದಲ್ಲಿ** ಹಳಿಯಾಳದ ರಾಮಣ್ಣ ಪ್ರಥಮ, ದಾವಣಗೆರೆಯ ಜಿ.ದಾನೇಶ ದ್ವಿತೀಯ ಹಾಗೂ ಭೀಮಲಿಂಗೇಶ್ವರ ತೃತೀಯ, **77 ಕೆ.ಜಿ ವಿಭಾಗದಲ್ಲಿ** ಧಾರಾವಾಡ ಪರಮಾನಂದ ಪ್ರಥಮ, ಬೆಳಗಾವಿ ಮಹೇಶ ಕೃಷ್ಣ ದ್ವಿತೀಯ, ದಾವಣಗೆರೆ ವಿ.ಚಂದ್ರು ತೃತೀಯ, **82 ಕೆ.ಜಿ ವಿಭಾಗದಲ್ಲಿ** ಧಾರವಾಡದ ರಫೀಕ್ ಹೊಳಿ ಪ್ರಥಮ, ದಾವಣಗೆರೆ ಎನ್.ಹನುಮಂತ ದ್ವಿತೀಯ, ಧಾರವಾಡದ ಆರ್. ವೈ.ಕೃಷ್ಣ ತೃತೀಯ, 87 ಕೆ.ಜಿ ವಿಭಾಗದಲ್ಲಿ ಬಾಗಲಕೋಟೆ ಧಾರೆಪ್ಪ ಹೊಸಮನಿ ಪ್ರಥಮ, ಬೆಳಗಾವಿಯ ಪಾರ್ಥ ಕೆಪಾಟೀಲ ದ್ವಿತೀಯ ಹಾಗೂ ಸೂರಜ್ ಪಾಟೀಲ ತೃತೀಯ, 97 ಕೆ.ಜಿ ವಿಭಾಗದಲ್ಲಿ ದಾವಣಗೆರೆಯ ವಿನಾಯಕ ಪ್ರಥಮ, ಶ್ರೀಶೈಲ ಯಲಶೆಟ್ಟಿ ದ್ವಿತೀಯ ಹಾಗೂ ಮಲ್ಲಪ್ಪ ಕಲ್ಲಪ್ಪ ತೃತೀಯ ಬಹುಮಾನ ಗೆದ್ದರೆ, 97 ಕೆ.ಜಿ ಮೇಲ್ಪಟ್ಟ ವಿಭಾಗದಲ್ಲಿ ದಾವಣಗೆರೆಯ ಮಲ್ಲಪ್ಪ ಪಾಟೀಲ ಪ್ರಥಮ, ಕೆಂಚಪ್ಪ ದ್ವಿತೀಯ ಹಾಗೂ ಅರುಣ್ ಪಾಟೀಲ ತೃತೀಯ ಬಹುಮಾನ ಪಡೆದರು.

ಇಂದಿನಿಂದ ಟೈಟಲ್ ಹಣಾಹಣಿ...!

ನಾಳೆ(ಅ.20)ಯಿಂದ ದಸರಾ ಕಿಶೋರ, ದಸರಾ ಕೇಸರಿ, ದಸರಾ ಕಂಠೀರವ, ದಸರಾ ಕಿಶೋರಿ ಹಾಗೂ ಮೈಸೂರು ವಿಭಾಗ ಮಟ್ಟದ ಮೈಸೂರು ದಸರಾ ಕುಮಾರ್ ಟೈಟಲ್ ಪಂದ್ಯಗಳು ನಡೆಯಲಿದ್ದು, ಅ.21ರಂದು ಫೈನಲ್ ಪಂದ್ಯಗಳು ನಡೆಯಲಿವೆ. ಈಗಾಗಲೇ ದಸರಾ ಕುಮಾರ್ ಟೈಟಲ್‌ನ ಎಲ್ಲಾ ಲೀಗ್ ಪಂದ್ಯಗಳು ಮುಗಿದಿದ್ದು, ಫೈನಲ್ ಪಂದ್ಯ ಬಾಕಿ ಇದೆ.

ಅರಮನೆ ಅಂಗಳದಲ್ಲಿ ವಾದ್ಯ ಸಂಗೀತದ ಹೊನಲು

- ಗಾನ ಸುಧೆ ಹರಿಸಿದ ವಿಶೇಷ ಸಹೋದರಿಯರು
- ನೃತ್ಯರೂಪಕದಲ್ಲಿ ಅನಾವರಣಗೊಂಡ ದೃಶ್ಯ ಕಾವ್ಯ



ಮೈಸೂರು ಅರಮನೆ ಆವರಣದಲ್ಲಿ ಗುರುವಾರ ಸಂಜೆ ಮಹಿಷಾಸುರ ಮರ್ದಿನಿ ನೃತ್ಯರೂಪಕ ಪ್ರೇಕ್ಷಕರ ಗಮನ ಸೆಳೆಯಿತು.



ಹುಟ್ಟು ಅಂಧತ್ವ ಸಹೋದರಿಯರಾದ ವಿದುಷಿ ಡಾ.ಬಿ.ಎನ್.ಮಂಜುಳಾ ಮತ್ತು ವಿದುಷಿ ಬಿ.ಎನ್.ನಾಗರತ್ನ, ಇತರ ಕಲಾವಿದರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.



ಸ್ಯಾಕ್ಸೋಫೋನ್ ಫ್ಯೂಷನ್ ಸಂಗೀತ ಕಾರ್ಯಕ್ರಮ.

ಮೈಸೂರು,ಅ.19(ಪಿಎಂ)– ಹುಟ್ಟು ಅಂಧತ್ವದ ಸಹೋದರಿಯರ ಶಾಸ್ತ್ರೀಯ ಸಂಗೀತ ಗಾಯನದ ಸಮ್ಮೋಹನ... ಸ್ಯಾಕ್ಸೋಫೋನ್ ಫ್ಯೂಷನ್ ಸಂಗೀತದ ಸಂಚಲನ... ನೃತ್ಯರೂಪಕದ ದೃಶ್ಯ ಕಾವ್ಯ... ಮೈಸೂರು ಅರಮನೆ ವೇದಿಕೆಯಲ್ಲಿ ಕಂಡುಬಂದ ಸಾಂಸ್ಕೃತಿಕ ವೈಭವವಿದು.

ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಇಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ 5ನೇ ದಿನವಾದ ಗುರುವಾರ ಸಂಜೆ ಇಂತಹ ಸಂಗೀತ–ನೃತ್ಯದ ಸೊಬಗು ಮೂಡಿಬಂದು ಸಭಿಕರ ಮನ ಮುದಗೊಳಿಸಿ, ಸಂಭ್ರಮಿಸುವಂತೆ ಮಾಡಿತು. ಮೊದಲಿಗೆ ನಡೆದ ಸಂಗೀತ ಗಾಯನ ಕಾರ್ಯಕ್ರಮದಲ್ಲಿ ಹುಟ್ಟು ಅಂಧತ್ವ ಸಹೋದರಿಯರಾದ ವಿದುಷಿ ಡಾ.ಬಿ.ಎನ್. ಮಂಜುಳಾ ಮತ್ತು ವಿದುಷಿ ಬಿ.ಎನ್. ನಾಗರತ್ನ ತಮ್ಮ ಶಾಸ್ತ್ರೀಯ ಸಂಗೀತದ ಗಾಯನದ ಮೂಲಕ ಶೋತೃಗಳನ್ನು ಸಂಗೀತದ ಸುಧೆಯಲ್ಲಿ ತೇಲಿಸಿದರು.

ಪ್ರತಿಭೆಗೆ ಅಂಗವೈಕಲ್ಯವಿಲ್ಲವೆಂದು ತಮ್ಮ ಸಂಗೀತದ ಸಾಧನೆ ಮೂಲಕ ಸಾಬೀತುಪಡಿಸಿದ ಈ ಸಹೋದರಿಯರು ನಂಜನಗೂಡಿನವರು. ಇವರು ತಮ್ಮ ಸಂಗೀತ ಕಛೇರಿಗಳ ಮೂಲಕ ಜನ ಮನ್ನಣೆ ಗಳಿಸಿದ್ದಾರೆ. ಅಂತೆಯೇ ಅರಮನೆ ವೇದಿಕೆಯಲ್ಲಿ ಇವರು ನಡೆಸಿಕೊಟ್ಟ ಶಾಸ್ತ್ರೀಯ ಗಾಯನಕ್ಕೆ ಸಭಿಕರು ತಲೆದೂಗಿದರು. ಜಯಚಾಮರಾಜ ಒಡೆಯರ್ ಅವರ ಕೃತಿಯ 'ಕಮಲಾಂಬಿಕೆ..' ಗೀತೆ ಸಾದರಪಡಿಸಿ, ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದ ಇವರು, ಬಳಿಕ 'ಶ್ರೀ ಚಾಮುಂಡೇಶ್ವರಿ...' ಗೀತೆಯ ಮೂಲಕ ತಾಯಿ ಚಾಮುಂಡಿಯನ್ನು ಸ್ತುತಿಸಿ, ಭಕ್ತಿಭಾವ ಮೂಡಿಸಿದರು. ಕನ್ನಡದ ಹರಿದಾಸ ಪಂಥದ ಪ್ರಮುಖರಾದ ವಾದಿರಾಜರ 'ತಾಳುವಿಕೆಗಿಂತ ತಪವು ಇಲ್ಲ... ಕೇಳಬಲ್ಲವರಿಗೆ ಹೇಳುವೆನು ಸೊಲ್ಲ... ಕಷ್ಟ ಬಂದರೆ ತಾಳು ಕಂಗೆಡದೆ...' ಗೀತೆಯ ಮೂಲಕ ತಾಳ್ಮೆಯಿಂದಿರಬೇಕೆಂಬ ಸಂದೇಶದ ಮಹತ್ವವನ್ನು ಅನಾವರಣಗೊಳಿಸಿದರು. ಪುರಂದರ ದಾಸರ ರಚನೆಯ 'ಪಾಲಿಸೇ ಎನ್ನ ಶ್ರೀ ಮಹಾಲಕ್ಷ್ಮೀ...' ಗೀತೆಯನ್ನು ಪ್ರಸ್ತುತಪಡಿಸಿದರು.

ಇವರಿಗೆ ಪಕ್ಕವಾದ್ಯದಲ್ಲಿ ಸಹಕಾರ ನೀಡಿ, ಮೃದಂಗ ಬಾರಿಸಿದ ಕುಮಾರ್ ಮತ್ತು ವಯೋಲಿನ್ ನುಡಿಸಿದ ಚಿಕ್ಕಣ್ಣಾಚಾರ್ ಸಹ ಅಂಧತ್ವ ಹೊಂದಿದ್ದು, ಇವರೂ ತಮ್ಮ ಕಲಾಕೌಶಲ್ಯ ಮೆರೆದು ವಾದ್ಯ ಸಂಗೀತದ ಇಂಪನ್ನು ಸೂಸಿದರು. ಅಲ್ಲದೆ, ಘಟಂ ಬಾರಿಸಿದ ಜಗದೀಶ್ ಮತ್ತು ಗಾಯನದಲ್ಲಿ ಅಂಧ ಸಹೋದರಿಯರಿಗೆ ಸಹಕಾರ ನೀಡಿದ ಅವರ ಶಿಷ್ಯೆ ಅನನ್ಯ ತಮ್ಮ ಕಲಾಕೌಶಲ್ಯ ಮೆರೆದು ಮೋಡಿ ಮಾಡಿದರು.

ವಾದ್ಯ ಸಂಗೀತದ ಹೊನಲು: ಸ್ಯಾಕ್ಸೋಫೋನ್ ಫ್ಯೂಷನ್ ಸಂಗೀತವು ತನ್ನ ಮಾಧುರ್ಯದ ಮಿಡಿತದ ಮೂಲಕ ಸಭಿಕರ ಮನಸೆಳೆಯಿತು. ವಿದ್ವಾನ್ ಮೈಸೂರು ಹರೀಶ್ ಪಾಂಡವ್ ಅವರು ಸ್ಯಾಕ್ಸೋಫೋನ್ ನುಡಿಸಿದ ವೈಖರಿಗೆ ಸಭಿಕರು ಮನಸೋತರು. ಇದರೊಂದಿಗೆ ಇನ್ನಿತರ ವಾದ್ಯ ಸಂಗೀತವೂ ಸಮ್ಮಿಲನಗೊಂಡು ಸಂಗೀತದ ಹೊನಲು ಭೋರ್ಗರೆಯುತ್ತಾ ಹರಿಯಿತು. ಸುಮಾರು ಒಂದು ತಾಸು ವಿವಿಧ ರಾಗ–ತಾಳಗಳೂ ವಾದ್ಯ ಸಂಗೀತದಲ್ಲಿ ಮೂಡಿಬಂದು ಸಭಿಕರನ್ನು ಸಂಗೀತದ ಅಲೆಯಲ್ಲಿ ತೇಲಿಸಿತು.

ಅಂದಿನ ಮೈಸೂರು ಆಸ್ಥಾನದ ರಚನಕಾರ ಮೈಸೂರು ವಾಸುದೇವಚಾರ್ಯರ ರಚನೆಯ ರಾಗ–ತಾಳಗಳು ಸ್ಯಾಕ್ಸೋಫೋನ್ ಮಾತ್ರವಲ್ಲದೆ, ವಿವಿಧ ವಾದ್ಯ ಸಂಗೀತದಲ್ಲಿ ಮೂಡಿಬಂದಿತು. ಜಯಚಾಮರಾಜ ಒಡೆಯರ್ ಅವರ ರಚನೆಯ ಗಾನ ಲಹರಿಯೂ ಹರಿಯಿತು.

ವಯೋಲಿನ್‌ನಲ್ಲಿ ವಿದ್ವಾನ್ ಹೆಚ್.ಎನ್. ಭಾಸ್ಕರ್, ಮೃದಂಗದಲ್ಲಿ ವಿ.ರವಿಶಂಕರ್, ತಬಲದಲ್ಲಿ ವಿ.ರಾಜೇಂದ್ರ, ಕೀ–ಬೋರ್ಡ್‌ನಲ್ಲಿ ಸಾಲೋಮನ್ ಮತ್ತು ಡ್ರಮ್‌ನಲ್ಲಿ ಎಂ.ಎಸ್.ಮಂಜುನಾಥ್ ತಮ್ಮ ಸ್ಯಾಕ್ಸೋಫೋನ್ ಫ್ಯೂಷನ್ ಸಂಗೀತ ಸಮ್ಮೇಳನದಲ್ಲಿ ಸಭಿಕರು ಮಂತ್ರಮುಗ್ಧರಾಗಿ ಮೈಮರೆಯುವಂತೆ ಮಾಡಿದರು.

ಬಳಿಕ ನಡೆದ 'ಶ್ರೀ ರಾಜರಾಜೇಶ್ವರಿ' ಶೀರ್ಷಿಕೆಯ ನೃತ್ಯರೂಪಕದಲ್ಲಿ ದೃಶ್ಯ ಕಾವ್ಯವೇ ಮೂಡಿ ಪ್ರೇಕ್ಷಕರು ಮನಸೂರೆಗೊಂಡರು. ಕರ್ನಾಟಕ ಕಲಾಶ್ರೀ ವಿದ್ಯಾ ರವಿಶಂಕರ್ ಮತ್ತು ತಂಡ ನಡೆಸಿಕೊಟ್ಟ ಈ ನೃತ್ಯರೂಪಕವು ಸಭಿಕರ ಮನ ಗೆಲ್ಲುವಲ್ಲಿ ಯಶಸ್ವಿಯಾಯಿತು. ರಾಜರಾಜೇಶ್ವರಿ ದೇವಿ ದರ್ಶನ, ಸಪ್ತಮಾತೃಕೆ ದೇವಿಯರ ದೃಶ್ಯಾವಳಿ ನೃತ್ಯರೂಪಕದಲ್ಲಿ ಮೂಡಿಬಂದು ಸಭಿಕರಲ್ಲಿ ಭಕ್ತಿಭಾವ ಉಂಟು ಮಾಡಿದವು. ಅಂತಿಮವಾಗಿ ಅನಾವರಣಗೊಂಡ 'ಮಹಿಷಾಸುರ ಮರ್ದಿನಿ' ರೂಪಕವು ಪ್ರೇಕ್ಷಕರ ಗಮನ ಸೆಳೆಯಿತು. ನಂತರ ನಡೆದ ವಯೋಲಿನ್ ವಾದನ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತವು ಶೋತೃಗಳನ್ನು ಸಂಗೀತದ ಸಾಗರದಲ್ಲಿ ತೇಲಿಸಿತು.

ನಕ್ಕರೆ ಅದೇ ಸ್ವರ್ಗ

ಪತ್ನಿ : (ಮನೆಗೆ ತಡವಾಗಿ ಬಂದಿದ್ದರಿಂದ ಕೆಂಡಕಾರಿ ರೇಗಿದಾಗ ಗಂಡ ಶಾಂತವಾಗಿ ಆರಿದ ಊಟದ ತಟ್ಟೆಯನ್ನು ತನ್ನ ತಲೆ ಮೇಲೆ ಇಟ್ಟಾಗ): "ಇದೇನು ಮಾಡ್ತಿದ್ದೀರಾ?"

ಗಂಡ : "ಅನ್ನ ಸಾಂಬಾರ್ ತಣ್ಣಗಾಗಿದೆ, ಬಿಸಿ ಮಾಡಿಕೊಳ್ತಿದ್ದೀನಿ".

ಮೈಸೂರು ಮಿತ್ರ

ಶುಕ್ರವಾರ, 20 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕಾಲ ನಿನ್ನ ಜೀವನದ ನಾಣ್ಯ, ನಿನ್ನಲ್ಲಿರುವುದು ಅದೊಂದೆ ನಾಣ್ಯ, ಅದನ್ನು ಹೇಗೆ ಖರ್ಚು ಮಾಡುವೆ ಎಂಬುದನ್ನು ನೀನೇ ನಿರ್ಧರಿಸಬಲ್ಲೆ. – ಕಾಲ್‌ಸಾಂಡ್‌ಬರ್ಗ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತೀರಿದ ಅಡುಗೆ ತಿರುಗಿ ಬಯಸಿದರೆ ಬಂದೀತೆ?

ನಿಮ್ಮ ಪತ್ರಗಳು

ಕೆಬಿಜಿ ಪರಿಶ್ರಮಕ್ಕೆ ಸಿಕ್ಕ ಫಲವೇ ಸರಿ

ಮಾನ್ಯರೆ,



ಪಬ್ಲಿಕ್ ಟಿವಿಯ ಮುಖ್ಯಸ್ಥರಾದ ರಂಗನಾಥ್‌ರವರು, ಕಳೆದ ಬುಧವಾರ (ಅ.18) ರಾತ್ರಿ 9.00 ಗಂಟೆಯ ನ್ಯೂಸ್‌ನಲ್ಲಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ, ಸಂಪಾದಕರಾದ ಕೆ.ಬಿ. ಗಣಪತಿ ಅವರ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿ, ಈ ಪದವಿ ಅವರ ಪರಿಶ್ರಮಕ್ಕೆ ದೊರೆತ ಫಲ. ಅವರಿಗೆ ಈ ಡಾಕ್ಟರೇಟ್ ಪದವಿ ಎಂದೋ ಸಿಗಬೇಕಿತ್ತು. ಈಗಲಾದರೂ ದೊರೆತಿದ್ದು ಸಂತಸದ ವಿಚಾರ ಎಂದರು.

ಈಗಿನ ದಿನಗಳಲ್ಲಿ ದಿನಪತ್ರಿಕೆ ನಡೆಸುವುದೇ ದೊಡ್ಡ ಸಾಹಸದ ಕೆಲಸ. ಕೆಲವು ದೊಡ್ಡ–ದೊಡ್ಡ ಉದ್ದಿಮೆದಾರರೇ ಈ ಕೆಲಸಕ್ಕೆ ಕೈ ಹಾಕಿ, ಕೈ ಸುಟ್ಟುಕೊಂಡು ಪತ್ರಿಕೆಯನ್ನೇ ನಿಲ್ಲಿಸಿ ಬಿಟ್ಟಿದ್ದಾರೆ. ಮತ್ತೆ ಕೆಲವರು ಇಂದಿಗೂ ಸಾಲಗಾರರಾಗಿದ್ದಾರೆ. ಇಂತಹ ಸನ್ನಿವೇಶದಲ್ಲಿ ಕಳೆದ 45 ವರ್ಷಗಳಿಂದ 'ಸ್ಟಾರ್ ಆಫ್ ಮೈಸೂರ್' ಮತ್ತು 43 ವರ್ಷಗಳಿಂದ 'ಮೈಸೂರು ಮಿತ್ರ' ಪತ್ರಿಕೆಗಳ ನಡೆಸಿಕೊಂಡು ಬರುತ್ತಿರುವುದು ಒಂದು ದೊಡ್ಡ ಸಾಹಸದ ಕೆಲಸವೇ ಸರಿ.

ಈಗಲೂ ಸಹ ಸಂಜೆ ವೇಳೆ ಸಿಗುವ ಇಂಗ್ಲೀಷ್‌ನ ಏಕೈಕ ಪತ್ರಿಕೆ ಎಂದರೆ 'ಸ್ಟಾರ್ ಆಫ್ ಮೈಸೂರ್' ಮಾತ್ರ. ಹಳೆ ಮೈಸೂರು ಭಾಗದಲ್ಲಿ ಅತೀ ಹೆಚ್ಚು ಜನಪ್ರಿಯ ದಿನಪತ್ರಿಕೆ 'ಮೈಸೂರು ಮಿತ್ರ'. ಈ ಎರಡೂ ಪತ್ರಿಕೆಗಳನ್ನು ಇಷ್ಟು ವರ್ಷಗಳ ಕಾಲ ಇವರು ನಿಭಾಯಿಸಿಕೊಂಡು ಬರುತ್ತಿರುವುದು ಒಂದು ಮಹಾನ್ ಸಾಹಸ ಕಥೆ. ಕೆಬಿಜಿ ಅವರು ನೂರ್ಕಾಲ ಬಾಳಲಿ.

– ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ, ಮೈಸೂರು.

ದಸರಾ ರಜೆ ಮುಂದುವರಿಸಿ

ಮಾನ್ಯರೆ,

2023– 24 ನೇ ಸಾಲಿನ ಸರ್ಕಾರಿ ಅನುದಾನಿತ, ಅನುದಾನ ರಹಿತ ಶಾಲೆಗಳ ವಾರ್ಷಿಕ ವೇಳಾಪಟ್ಟಿ ಪ್ರಕಟಗೊಂಡಿದ್ದು, ದಸರಾ ರಜೆ ಅಕ್ಟೋಬರ್ 8 ರಿಂದ ಅಕ್ಟೋಬರ್ 24ರ ವರೆಗೆ ಇರುತ್ತದೆ. ಆದರೆ ಕೊರೊನಾ ನಂತರದಲ್ಲಿ ಶಾಲೆಗಳ ರಜಾ ಅವಧಿಯನ್ನು ವರ್ಷದಿಂದ ವರ್ಷಕ್ಕೆ ಕಡಿತಗೊಳಿಸಲಾಗುತ್ತಿದೆ. ಇದರಿಂದ ಮಕ್ಕಳ ರಜೆಯ ಸಂಭ್ರಮವನ್ನು ಕಸಿದುಕೊಳ್ಳಲಾಗುತ್ತಿದೆ. ಸಂಕಲನಾತ್ಮಕ ಪರೀಕ್ಷೆ ಬಂದ ನಂತರದಲ್ಲಿ ಮಕ್ಕಳು ಮಾನಸಿಕವಾಗಿ, ಭಾವನಾತ್ಮಕವಾಗಿ, ದೈಹಿಕವಾಗಿ ವಿಶ್ರಾಂತಿಯ ಅಗತ್ಯ ಇರುವುದರಿಂದ ವಿಶ್ರಾಂತಿಯನ್ನು ಕೊಡಲಾಗುತ್ತದೆ. ಶಿಕ್ಷಣ ತಜ್ಞರ ಪ್ರಕಾರ ರಜೆ ಮಕ್ಕಳಿಗಾಗಿಯೇ ಹೊರತು ಶಿಕ್ಷಕರಿಗೆ ಅಲ್ಲ. ಆದರೆ ಇಲಾಖೆ ಶಿಕ್ಷಕರ ಮೇಲೆ ಹಲವಾರು ಜವಾಬ್ದಾರಿಯನ್ನು ವಹಿಸಿದ್ದರೂ ಕೂಡ ಇತರ ಇಲಾಖೆಗಳ ಕೆಲಸ ನಿರ್ವಹಿಸುತ್ತಾ ಜನಗಣತಿ, ಮತದಾನದ ಕೆಲಸ ಮಾಡುತ್ತಾ ಸಮಾಜದಲ್ಲಿ ಎಲ್ಲರೊಂದಿಗೆ ಸೌಹಾರ್ದಯುತವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕೊರೊನಾ ನಂತರದಲ್ಲಿ ಶೈಕ್ಷಣಿಕ ದಿನಗಳು ಹೆಚ್ಚಾಗುತ್ತಿವೆ ಹೊರತು ಕಡಿಮೆಯಾಗುತ್ತಿಲ್ಲ. ಮೊದಲು ಬೇಸಿಗೆ ರಜೆಯನ್ನು ಏಪ್ರಿಲ್ 10 ರಿಂದ ಮೇ 30ರವರೆಗೆ ಹಾಗೂ ದಸರಾ ರಜೆಯನ್ನು ಅಕ್ಟೋಬರ್ 20ರ ಅಕ್ಟೋಬರ್ 30ರವರೆಗೆ ನೀಡಲಾಗುತ್ತಿತ್ತು ಆದರೆ ಇತ್ತೀಚಿನ ದಿನಗಳಲ್ಲಿ ಇಲಾಖೆಗೆ ಕೆಲಸದ ಅವಧಿಗಳನ್ನು ಹೆಚ್ಚಿಸುತ್ತಾ ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ಹೆಚ್ಚುವರಿ ಕೆಲಸವನ್ನು ನೀಡುತ್ತಾ ಬಂದಿದ್ದಾರೆ. ಆದರಿಂದ ಶಿಕ್ಷಣ ಸಚಿವರು ಹಿಂದಿನಂತೆ ದಸರಾ ರಜೆಯನ್ನು ವಿಸ್ತರಿಸಬೇಕು. ಅಕ್ಟೋಬರ್ 24ರ ನಂತರ ಜಂಜೂಸವಾರಿ ಮುಗಿಯುವುದರಿಂದ ಬಹಳಷ್ಟು ಪಾಲಕರು ಹಾಗೂ ಮಕ್ಕಳು ಪ್ರವಾಸ ಮಾಡುತ್ತಿರುವುದರಿಂದ ಅಕ್ಟೋಬರ್ 25 ರಂದು ಶಾಲೆಗೆ ಬರದೇ ಇರಬಹುದು. ಆದರೆ ಕೇವಲ ಶಿಕ್ಷಕರು ಮಾತ್ರ ಕರ್ತವ್ಯಕ್ಕೆ ಹಾಜರಾಗುತ್ತಾರೆ. ಇದು ಕೂಡ ಶಿಕ್ಷಕರಿಗೆ ಹೆಚ್ಚುವರಿ ಕರ್ತವ್ಯದ ದಿನಗಳಾಗುತ್ತವೆ ಹೊರತು ಕಲಿಕೆಯ ದಿನಗಳಾಗುವುದಿಲ್ಲ. ಆದ್ದರಿಂದ ಸರ್ಕಾರ ಶಿಕ್ಷಕರ, ಸಂಘಟನೆ ಇದರ ಬಗ್ಗೆ ಕ್ರಮ ವಹಿಸಬೇಕು.

–ಅಮಿತ ಬಯ್ಯಾಪುರ, ದೆಹಲಿ

ಕುವೆಂಪುನಗರ ವಾಣಿಜ್ಯ ಸಂಕೀರ್ಣದಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಿ

ಮಾನ್ಯರೆ,

ಮೈಸೂರಿನ ಕುವೆಂಪುನಗರ ವಾಣಿಜ್ಯ ಸಂಕೀರ್ಣದ ಬಳಿ ಅನೇಕ ಮಾರ್ಗಗಳ ಹಿಂದೆ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಲಾಗಿತ್ತು. ಇದರಿಂದ ಟ್ರಾಫಿಕ್ ಜಾಮ್ ಸಮಸ್ಯೆ ಇರುತ್ತಿರಲಿಲ್ಲ. ಎಲ್ಲಾ ಕಡೆಯಿಂದ ವಾಹನಗಳು ನುಗ್ಗುವುದರಿಂದ ಅಪಘಾತದ ಸಾಧ್ಯತೆ ಅಧಿಕ. ಸುವರ್ಣ ಭವನ ಹೋಟೆಲ್ ಮುಂದೆ ವಾಹನ ನಿಲುಗಡೆ ನಿಷೇಧಿತ ನಾಮಫಲಕವಿದ್ದರೂ ಮೈಸೂರು ನಗರ ಸಾರಿಗೆ ಬಸ್‌ಗಳನ್ನು ನಿಲ್ಲಿಸಲಾಗುತ್ತಿದೆ. ಕ್ರಿಯಾಶೀಲ, ದಕ್ಷ ಪೊಲೀಸ್ ಆಯುಕ್ತರು ಈ ಸಮಸ್ಯೆ ಬಗೆಹರಿಸಲು ಮನವಿ.

–ನೊಂದ ನಾಗರಿಕರು, ಕುವೆಂಪುನಗರ, ಮೈಸೂರು.

ಅಧಿಕಾರಿಗಳೇ ನೀವೇಕೆ ಹೀಗೆ?

ಮಾನ್ಯರೆ,

ನಾಡಹಬ್ಬ ದಸರೆಯ ಕಂಪು ನಾಡಲ್ಲೆಲ್ಲ ಪಸರಿಸಿದೆ, ಇಡೀ ಮೈಸೂರು ಚಿತ್ತಾಕರ್ಷಕ ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿದೆ, ವಿಶ್ವ ವಿಖ್ಯಾತ ಈ ನಮ್ಮ ನಾಡ ಹಬ್ಬಕ್ಕೆ ದೇಶ ವಿದೇಶಗಳಿಂದ, ನೆರೆ ರಾಜ್ಯಗಳಿಂದ, ರಾಜ್ಯದ ಮೂಲೆ ಮೂಲೆಯಿಂದ ಲಕ್ಷಾಂತರ ಮಂದಿ ಪ್ರವಾಸಿಗರು ಆಗಮಿಸಿ ಕಣ್ತುಂಬಿಕೊಂಡು ಹರ್ಷಿಸುವುದು ಸರಿಯಷ್ಟೇ. ಆದರೆ ಕೆಲ ಪಾರಂಪರಿಕ ಕಟ್ಟಡಗಳ ಸ್ಥಿತಿ ಇನ್ನೂ ಶೋಚನೀಯವೇ? ಇದರಲ್ಲಿ ನಗರದ ಹೃದಯ ಭಾಗದಲ್ಲಿರುವ ಪಾರಂಪರಿಕ ಕಟ್ಟಡಗಳಲ್ಲೊಂದಾದ ಚಿಕ್ಕ ಗಡಿಯಾರದ ಗಡಿಯಾರವನ್ನು ದಸರೆಯ ಸಂದರ್ಭದಲ್ಲೂ ಸರಿಪಡಿಸಲು ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ, ಉಪ ಸಮಿತಿ ಮಹೋದಯರಿಗೆ ಸಮಯವೇ ಇಲ್ಲವಾಯಿತೆ? ಇಷ್ಟು ನಿರ್ಲಕ್ಷ್ಯ ಸರಿಯೇ?

ಇಲ್ಲಿ ಸಾಂಸ್ಕೃತಿಕ ವೇದಿಕೆಯುಂಟು. ಸಂಜೆಯಾದರೆ ನೂರಾರು ಮಂದಿ ರಂಗಾಸಕ್ತರು ಕುಳಿತು ಕಾರ್ಯಕ್ರಮವನ್ನು ಕಣ್ತುಂಬಿಕೊಳ್ಳುತ್ತಾರೆ, ಫೋಟೋ ಕ್ಲಿಕ್ಕಿಸಿಕೊಳ್ಳುತ್ತಾರೆ. ದೇವರಾಜ ಮಾರುಕಟ್ಟೆ, ಚಿಕ್ಕ ಗಡಿಯಾರ, ಗುರು ಸ್ವೀಟ್ ಇವು ಪ್ರವಾಸಿಗರ ನೆಚ್ಚಿನ ತಾಣಗಳು ಹೌದು, ಹೀಗೆ ಸಾವಿರಾರು ಮಂದಿ ಭೇಟಿ ನೀಡುವ ಸ್ಥಳದಲ್ಲೇ ಪಾರಂಪರಿಕ ಕಟ್ಟಡಗಳ ಕಡೆಗಣನೆ ಎಷ್ಟು ಸರಿ? ಸಂಬಂಧಪಟ್ಟವರು ಶೀಘ್ರ ಸರಿಪಡಿಸಿ ದಸರೆಯ ಹಾಗೂ ಮೈಸೂರಿನ ಪಾರಂಪರಿಕ ಕಟ್ಟಡಗಳ ಘನತೆ, ಭವ್ಯತೆ ಕಾಪಾಡಿ.

–ಎಂ.ಎಸ್ ತುಕಾರಾಮ್ ರಾವ್, ಪ್ರಜ್ಞಾವಂತ ನಾಗರಿಕ ಬಳಗ, ವಿ.ವಿ ಮೊಹಲ್ಲಾ ಮೈಸೂರು.

ನಮ್ಮ ಮೈಸೂರಿನ ಗೌರವ...

ಡಾಕ್ಟರ್ ಕೆ.ಬಿ.ಗಣಪತಿ



ಯಾರ ಮೇಲಾದರೂ ಶತ್ರುತ್ವವಿದ್ದರೆ, ಅವರನ್ನು ಪುಸಲಾಯಿಸಿ 'ಹಳೆಯ ಲಾರಿ ಕೊಡಿಸಿಬಿಡು, ಇಲ್ಲ ವೃತ್ತಪತ್ರಿಕೆ ಆರಂಭಿಸಲು ಪ್ರೇರೇಪಿಸಿಬಿಡು' ಎಂಬ ಮಾತು ಬಹು ಹಿಂದಿನಿಂದಲೂ ಚಾಲ್ತಿಯಲ್ಲಿದೆ. ಇಂಥ ಘೋರ ಸವಾಲಿನ ಅರಿವಿದ್ದರೂ, ರಾಷ್ಟ್ರೀಯ ಪತ್ರಿಕೆಯ ನೌಕರಿ ತೊರೆದು, ದೂರದ ಪುಣೆಯಿಂದ ಪುಟ್ಟ ಮೈಸೂರಿಗೆ ಬಂದು ಸ್ಥಳೀಯ ಪತ್ರಿಕೆ ಆರಂಭಿಸುವ ದಿಟ್ಟ ನಿರ್ಧಾರ ಕೈಗೊಂಡು, ಪತ್ರಿಕೋದ್ಯಮಕ್ಕೆ ಅಡಿಯಿಟ್ಟು ಯಶಸ್ಸಿನ ಶಿಖರವೇರಿದ ಅಪರೂಪದ ದಿಟ್ಟತನ, ಅದರ ಹಿಂದಿನ ಪರಿಶ್ರಮ, ಹೋರಾಟಕ್ಕೆ ಭಾರತೀಯ ಪತ್ರಿಕೋದ್ಯಮದಲ್ಲಿ ಒಂದು ಉದಾಹರಣೆ ನೀಡಬಲ್ಲ ವ್ಯಕ್ತಿ–ಶಕ್ತಿ ಯಾರಾದರೂ ಇದ್ದರೆ ಅದು ಕೆ.ಬಿ.ಜಿ. (ಕೆ.ಬಿ.ಗಣಪತಿ) ಮಾತ್ರ ಎಂದು ಹೇಳುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಕಾಣಿಸಿಗದು. ಮೈಸೂರು ಪತ್ರಿಕಾ ರಂಗದ ಸಾಧಕ, ಭೀಷ್ಮ ಕೆ.ಬಿ.ಜಿಯವರನ್ನು ಈಗ ಡಾ.ಕೆ.ಬಿ.ಗಣಪತಿ ಎಂದು ಸಂಬೋಧಿಸುವುದು ಘನತೆಯ ಸಂಕೇತವೆನಿಸುತ್ತದೆ.

ಮಾಧ್ಯಮ ಕ್ಷೇತ್ರವೆಂದರೆ ಒಂದು ತಪಸ್ಸು, ದೀಕ್ಷೆ, ಸದಾ ಸಂಶೋಧಕನಾಗಿರಬೇಕು. ಸಾಮಾಜಿಕ ಕಾಳಜಿ ಅವನ ನಿತ್ಯ ಮಂತ್ರವಾಗಿರಬೇಕು. ಸಿದ್ಧತೆ–ಬದ್ಧತೆ ಅವನ ಧ್ಯೇಯವಾಗಿರಬೇಕು, ಸತ್ವ ಪರೀಕ್ಷೆಗಳನ್ನು ಎದುರಿಸುವ ಆತ್ಮಬಲವಿರಬೇಕು. ಪರಿಶುದ್ಧತೆ ಹಾಗೂ ಪಾರದರ್ಶಕ ನಡೆ ಅವನ ಅರ್ಹತೆಯಾಗಿರಬೇಕೆಂಬುದು ಕೆ.ಬಿ.ಜಿಯವರ ಬದುಕಿನ ಸಂದೇಶವಾಗಿದೆ.

ಪ್ರಾಮಾಣಿಕ ಹಾದಿಯಲ್ಲಿ ಪತ್ರಿಕೆ ನಡೆಸುವುದು ಎಷ್ಟು ಕಷ್ಟ ಎಂಬುದನ್ನು ಅನುಭವಿಸಿದವರಿಗೇ ಗೊತ್ತು. ಎಂಬತ್ತರ ದಶಕದಲ್ಲಿ "ವಾಂಛಲ್ಯ" ಎಂಬ ವಾರಪತ್ರಿಕೆಯನ್ನು ಆರಂಭಿಸಿ, ಪ್ರತಿ ವಾರವೂ ಪ್ರಸವ ವೇದನೆ ಅನುಭವಿಸಿದ ಕಷ್ಟದ ದಿನಗಳನ್ನು ಇಂದಿಗೂ ನಾನು ಮರೆಯಲಾಗದು.

ಪ್ರಶಸ್ತಿಗಳು, ಸನ್ಮಾನಗಳು, ಗೌರವ ಡಾಕ್ಟರೇಟ್‌ಗಳು ಎಲ್ಲೋ ಒಂದು ಕಡೆ ಮೌಲ್ಯ ಕಳೆದುಕೊಳ್ಳುತ್ತಿವೆಯಲ್ಲ ಎನ್ನುವ ಬೇಸರದ ನಡುವೆಯೇ ಕೆಲವರಿಗೆ ಲಭಿಸುವ ಪ್ರಶಸ್ತಿ ಗೌರವಗಳು ಅವುಗಳ ಮೌಲ್ಯವನ್ನು ಉಳಿಸುತ್ತಿವೆ. ದೇಶದ ಕೆಲವೇ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ನಮ್ಮ ಮೈಸೂರು ವಿಶ್ವವಿದ್ಯಾನಿಲಯ ಒಂದು ಎಂಬುದು ಅತ್ಯಂತ ಹೆಮ್ಮೆಯ ವಿಷಯ. ಇನ್ನೂ ಮುಂದುವರಿದು ಹೇಳ ಬೇಕೆಂದರೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಸ್ಥಾಪಿಸಿದ ವಿಶ್ವವಿದ್ಯಾನಿಲಯ ಎನ್ನುವುದು ಐತಿಹಾಸಿಕ ಹಿರಿಮೆಯಾಗಿದೆ.

ಇವೆಲ್ಲಕ್ಕೂ ತನ್ನ ಘನತೆಯನ್ನು ಉಳಿಸಿಕೊಂಡು, ನೈಜ ಸಾಧಕ ತಪಸ್ವಿಗಳಿಗೆ ಗೌರವ ಡಾಕ್ಟರೇಟ್ ಕೊಡಮಾಡುತ್ತಾ ಬಂದಿರುವ ಮೈಸೂರು ವಿಶ್ವವಿದ್ಯಾನಿಲಯ ಈ ಸಾಲಿನಲ್ಲಿ **ಕೆ.ಬಿ.ಗಣಪತಿ** ಅವರನ್ನು ಗುರುತಿಸಿರುವುದು ಮಾಧ್ಯಮ ಕ್ಷೇತ್ರಕ್ಕೆ ಅದರಲ್ಲೂ ಸ್ಥಳೀಯ ಪತ್ರಿಕೋದ್ಯಮಕ್ಕೆ ಎತ್ತರದ ಗೌರವವನ್ನು ತಂದುಕೊಟ್ಟಂತಾಗಿದೆ. ಇದರೊಟ್ಟಿಗೆ ಕ್ರಿಕೆಟ್ ತಾರೆ ಮೈಸೂರಿನ ಜಾವಗಲ್ ಶ್ರೀನಾಥ್, ಹೆಸರಾಂತ ವೈದ್ಯಕೀಯ ಶಿಕ್ಷಣ ತಜ್ಞ ಡಾ. ಶಂಕರ್ ಅವರನ್ನು ಆಯ್ಕೆ ಮಾಡಿರುವುದು ಸಾರ್ಥಕ ಆಯ್ಕೆ ಎನಿಸಿದೆ.

ಕೆ.ಬಿ.ಜಿಯವರು ಎಂದೂ ಪ್ರಶಸ್ತಿಗಾಗಿ ಹಾಗೂ ಅಧಿಕಾರಕ್ಕಾಗಿ ಪ್ರಭಾವಿಗಳ ಹಿಂದೆ ಬಿದ್ದವರಲ್ಲ. ಅದಕ್ಕಾಗಿ ಲಾಬಿ ನಡೆಸುವ ಜಾಯಮಾನ ಅವರದ್ದಲ್ಲವೇ ಅಲ್ಲ. ಇಲ್ಲದಿದ್ದರೆ ಇಷ್ಟೊತ್ತಿಗಾಗಲೇ ಸದ್ದ ಲಭಿಸಿರುವ ರಾಜ್ಯೋತ್ಸವ, ಗೌರವ ಡಾಕ್ಟರೇಟ್ ಜೊತೆಗೆ ಇನ್ನೂ ಅನೇಕ ಪ್ರಶಸ್ತಿಗಳು ಅವರ ಮಡಿಲಿಗೆ ಬಂದು ಬೀಳುತ್ತಿದ್ದವು. ಅರ್ಹತೆ, ಯೋಗ್ಯತೆ ಹಾಗೂ ಪರಿಶ್ರಮಕ್ಕೆ ಸನ್ಮಾನ, ಗೌರವಗಳು ಅರಸಿ ಬರಬೇಕೇ ಹೊರತು ಅದನ್ನು ಹಿಂಬಾಲಿಸಿ ಹೋಗಬಾರದು ಎನ್ನುವುದಕ್ಕೆ ಕೆ.ಬಿ.ಜಿ. ಅವರು ನಮ್ಮ ಮುಂದೆ ಸಾಕ್ಷಿಯಾಗಿ ನಿಲ್ಲುತ್ತಾರೆ.

ಇವತ್ತು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಮಾಧ್ಯಮ ಕ್ಷೇತ್ರದಲ್ಲಿ ಮುಗಿಲೆತ್ತರಕ್ಕೆ ಬೆಳೆದು, ಪ್ರಖರ ಬೆಳಕು ಚೆಲ್ಲುತ್ತಿರುವ ನಕ್ಷತ್ರಗಳಂತೆ ಕಂಗೊಳಿಸುತ್ತಿವೆ. ಯಾರ ಹಂಗೂ, ಮುಲಾಜು ಇಲ್ಲದೇ ಎಷ್ಟೇ ಸವಾಲುಗಳು, ಅಡ್ಡಿ–ಆತಂಕಗಳು ಬಂದರೂ ಎಲ್ಲವನ್ನೂ ಮೆಟ್ಟಿ ನಿಂತು ಗಟ್ಟಿಯಾಗಿ ನೆಲೆ ಕಂಡುಕೊಂಡಿರುವ ಈ ಎರಡೂ ಪತ್ರಿಕೆಗಳ ಗಟ್ಟಿ ಅಸ್ತಿತ್ವದ ಹಿಂದೆ ಕೆ.ಬಿ.ಜಿ ಅವರ ಶ್ರಮ ಸಿಂಹಪಾಲಿನದು.

> "ಕೆ.ಬಿ.ಜಿ. ಅವರ ಪುಸ್ತಕ ಹಾಗೂ ಬರಹಗಳಲ್ಲಿ ಮೈಸೂರು ಇತಿಹಾಸ ಅಡಗಿದೆ. ಅಭಿವೃದ್ಧಿಯ ಚಿಂತನೆಗಳಿವೆ. ಜಾಗೃತ ಸಮಾಜದ ಅರಿವಿನ ಸಂದೇಶಗಳ ಸಂಗ್ರಹವಿದೆ. ಆಧ್ಯಾತ್ಮಿಕ ಕ್ಷೇತ್ರದ ಅದ್ಭುತಗಳ ಉಲ್ಲೇಖಗಳಿವೆ, ಕನ್ನಡ ನಾಡು–ನುಡಿ ಜನರ ಸಕಲ ಶ್ರೇಯೋಭಿವೃದ್ಧಿಯ ಕಳಕಳಿಯ ಜೊತೆ–ಜೊತೆಗೇ ಬಲಿಷ್ಠ ಭಾರತದ ಸಂರಕ್ಷಣೆಯ ಬದ್ಧತೆ ಅಡಗಿದೆ. ಒಬ್ಬ ಜಾಗೃತ ನಾಗರಿಕನಿಗೆ ಬೆಳಕು ತೋರುವ ಅಂಶಗಳಿವೆ. ಒಟ್ಟಾರೆಯಾಗಿ ಸುಂದರ ಮೈಸೂರಿನ ಅಳಿವು–ಉಳಿವಿನ ಪರಿಕಲ್ಪನೆಯ ರಾಯಭಾರಿ ನಮಗೆ ಕಾಣಸಿಗುತ್ತಾರೆ."



–ಆರ್.ರಘು
ಲೇಖಕರು ಹಾಗೂ ಉದ್ಯಮಿ
ಮೊ. 9448061101

ಕೆ.ಬಿ.ಜಿ. ಅವರು ನಡೆದು ಬಂದ ಹಾದಿ ಕಲ್ಲು–ಮುಳ್ಳುಗಳನ್ನು ಮೆಟ್ಟಿ ನಿಲ್ಲಲೇಬೇಕಾದ ಅನಿವಾರ್ಯ ಸವಾಲುಗಳಿಂದ ಕೂಡಿತ್ತು. ನಮ್ಮ ವ್ಯವಸ್ಥೆಯಲ್ಲಿ ಸಾಧಕರಿಗೆ ಅವರ ಪ್ರತಿಭೆ, ಸಾಮರ್ಥ್ಯ ಹಾಗೂ ಪರಿಶ್ರಮದ ಶಕ್ತಿಯೇ ಶತ್ರುವಾಗಿ ಕಾಡುತ್ತದೆ. ಈ ಕಾಡುವಿಕೆಯ ಕಷ್ಟವನ್ನು ಅನುಭವಿಸಿ, ನಷ್ಟವನ್ನು ಮೆಟ್ಟಿ ನಿಂತು ಸ್ಥಳೀಯ ಪತ್ರಿಕೆಯ ಮೂಲಕ ಪ್ರಭಾವಿ ಓದುಗರ ವಲಯವನ್ನು ಬಹುವಾಗಿ ವಿಸ್ತರಿಸಬಹುದು ಎಂಬುದನ್ನು ತೋರಿಸಿಕೊಟ್ಟವರು ಕೆ.ಬಿ.ಜಿ. ಇದರಲ್ಲಿ ವಿಶೇಷವೆಂದರೆ ಕನ್ನಡದ 'ಮೈಸೂರು ಮಿತ್ರ' ಜೊತೆಗೇ ಇಂಗ್ಲೀಷಿನ ಅದರಲ್ಲೂ ಸಂಜೆ ಓದುಗರನ್ನು ಆಶ್ರಯಿಸಿ ಇಂಗ್ಲೀಷ್ ದೈನಿಕವನ್ನು ಇಡೀ ಭಾರತೀಯ ಪತ್ರಿಕೋದ್ಯಮವೇ ನಿಬ್ಬೆರಗಾಗುವಂತೆ ಇವತ್ತಿಗೂ ಸಾಯಂಕಾಲದ ಪತ್ರಿಕೆಗಳಲ್ಲಿ ಮತ್ತೊಂದು ಪತ್ರಿಕೆ ಉದಾಹರಣೆಗೆ ಸಿಗದಂತೆ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯನ್ನು ದಾಖಲೆ ಎನ್ನುವಂತೆ ಮಾಧ್ಯಮ ಕ್ಷೇತ್ರದ ಭೂಪಟದಲ್ಲಿ ಹೆಗ್ಗುರುತಾಗಿ ಪಡಿ ಮೂಡಿಸಿದ್ದು ಗಣಪತಿಯವರ ಅದ್ವಿತೀಯ ಸಾಧನೆಯಾಗಿದೆ.

ಕೆ.ಬಿ.ಜಿ ಅವರ ಗರಡಿಯಲ್ಲಿ ಪಳಗಿದ ಅನೇಕ ಪ್ರತಿಭಾವಂತ ಪತ್ರಕರ್ತರು ಇಂದು ರಾಜ್ಯ–ದೇಶದ ಮುಂಚೂಣಿ ಮಾಧ್ಯಮಗಳಲ್ಲಿ ಗುರುತಿಸಿಕೊಂಡಿದ್ದಾರೆ. ಇವರೆಲ್ಲರ ಬಗ್ಗೆ ಹೆಮ್ಮೆ ಇದೆ. ಯಾರಿಗೂ ಅಹಿತವನ್ನು ಬಯಸದ ಕೆ.ಬಿ.ಜಿಯವರದು ನಿರುಪದ್ರವಿ ಮನಸ್ಸು, ಯಾವುದನ್ನೂ ಮೈಮೇಲೆಳೆದುಕೊಳ್ಳುವುದಿಲ್ಲ. ಯಾರ ಮೇಲೂ ಎರಗುವುದೂ ಇಲ್ಲ. ಆದರೂ ಇವರನ್ನು ಅಸೂಯೆಗಳು, ಮಾತ್ಸರ್ಯಗಳು ಕೆಲವು ಬಾರಿ ಕಾಡಿದ್ದುಂಟು. ಆದರೆ ಇದಾವುದನ್ನೂ ಲೆಕ್ಕಕ್ಕಿಟ್ಟುಕೊಳ್ಳದೇ ಕೆ.ಬಿ.ಜಿ ಅವರು "ಆನೆ ನಡೆದಿದ್ದೇ ದಾರಿ" ಎಂದು ಈವರೆವಿಗೂ ಸಾಗಿ ಬಂದಿದ್ದಾರೆ.

ಕೆ.ಬಿ.ಜಿ ಅವರ ಕ್ರಿಯಾಶೀಲ ಆರೋಗ್ಯದ ಗುಟ್ಟು ಅವರ ಶುಭ್ರ ಮನಸ್ಸು, ಸ್ನೇಹಪರ ನಡೆ, ಪರಿಪಕ್ವ ವ್ಯಕ್ತಿತ್ವ. ಅವರಲ್ಲಿ ನಾನು ಹತ್ತಿರದಿಂದ ಕಂಡ ವಿಶೇಷ ಗುಣಗಳೆಂದರೆ ಅವರು ಕುಟುಂಬವನ್ನು ಎಷ್ಟು ಪ್ರೀತಿಸುತ್ತಾರೋ ಅದಕ್ಕಿಂತ ಗುಲಗಂಜಿಯಷ್ಟು ಹೆಚ್ಚು ತಮ್ಮ ವೃತ್ತಿಯನ್ನು ಪ್ರೀತಿಸುತ್ತಾರೆ. ಅವರಲ್ಲಿ ಪ್ರತಿ ಕ್ಷಣವೂ ಜಾಗೃತ ಪತ್ರಕರ್ತ ಎಚ್ಚರಗೊಂಡಿರುತ್ತಾನೆ. ಕೆ.ಬಿ.ಜಿ. ಅವರ ಕಣ್ಣುಗಳು ಈ ಕ್ಷಣಕ್ಕೂ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಗುಣಮಟ್ಟದ ಕಾವಲುಗಾರನಂತೆ ಕಾರ್ಯನಿರ್ವಹಿಸುತ್ತವೆ.

ಐದು ದಶಕಗಳ 'ಮಿತ್ರ' ಮತ್ತು 'ಸ್ಟಾರ್'ನ ಬೆಳವಣಿಗೆ ಅದ್ಭುತವಾದುದು. ಈ ಯಶಸ್ಸಿನ ಹಿನ್ನೆಲೆಯಲ್ಲಿ ಅವರೊಂದಿಗೆ ಹೆಗಲು ಕೊಟ್ಟವರನ್ನು ಅವರು ಗೌರವಿಸುವ ರೀತಿ, ಆದರಿಸುವ ಪರಿ ಉದ್ಯೋಗದಾತರಿಗೆ ಮಾದರಿಯಾದದ್ದು. ಒಂದು ಉದ್ಯಮದಲ್ಲಿ ಕುಟುಂಬದ ವಾತಾವರಣವನ್ನು ಸೃಷ್ಟಿಸುವ ಕಾಳಜಿ ಅನನ್ಯವಾದುದು. ಇವತ್ತಿಗೂ ತಮ್ಮ ಪತ್ರಿಕೆಯ ಸಂಪಾದಕ, ತಾಂತ್ರಿಕ ವರ್ಗ ಮತ್ತು ಇತರ ಸಿಬ್ಬಂದಿಗಳನ್ನು ನಡೆಸಿಕೊಳ್ಳುವ ರೀತಿ ಮಾನವ ಸಂಪನ್ಮೂಲ ಜೋಡಣೆಯ ಕೌಶಲ್ಯತೆ ಅರಿಯಬೇಕೆನ್ನುವವರಿಗೆ ಅವರ ಸಾರಥ್ಯದ **ಅಕಾಡೆಮಿ ಆಫ್ ನ್ಯೂಸ್‌ಪೇಪರ್ಸ್ ಸಂಸ್ಥೆ** ಅನುಕರಣೀಯ ಸ್ಥಾನದಲ್ಲಿ ನಿಲ್ಲುತ್ತದೆ.

ಹುಟ್ಟಿದ್ದು ಕೊಡಗಿನಲ್ಲೇ ಆದರೂ, ತಮ್ಮ ತಾಯ್ನೆಲದಷ್ಟೇ ಮೈಸೂರನ್ನೂ ಅಪಾರವಾಗಿ ಪ್ರೀತಿಸುತ್ತಾರೆ. ಮೈಸೂರಿನ ಅಭಿವೃದ್ಧಿ, ಮೈಸೂರು ಪರಂಪರೆ ಉಳಿಸುವ ಬಗ್ಗೆ ಈ ಕ್ಷಣಕ್ಕೂ ಒಬ್ಬ ಹೋರಾಟಗಾರನಂತೆ ಅವರ ಮನಸ್ಸು ಪ್ರತಿ ಕ್ಷಣವೂ ಮಿಡಿಯುತ್ತದೆ. ತಮ್ಮ ಅಂಕಣಗಳ ಮೂಲಕ ಆ ಕಾಳಜಿ ವ್ಯಕ್ತವಾಗುತ್ತಲೇ ಇರುತ್ತದೆ. ಸಮಾನಮನಸ್ಕರೊಡಗೂಡಿ ಈ ನಿಟ್ಟಿನಲ್ಲಿ ಕ್ರಿಯಾಶೀಲ ಕಾರ್ಯಕ್ರಮಕ್ಕೆ ಒತ್ತು ನೀಡುತ್ತಾರೆ. ಚಾಮುಂಡಿಬೆಟ್ಟದ ಉಳಿವಿಗಾಗಿ ಪ್ರಾಧಿಕಾರವೊಂದರ ಅಸ್ತಿತ್ವಕ್ಕಾಗಿ ಅವರು ತೋರುತ್ತಿರುವ ಕಾಳಜಿ ಮತ್ತು ಪರಿಶ್ರಮ ಹತ್ತಿರದಿಂದ ಬಲ್ಲವರಿಗಷ್ಟೇ ಗೊತ್ತು.

ಕೆ.ಬಿ.ಜಿ. ಅವರ ಪುಸ್ತಕ ಹಾಗೂ ಬರಹಗಳಲ್ಲಿ ಮೈಸೂರು ಇತಿಹಾಸ ಅಡಗಿದೆ. ಅಭಿವೃದ್ಧಿಯ ಚಿಂತನೆಗಳಿವೆ. ಜಾಗೃತ ಸಮಾಜದ ಅರಿವಿನ ಸಂದೇಶಗಳ ಸಂಗ್ರಹವಿದೆ. ಆಧ್ಯಾತ್ಮಿಕ ಕ್ಷೇತ್ರದ ಅದ್ಭುತಗಳ ಉಲ್ಲೇಖಗಳಿವೆ, ಕನ್ನಡ ನಾಡು–ನುಡಿ ಜನರ ಸಕಲ ಶ್ರೇಯೋಭಿವೃದ್ಧಿಯ ಕಳಕಳಿಯ ಜೊತೆ–ಜೊತೆಗೇ ಬಲಿಷ್ಠ ಭಾರತದ ಸಂರಕ್ಷಣೆಯ ಬದ್ಧತೆ ಅಡಗಿದೆ. ಒಬ್ಬ ಜಾಗೃತ ನಾಗರಿಕನಿಗೆ ಬೆಳಕು ತೋರುವ ಅಂಶಗಳಿವೆ. ಒಟ್ಟಾರೆಯಾಗಿ ಸುಂದರ ಮೈಸೂರಿನ ಅಳಿವು–ಉಳಿವಿನ ಪರಿಕಲ್ಪನೆಯ ರಾಯಭಾರಿ ನಮಗೆ ಕಾಣಸಿಗುತ್ತಾರೆ.

"ಮೈಸೂರು" ಹೆಸರು ಹೊತ್ತ ಎರಡು ಪತ್ರಿಕೆಗಳು ಮೈಸೂರಿನ ಕಣ್ಣುಗಳಾಗಿವೆ. ಇದನ್ನು ಸಾಕ್ಷೀಕರಿಸುವಂತೆ ಕೆ.ಬಿ.ಜಿ. ಅವರಿಗೆ ಪ್ರತಿಷ್ಠಿತ 'ಮೈಸೂರು' ವಿಶ್ವ ವಿದ್ಯಾನಿಲಯದಿಂದಲೇ ಗೌರವ ಡಾಕ್ಟರೇಟ್ ದೊರೆತಿರುವುದು ಮೈಸೂರಿಗೆ ಮೈಸೂರೇ ಗೌರವಿಸಿಕೊಂಡಂತಾಗಿದೆ.

ವಾಹನ ಮಾಲೀಕರು, ಚಾಲಕರಲ್ಲಿ ಮಲ್ಟಿ ಲೆವೆಲ್ ಪಾರ್ಕಿಂಗ್ ಉದ್ದೇಶವೇ ನಿರರ್ಥಕ ಎಂಬ ಧೋರಣೆ!

ಪಾರ್ಕಿಂಗ್ ಲಾಟ್ ಆಜುಬಾಜಲ್ಲಿ ಅಡ್ಡಾದಿಡ್ಡಿ ವಾಹನ ನಿಲುಗಡೆ

- ಹೇಳಿದ್ದೇ ಒಂದು; ವಾಸ್ತವ ಸ್ಥಿತಿಯೇ ಬೇರೆ: ಕಾರಿನ ಜೊತೆಗೆ ಸ್ಕೂಟರ್, ಬೈಕ್, ಸೈಕಲ್‌ಗೂ ಈಗ ಅವಕಾಶ
- ಇಲ್ಲ ವಾಹನ ನಿಲುಗಡೆ ಮಾಡದವರಿಗೆ ಬ್ಯಾಟರಿ ಚಾಲಿತ ವಾಹನ ಸೌಲಭ್ಯವಂತೂ ಮರೀಚಿಕೆ

ಮೈಸೂರು ಮಿತ್ರ ರಿಯಾಲಿಟಿ ಚೆಕ್





ಮೈಸೂರು, ಅ.19(ಬಿಎಲ್‌ಯು)– ಮೈಸೂರಿನ ಪುರಭವನ ಆವರಣದಲ್ಲಿ ನಿರ್ಮಿಸಿಯಷ್ಟೇ ಲೋಕಾರ್ಪಣೆಯಾದ ಮಲ್ಟಿ ಲೆವೆಲ್ ಪಾರ್ಕಿಂಗ್‌ನಲ್ಲಿ ಗುರುವಾರ ಬೆರಳೆಣಿಕೆಯಷ್ಟು ವಾಹನಗಳು ನಿಂತಿದ್ದವು. 'ಮೈಸೂರು ಮಿತ್ರ'ನ ರಿಯಾಲಿಟಿ ಚೆಕ್‌ನಲ್ಲಿ ಸಾಕಷ್ಟು ಅದ್ವಾನಗಳು ಕಂಡು ಬಂದವು.

ಹೆಸರಾಂತ ಪ್ರವಾಸಿ ತಾಣಗಳ ತವರೂರಾದ ಮೈಸೂರಿಗೆ ದೇಶ–ವಿದೇಶಗಳ ಲಕ್ಷಾಂತರ ಪ್ರವಾಸಿಗರು ಆಗಮಿಸುತ್ತಾರೆ. ದಸರಾ ವೇಳೆಯಲ್ಲಂತೂ ಪ್ರವಾಸಿಗರ ಸಂಖ್ಯೆ ಇಮ್ಮಡಿಯಾಗಿರುತ್ತದೆ. ಮೈಸೂರು ಅರಮನೆ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ, ಗಾಂಧಿ ವೃತ್ತ ಸೇರಿದಂತೆ ಹಲವು ಸ್ಥಳಗಳಲ್ಲಿ ಕಾರು ಸೇರಿದಂತೆ ಇತರೆ ವಾಹನಗಳ ನಿಲುಗಡೆಗೆ ಸೂಕ್ತ ಸ್ಥಳವಿಲ್ಲದೆ ಸಿಕ್ಕ ಸಿಕ್ಕ ಕಡೆ ವಾಹನಗಳನ್ನು ನಿಲುಗಡೆ ಮಾಡಲಾಗುತ್ತಿತ್ತು.

ಪ್ರವಾಸಿಗರು ಸೇರಿದಂತೆ ಸ್ಥಳೀಯರು ಎಲ್ಲೆಂದರಲ್ಲಿ ಕಾರ್‌ಗಳನ್ನು ನಿಲ್ಲಿಸುತ್ತಿದ್ದ ಕಾರಣ ಸಂಚಾರ ಅವ್ಯವಸ್ಥೆ ಎದುರಾಗುತ್ತಿತ್ತು. ಇದರಿಂದ ಕೆಲವು ಕಡೆ ಅಪಘಾತಗಳು ಕೂಡ ಸಂಭವಿಸಿವೆ.

ಈ ಹಿನ್ನೆಲೆಯಲ್ಲಿ ಒಂದೇ ಸೂರಿನಡಿ ನೂರಾರು ವಾಹನಗಳನ್ನು ವ್ಯವಸ್ಥಿತವಾಗಿ ನಿಲ್ಲಿಸಲು ಪುರಭವನದಲ್ಲಿ ಮಲ್ಟಿ ಲೆವೆಲ್ ಪಾರ್ಕಿಂಗ್ ನಿರ್ಮಾಣ ಮಾಡಲಾಗಿದೆ. ನಿನ್ನೆ ಲೋಕಾರ್ಪಣೆಗೊಂಡ ಮಲ್ಟಿ ಲೆವೆಲ್ ಪಾರ್ಕಿಂಗ್‌ನಲ್ಲಿ ಇಂದು ಕೇವಲ 15 ಕಾರುಗಳು ನಿಂತಿದ್ದವು. ಮಲ್ಟಿ ಲೆವೆಲ್ ಪಾರ್ಕಿಂಗ್ ಅನುಕೂಲವಿದ್ದರೂ ಬಹಳಷ್ಟು ವಾಹನ ಸವಾರರು ಸಿಕ್ಕ ಸಿಕ್ಕ ಕಡೆ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಿದ್ದರು. ಮಲ್ಟಿ ಲೆವೆಲ್ ಪಾರ್ಕಿಂಗ್ ಎದುರಿನ ಶ್ರೀ ಹರ್ಷ ರಸ್ತೆ, ದೊಡ್ಡ ಗಡಿಯಾರ, ಗಾಂಧಿ ವೃತ್ತ, ಅರಮನೆಯ ಬಲರಾಮ ದ್ವಾರ ಸೇರಿದಂತೆ ಇತರೆಡೆ ಫುಟ್‌ಪಾತ್‌ಗಳಲ್ಲೇ ವಾಹನಗಳನ್ನು ನಿಲ್ಲಿಸಲಾಗಿತ್ತು. ಟೌನ್‌ಹಾಲ್‌ನಲ್ಲಿ ಪಾರ್ಕಿಂಗ್ ವ್ಯವಸ್ಥೆ ಇದೆ ಎಂಬ ಬಗ್ಗೆ ಜನರಿಗೆ ಅರಿವು ಇಲ್ಲವೋ, ಪಾರ್ಕಿಂಗ್‌ನಲ್ಲಿ ಹಣ ಪಾವತಿಸಬೇಕಾಗುತ್ತದೆ ಎಂಬ ಕಾರಣದಿಂದಲೋ ವಾಹನಗಳ ಮಾಲೀಕರು, ಚಾಲಕರು ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್‌ನತ್ತ ಮುಖ ಹಾಕಿಲ್ಲ. ಸಿಲಿಕಾನ್ ಸಿಟಿ ಬೆಂಗಳೂರಿನ ಎನ್.ಆರ್.ರಸ್ತೆಯಲ್ಲಿ ಬಿಬಿಎಂಪಿ, ವಾಹನಗಳ ನಿಲುಗಡೆಗೆ ಬಹುಮಹಡಿ ಕಟ್ಟಡ ನಿರ್ಮಾಣ ಮಾಡಿದೆ. ಇಲ್ಲಿ ಜನರು ಕಂಡ ಕಂಡಲ್ಲಿ ವಾಹನ ಪಾರ್ಕ್ ಮಾಡದೆ, ಪಾರ್ಕಿಂಗ್ ಲಾಟ್‌ಗೇ ಹೋಗಿ ವಾಹನ ನಿಲ್ಲಿಸಿ ತಮ್ಮ ಕೆಲಸ ಕಾರ್ಯಗಳಿಗೆ ತೆರಳುತ್ತಿದ್ದಾರೆ. ಸಂಚಾರಿ ಪೊಲೀಸರು ಇದಕ್ಕೆ ಪೂರಕವಾಗಿಯೇ ಕ್ರಮ ಕೈಗೊಳ್ಳುತ್ತಿದ್ದಾರೆ. ಆದರೆ ಮೈಸೂರಿನಲ್ಲಿ ಜನರಿಗೆ ಈ ಪರಿಕಲ್ಪನೆ ಬಂದಿಲ್ಲದಿರಬಹುದೇ, ಹಾಗೆಯೇ ಸಂಚಾರಿ ಪೊಲೀಸರಿಗೂ ಅರಿವಿಲ್ಲವೇ ಎಂಬ ಪ್ರಶ್ನೆ ಎದುರಾಗಿದೆ.

ಮಲ್ಟಿ ಲೆವೆಲ್ ಪಾರ್ಕಿಂಗ್ ಸೌಲಭ್ಯ ಬಳಸಿಕೊಂಡು ನಗರದಲ್ಲಿ ಶಿಸ್ತು ಬದ್ಧ ಸಂಚಾರ ವ್ಯವಸ್ಥೆ ಜಾರಿಗೊಳಿಸುವ ಸಂಬಂಧ ಸಂಚಾರಿ ಪೊಲೀಸರು ಕೆಲವು ಕಠಿಣ ಕ್ರಮಗಳ ಕೈಗೊಳ್ಳುವುದು ಅವಶ್ಯ ಎನಿಸಿದೆ. ಪ್ರಸ್ತುತ ಮಲ್ಟಿ ಲೆವೆಲ್ ಪಾರ್ಕಿಂಗ್‌ನಲ್ಲಿ 400 ಕಾರ್‌ಗಳ ನಿಲುಗಡೆಗೆ ಅವಕಾಶವಿದ್ದು, ಕಾರ್ ಬಿಟ್ಟು ಬೇರೆ ವಾಹನಗಳಿಗೆ ಅವಕಾಶವಿಲ್ಲ ಎಂದು ನಿರ್ಬಂಧ ವಿಧಿಸಲಾಗಿತ್ತು. ಆದರೆ ಇಂದು ಕಾರುಗಳ ಜೊತೆಗೆ ಸ್ಕೂಟರ್, ಸೈಕಲ್ ಸೇರಿದಂತೆ ಹಲವು ವಾಹನಗಳ ನಿಲುಗಡೆ ಮಾಡಲಾಗುತ್ತಿದೆ. ಈ ಮೂಲಕ ಆರಂಭದಲ್ಲೇ ಶಿಸ್ತು ಎಂಬುದು ಮರೆಯಾಗಿದೆ.

ಮಲ್ಟಿ ಲೆವೆಲ್ ಪಾರ್ಕಿಂಗ್‌ನಲ್ಲಿ ಕಾರ್ ನಿಲ್ಲಿಸಿದ ಮೇಲೆ ಕೆ.ಆರ್.ವೃತ್ತ, ದೇವರಾಜ ಅರಸ್ ರಸ್ತೆ, ಸಯ್ಯಾಜಿರಾವ್ ರಸ್ತೆಗೆ ಶಾಪಿಂಗ್‌ಗೆ ಹೋಗುವವರಿಗೆ, ಹೋಟೆಲ್, ಸಿನಿಮಾ ಸೇರಿದಂತೆ ಇತರೆ ಸ್ಥಳಗಳಿಗೆ ಹೋಗುವವರಿಗೆ ಬ್ಯಾಟರಿ ಚಾಲಿತ ವಾಹನದ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿತ್ತು. ಕೆ.ಆರ್.ವೃತ್ತ ಹಾಗೂ ದೇವರಾಜ ಅರಸ್ ರಸ್ತೆವರೆಗೆ ಬ್ಯಾಟರಿ ಚಾಲಿತ ವಾಹನಗಳ ಮೂಲಕ ಕರೆದೊಯ್ಯಲಾಗುತ್ತದೆ ಎಂದು ನಗರ ಪಾಲಿಕೆ ಅಧಿಕಾರಿಗಳು ತಿಳಿಸಿದ್ದರು. ಆದರೆ ಮಲ್ಟಿ ಲೆವೆಲ್ ಪಾರ್ಕಿಂಗ್ ಬಳಿ ವಿದ್ಯುತ್ ಚಾಲಿತ ವಾಹನಗಳ ಸೌಲಭ್ಯವಿರಲಿಲ್ಲ.

ಹೀಗೆ ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್‌ನಲ್ಲಿ ಹಲವು ಅವ್ಯವಸ್ಥೆ ಆರಂಭದಲ್ಲೇ ಎದುರಾಗಿದೆ. ಇದನ್ನು ಕೂಡಲೇ ಸರಿಪಡಿಸದಿದ್ದರೆ ಮಲ್ಟಿ ಲೆವೆಲ್ ಪಾರ್ಕಿಂಗ್ ಬಳಕೆ ಕೆಲವೇ ದಿನಗಳಲ್ಲಿ ಪಾಳು ಬಿದ್ದು, ಕೊಂಪೆಯಾಗಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಾರಾಯಣ ಹೆಲ್ತ್‌ನಿಂದ ಆರ್ಥೋಬಯೋಥ್ಲಾನ್ ವಾಕಥಾನ್



ಮೈಸೂರು, ಅ.19–ನಾರಾಯಣ ಹೆಲ್ತ್ ಮೈಸೂರು (ಹಿಂದೆ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಎಂದು ಕರೆಯಲಾಗುತ್ತಿತ್ತು) ವತಿಯಿಂದ ವಿಶ್ವ ಸಂಧಿವಾತ ದಿನದ ಅಂಗವಾಗಿ ಆರ್ಥೋಬಯೋಥ್ಲಾನ್ ಎಂಬ ವಾಕಥಾನ್ ಆಯೋಜಿಸಲಾಗಿತ್ತು. ಆಸ್ಪತ್ರೆ ಕ್ಲಿನಿಕಲ್ ನಿರ್ದೇಶಕ ಡಾ.ಎಂ.ಎನ್.ರವಿ ಫ್ಲಾಗ್ ಆಫ್ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಂಧಿವಾತ ಮತ್ತು ಅದಕ್ಕೆ ಲಭ್ಯವಿರುವ ಚಿಕಿತ್ಸೆಯ ಬಗ್ಗೆ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿತ್ತು. ಸಂಧಿವಾತದಿಂದ ಯಶಸ್ವಿಯಾಗಿ ಚೇತರಿಸಿಕೊಂಡ ಜನರು ಈವೆಂಟ್‌ನಲ್ಲಿ 500 ಮೀಟರ್‌ಗಳಷ್ಟು ನಡೆದರು. ಹಿರಿಯ ಹೃದ್ರೋಗ ತಜ್ಞ ಡಾ. ವಿ.ಕೇಶವಮೂರ್ತಿ ವಾಕಥಾನ್‌ನಲ್ಲಿ ಭಾಗವಹಿಸಿದ್ದರು.

ನಾರಾಯಣ ಹೆಲ್ತ್ ಮೈಸೂರಿನ ಮೂಳೆ ಚಿಕಿತ್ಸಾ ವಿಭಾಗದ ಸಲಹೆಗಾರ ಡಾ.ಉಮೇಶ್ ಚೌಡಯ್ಯ ಮಾತನಾಡಿ, ಸಂಧಿವಾತ ನಿರ್ವಹಣೆಗೆ ಆರಂಭಿಕ ರೋಗ ನಿರ್ಣಯ ಮತ್ತು ಚಿಕಿತ್ಸೆ ಅಗತ್ಯ. ಸಂಧಿವಾತದ ಯಾವುದೇ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಎಂದು ತಿಳಿಸಿದರು.

ಸಂಧಿವಾತ, ಆರಂಭಿಕ ರೋಗ ನಿರ್ಣಯ ಮತ್ತು ಚಿಕಿತ್ಸೆಯ ಪ್ರಾಮುಖ್ಯತೆ ಬಗ್ಗೆ ಜಾಗೃತಿ ಮೂಡಿಸುವಲ್ಲಿ ವಾಕಥಾನ್ ಯಶಸ್ವಿಯಾಗಿದೆ ಸಂಧಿವಾತದಿಂದ ಚೇತರಿಸಿಕೊಂಡವರು ಒಟ್ಟಿಗೆ ಸೇರಲು ಮತ್ತು ಅವರ ಯಶಸ್ಸನ್ನು ಆಚರಿಸಲು ಇದು ಅವಕಾಶ ಒದಗಿಸಿತು.

ಯುವ ಪೀಳಿಗೆ ನಾಚಿಸುವಂತೆ ಪೈಪೋಟಿಗಿಳಿದ ಹಿರಿಯ ನಾಗರಿಕರು
ವೇಗದ ನಡಿಗೆ, ಬಾಲ್ ಇನ್ ದ ಬಕೆಟ್ ಸ್ಪರ್ಧೆಯಲ್ಲಿ ಅತ್ಯುತ್ಸಾಹ





ಮೈಸೂರು,ಅ.19(ಬಿಎಲ್‌ಯು)–ಹಿರಿಯ ನಾಗರಿಕರು, ದೈಹಿಕವಾಗಿ ಅಸಮರ್ಥರು ಎಂಬ ಧೋರಣೆಯಿಂದ ಯಾವುದೇ ಸ್ಪರ್ಧೆಗಳಲ್ಲಿ ಅವಕಾಶ ಕಲ್ಪಿಸಲು ಹಿಂದೆ–ಮುಂದೆ ನೋಡುವುದುಂಟು. ಆದರೆ, ಅವಕಾಶ ಕಲ್ಪಿಸಿದರೆ ಅವರಲ್ಲಿನ ಸಾಮರ್ಥ್ಯ ಹೊರಹೊಮ್ಮುತ್ತದೆ ಎಂಬುದಕ್ಕೆ ಹಿರಿಯ ನಾಗರಿಕರಿಗೆ ಮೀಸಲಾಗಿದ್ದ ಕೆಲ ದಸರಾ ಆಟೋಟಗಳೇ ಸಾಕ್ಷಿ.

ಮೈಸೂರಿನ ಜೆ.ಕೆ.ಮೈದಾನದಲ್ಲಿ ಗುರುವಾರ ನಡೆದ ಮಹಿಳಾ ಮತ್ತು ಮಕ್ಕಳ ದಸರಾದಲ್ಲಿ ಹಿರಿಯ ನಾಗರಿಕರು ಉತ್ಸಾಹದಿಂದ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿ, ನಾವು ಯಾರಿಗೂ ಕಡಿಮೆ ಇಲ್ಲ ಎಂದು ಸಾಬೀತು ಮಾಡಿದರು.

ಮೈಸೂರು ದಸರಾ ಸ್ಪರ್ಧೆಗಳಲ್ಲಿ ಹಿರಿಯ ನಾಗರಿಕರಿಗೂ ಪ್ರಾಶಸ್ತ್ಯ ನೀಡಲಾಗಿದೆ. ನೃತ್ಯದಿಂದ ಹಿಡಿದು ಹಲವು ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಗರದ ಜೆ.ಕೆ.ಮೈದಾನದಲ್ಲಿ ಆಯೋಜಿಸಿದ್ದ ಮಹಿಳಾ ಮತ್ತು ಮಕ್ಕಳ ದಸರಾದಲ್ಲಿ ಹಿರಿಯ ನಾಗರಿಕರಿಗೆ ಪ್ರತ್ಯೇಕವಾಗಿ ಹಲವು ಸ್ಪರ್ಧೆಗಳನ್ನು ಆಯೋಜಿಸಿದ್ದರು.

ಬಾಲ್ ಇನ್ ದ ಬಕೆಟ್, ಕಣ್ಣು ಮುಚ್ಚಿಕೊಂಡು ಮಡಕೆ ಹೊಡೆಯುವುದು, ವೇಗದ ನಡಿಗೆ ಸ್ಪರ್ಧೆ ಆಯೋಜಿಸಲಾಗಿತ್ತು. ಹತ್ತಾರು ಹಿರಿಯ ನಾಗರಿಕರು ಈ ಎಲ್ಲಾ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಭಾಗಿಯಾಗಿದ್ದರು. ನಾನು ಗೆಲ್ಲಲೇಬೇಕು ಎಂಬ ಛಲದಿಂದ ಒಬ್ಬರಿಗಿಂತ ಒಬ್ಬರು ಪೈಪೋಟಿ ನಡೆಸಿ ಸ್ಪರ್ಧೆ ಎದುರಿಸಿದರು. ಇದಾದ ನಂತರ ವೇದಿಕೆ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರು ನೃತ್ಯ ಮಾಡಿ ರಂಜಿಸಿದರು. ಸುಮಧುರ ಹಾಡುಗಳ ಗಾಯನದ ಮೂಲಕ ಗಾನಸುಧೆ ಹರಿಸಿದರು. ಹಿರಿಯ ನಾಗರಿಕರ ಸ್ಪರ್ಧೆ ಉತ್ಸಾಹ ನೋಡಿ ನೆರೆದಿದ್ದವರು ಆಶ್ಚರ್ಯಗೊಂಡರು. ದೈಹಿಕವಾಗಿ ನಾವು ಶಕ್ತರಾಗಿದ್ದರೂ ಅವರ ಮುಂದೆ ನಮ್ಮ ತಾಕತ್ತು ಕಡಿಮೆ ಎನ್ನುತ್ತಿದ್ದರು. ಹಿರಿಯ ನಾಗರಿಕರು ಅಶಕ್ತರು, ಅವರ ಕೈಯ್ಯಲ್ಲಿ ಏನೂ ಆಗುವುದಿಲ್ಲವೆಂದು ಹಾಡಿ ನಗುವವರಿಗೆ ಈ ಮೂಲಕ ತಿರುಗೇಟು ಕೊಟ್ಟರು.

ಯುವಕ–ಯುವತಿಯರಿಗೆ ಯುವ ದಸರಾ, ಯುವ ಸಂಭ್ರಮ, ಕ್ರೀಡಾಪಟುಗಳಿಗೆ ದಸರಾ ಕ್ರೀಡಾಕೂಟ, ಕುಸ್ತಿ ಪಂದ್ಯಾವಳಿ, ಅರಮನೆ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ಮನೋರಂಜನೆ ನೀಡುವ ಮೈಸೂರು ದಸರಾದಲ್ಲಿ ಹಿರಿಯ ನಾಗರಿಕರಿಗೂ ಆದ್ಯತೆ ನೀಡಿ ಇಂತಹ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಇದೇ ವೇಳೆ ವಿಶೇಷಚೇತನರಿಗೆ ಶಾಟ್ ಪುಟ್ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ವಿಶೇಷಚೇತನರು ಕೂಡ ಉತ್ಸಾಹದಿಂದ ಈ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಬ್ಬಂದಿಗೆ ಲಗೋರಿ, ಕಾಲಿಗೆ ದಾರ ಕಟ್ಟಿ ಮೇಲಿನಿಂದ ಇಳಿ ಬಿಟ್ಟು ಸೇಬು ತಿನ್ನುವ ಸ್ಪರ್ಧೆ ಆಯೋಜಿಸಲಾಗಿತ್ತು. ಹೀಗೆ ಮಹಿಳಾ ಮತ್ತು ಮಕ್ಕಳ ದಸರಾದಲ್ಲಿ ಪ್ರತಿದಿನ ಒಂದಲ್ಲಾ ಒಂದು ವಿಶೇಷ ಕಾರ್ಯಕ್ರಮದ ಮೂಲಕ ಜನರನ್ನು ರಂಜಿಸಲಾಗುತ್ತಿದೆ.

ಝೆಡ್ ಮಾರ್ಕ್‌ನಿಂದ ಪಾರಂಪರಿಕ ವೃತ್ತಗಳ ಅಲಂಕಾರ ಶ್ಲಾಘನೀಯ: ಶಾಸಕ ಹರೀಶ್‌ಗೌಡ





ಮೈಸೂರು,ಅ.19–ದಸರಾ ಪ್ರಯುಕ್ತ 'ಝೆಡ್ ಮಾರ್ಕ್' ಸಂಸ್ಥೆಯು ನಗರದ ಪ್ರಮುಖ ವೃತ್ತಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸುತ್ತಿದ್ದು, ಇದೊಂದು ಶ್ಲಾಘನೀಯ ಕಾರ್ಯ ಎಂದು ಶಾಸಕ ಹರೀಶ್‌ಗೌಡ ಹೇಳಿದರು.

ನಗರದ ಕೆಆರ್ ಆಸ್ಪತ್ರೆ ವೃತ್ತದಲ್ಲಿ ಬುಧವಾರ ರಾತ್ರಿ ವಿದ್ಯುತ್ ದೀಪಗಳ ಅಲಂಕಾರವನ್ನು ಉದ್ಘಾಟಿಸಿ ಅವರು ಮಾತನಾಡಿ, ವಿಶ್ವ ವಿಖ್ಯಾತ ಮೈಸೂರು ದಸರಾ ಆರಂಭವಾಗಿದ್ದು, ನಗರಕ್ಕೆ ದಿನ ನಿತ್ಯ ಸಾವಿರಾರು ಪ್ರವಾಸಿಗರು ಆಗಮಿಸುತ್ತಿದ್ದಾರೆ. ರಾತ್ರಿ ವೇಳೆ ವಿದ್ಯುತ್ ದೀಪಗಳಿಂದ ಜಗಮಗಿಸುವ ಮೈಸೂರು ನಗರವನ್ನು ನೋಡುವುದೇ ಒಂದು ಸೌಭಾಗ್ಯ. ಇಂತಹ ಕಾರ್ಯದಲ್ಲಿ 'ಝೆಡ್ ಮಾರ್ಕ್' ಸಂಸ್ಥೆಯು ಅತ್ಯಂತ ವೈಭವದ ಅಲಂಕಾರ ಮಾಡುತ್ತಿದ್ದು, ಆಯಾಯ ಕ್ಷೇತ್ರಗಳ ಶಾಸಕರ ಹೆಸರನ್ನು ಸಹ ವಿದ್ಯುತ್ ದೀಪಗಳಿಂದ ಅಲಂಕರಿಸಿ ಜನತೆಗೆ ಕ್ಷೇತ್ರದ ಬಗ್ಗೆ ಪರಿಚಯ ಮಾಡಿಕೊಡುತ್ತಿದೆ ಎಂದರು.

ಇದೇ ವೇಳೆ ನವೀಕೃತ ಫೌಂಟನ್ ವೃತ್ತವನ್ನೂ ಉದ್ಘಾಟನೆ ಮಾಡಲಾಯಿತು. ಝೆಡ್ ಮಾರ್ಕ್ ಸಂಸ್ಥೆಯ ಮುಖ್ಯಸ್ಥ ಝುಬೇರ್ ಮಾತನಾಡಿ, ವಿದ್ಯುತ್ ದೀಪಗಳ ಅಲಂಕಾರ ಕಾರ್ಯದಲ್ಲಿ ನಮ್ಮ ಸಂಸ್ಥೆ ಪ್ರಸಿದ್ಧಿ ಹೊಂದಿದೆ. ರಾಜ್ಯದ ಹಲವಾರು ಸಂಭ್ರಮಗಳಲ್ಲಿ ನಾವು ಭಾಗಿಯಾಗಿದ್ದೇವೆ. ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ನಮಗೆ ಸೂಕ್ತ ಅವಕಾಶ ನೀಡಿದ್ದಲ್ಲಿ ನಮ್ಮ ಕಾರ್ಯದಕ್ಷತೆಯನ್ನು ತೋರುತ್ತೇವೆ ಎಂದರು.

ಈ ಸಂದರ್ಭದಲ್ಲಿ ಶಾಸಕ ತನ್ವೀರ್ ಸೇಠ್, ನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಮುಖಂಡರಾದ ಅಬ್ದುಲ್ಲಾ ಮತ್ತು ಸ್ಥಳೀಯ ನಗರಪಾಲಿಕೆ ಸದಸ್ಯರು ಹಾಜರಿದ್ದರು.

ಪುಸ್ತಕ ಮೇಳಗಳು ಜ್ಞಾನ ಸರೋವರವಿದ್ದಂತೆ: ಜೇಬರ



ಮೈಸೂರು, ಅ.19(ಎಸ್‌ಪಿಎನ್)–ಸಾರಸ್ವತ ಲೋಕದ ಪುಸ್ತಕ ಮೇಳಗಳು ಜ್ಞಾನದ ಸರೋವರವಿದ್ದಂತೆ. ಈ ಮೇಳದಲ್ಲಿ ಎಲ್ಲಾ ವರ್ಗದ ಸಾಹಿತಿಗಳ ಪುಸ್ತಕಗಳು ಒಂದೇ ಸೂರಿನಡಿ ದೊರೆಯುತ್ತವೆ ಎಂದು ಹಿರಿಯ ಲೇಖಕ ಹಾಗೂ ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ(ಜೇಬರ) ಅಭಿಪ್ರಾಯಪಟ್ಟರು.

ಮೈಸೂರು ವಿವಿ ಓವೆಲ್ ಮೈದಾನದಲ್ಲಿ ಕರ್ನಾಟಕ ಜಾನಪದ, ಸಾಹಿತ್ಯ, ಯಕ್ಷಗಾನ, ನಾಟಕ, ಸಂಗೀತ, ನೃತ್ಯ, ಶಿಲ್ಪಕಲಾ ಹಾಗೂ ಲಲಿತಾಕಲಾ ಸಹಯೋಗದೊಂದಿಗೆ ಆಯೋಜಿಸಿದ್ದ ಮೈಸೂರು ದಸರಾ ಮಹೋತ್ಸವ–2023ರ ನಾಲ್ಕನೇ ದಿನದ 'ಕನ್ನಡ ಪುಸ್ತಕಗಳ ರಿಯಾಯತಿ ಮಾರಾಟ ಮೇಳ'ದಲ್ಲಿ 'ಸಾಹಿತಿಗಳೊಂದಿಗೆ ಸೆಲ್ಫಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶ್ವ ವಿಖ್ಯಾತ ಮೈಸೂರು ದಸರಾ ಸಂದರ್ಭದಲ್ಲಿ ಸಂಸ್ಕೃತಿ, ಸಾಹಿತ್ಯ, ನೃತ್ಯ, ಜಾನಪದ, ಶಾಸ್ತ್ರೀಯ ಸಂಗೀತ ಸೇರಿದಂತೆ ಭಾರ ತೀಯ ಪರಂಪರೆಯ ವಿವಿಧ ಪ್ರಾಕಾರಗಳು ಈ ಉತ್ಸವ ದಲ್ಲಿ ಮಾತ್ರ ಕಾಣಲು ಸಾಧ್ಯ. ದಸರಾ ಸಂದರ್ಭದಲ್ಲಿ ಸಣ್ಣ ಹುಡುಗನಿಂದ ವಯಸ್ಸಾದವರೂ ಬಹಳ ಸಂತೋಷದಿಂದ ಭಾಗಿಯಾಗುತ್ತಿದ್ದಾರೆ. ಇದು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದು ಸಂತೋಷದ ಸಂಗತಿ. ಈ ವೇದಿಕೆ ಎದುರಿನ ಅಭಿರುಚಿ ಪ್ರಕಾಶನದ ಮಳಿಗೆ ಇದೆ. ಅದನ್ನು ಆ ಹೆಸರು ನೋಡಿದಾಗ ನನಗೆ ನನ್ನಲ್ಲಿರುವ ಅಭಿರುಚಿ ಬಗ್ಗೆ ಹೇಳಿಕೊಳ್ಳಬೇಕು ಎನಿಸುತ್ತದೆ ಎಂದು ಹೇಳಿದರು.

ಕಾರ್ಯ ಕ್ರಮದ ನಂತರ ಪುಸ್ತಕ ಮೇಳದ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ, ತಮಗಿಷ್ಟದ ಪುಸ್ತಕಗಳನ್ನು ತಿರುವಿ ಹಾಕಿದರು. ಈ ಸಂದರ್ಭದಲ್ಲಿ ಪುಸ್ತಕ ಪ್ರೇಮಿಗಳ ಜೊತೆ ಸೆಲ್ಫಿ ಕ್ಲಿಕ್ಕಿಸಿಕೊಂಡರು.

ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಪ್ರೊ.ನಂಜಯ್ಯ ಹೊನ್ನೂರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿ, ಈ ಬಾರಿ ಪುಸ್ತಕ ಮೇಳದಲ್ಲಿ ನಮ್ಮ ಪ್ರಸಾರಾಂಗದ ಮಳಿಗೆಗೆ ಭೇಟಿ ನೀಡುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಪುಸ್ತಕ ಮೇಳ ಆರಂಭವಾಗಿ ನಾಲ್ಕೇ ದಿನಕ್ಕೆ ಅಂದಾಜು 1.5ಲಕ್ಷದಷ್ಟು ಪುಸ್ತಕಗಳನ್ನು ಓದುಗರ ಖರೀದಿಸಿರುವುದು ಸಂತೋಷದ ಸಂಗತಿ ಎಂದರು.

ಡಾ.ಎಸ್.ಎಲ್.ಭೈರಪ್ಪ ರಚಿತ ಧರ್ಮಶ್ರೀ, ತಂತು, ಕುವೆಂಪು ರಚಿತ ಪುಸ್ತಕಗಳು, ಪೂರ್ಣಚಂದ್ರ ತೇಜಸ್ವಿ ರಚಿತ ಕಾದಂಬರಿಗಳು, ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ರಚಿತ ಅರ್ಧನೇಮಿ ಪುರಾಣ, ಪ್ರೊ.ಎಂ.ಕೃಷ್ಣೇಗೌಡ ರಚಿತ ಜಲದ ಕಣ್ಣು ಹಾಗೂ ಪ್ರೇಮಬಿಕ್ಕು, ಕೆ.ಸಿ.ಶಿವಪ್ಪ ರಚಿತ ವಚನ ದರ್ಶನ ಸೇರಿದಂತೆ ಇತರೆ ಪುಸ್ತಕಗಳಿಗೆ ಹೆಚ್ಚಿನ ಬೇಡಿಕೆ ಇದೆ ಎಂದು ಚಿಂತನಚಿತ್ತಾರ ಮಳಿಗೆಯ ಮಾರಾಟ ಪ್ರತಿನಿಧಿ ಪತ್ರಿಕೆಗೆ ಮಾಹಿತಿ ನೀಡಿದರು. ವೇದಿಕೆಯಲ್ಲಿ ಜಾನಪದ ಗಾಯಕ ಜಿ.ಅಮ್ಮ ರಾಮಚಂದ್ರ ಜಾನಪದ ಗೀತೆಗಳನ್ನು ಹಾಡಿದರು. ಪುಸ್ತಕ ಮೇಳದ ಸಂಸ್ಕೃತಿ ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

> ಮುಂದಿನ ದಸರಾ ಪುಸ್ತಕ ಮೇಳದಲ್ಲಿ ಬೇರೆಬೇರೆ ವೇದಿಕೆಗಳಲ್ಲಿ ಆಯೋಜಿಸುವ ಕವಿಗೋಷ್ಠಿ, ವಿಚಾರಗೋಷ್ಠಿ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕಾರ್ಯಕ್ರಮಗಳನ್ನು ಜೋಡಣೆ ಮಾಡಿ ಒಂದೇ ವೇದಿಕೆಯಲ್ಲಿ 'ಮಿನಿ ಸಾಹಿತ್ಯ ಸಮ್ಮೇಳನ'ದಂತೆ ಆಯೋಜನೆ ಮಾಡಲು ಜಿಲ್ಲಾಡಳಿತ ಕ್ರಮವಹಿಸಬೇಕು. ಇದರಿಂದ ದಸರಾ ಪುಸ್ತಕ ಮೇಳ, ಕವಿಗೋಷ್ಠಿ, ವಿಚಾರಗೋಷ್ಠಿಗೆ ಹೆಚ್ಚಿನ ಓದುಗರು, ಕೇಳುಗರು ಬರುವುದರಿಂದ ಪುಸ್ತಕೋದ್ಯಮ ಚೇತರಿಕೆಗೆ ಅವಕಾಶವಿದೆ ಹಾಗೂ ಮೈಸೂರು ದಸರಾ ಮಹೋತ್ಸವ ಶೈಕ್ಷಣಿಕವಾಗಿಯೂ ಯಶಸ್ವಿ ಆಚರಣೆಯಾಗುತ್ತದೆ.
>
> **–ಡಾ.ನಂಜಯ್ಯ ಹೊನ್ನೂರು, ನಿರ್ದೇಶಕರು, ಮೈಸೂರು ವಿವಿ ಪ್ರಸಾರಾಂಗ**

ಅ.26, ಐಐಎಂ ಬೆಂಗಳೂರು ಸುವರ್ಣ ಮಹೋತ್ಸವಕ್ಕೆ ರಾಷ್ಟ್ರಪತಿ ಮುರ್ಮು ಚಾಲನೆ

ಬೆಂಗಳೂರು: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಐಐಎಂ ಬೆಂಗಳೂರು ಸುವರ್ಣ ಮಹೋತ್ಸವ ಪ್ರತಿಷ್ಠಾನ ಸಪ್ತಾಹವನ್ನು ಅ.26ರಂದು ಉದ್ಘಾಟಿಸಲಿದ್ದಾರೆ ಎಂದು ಉನ್ನತ ಶಿಕ್ಷಣ ಸಂಸ್ಥೆ ತಿಳಿಸಿದೆ. ಸುವರ್ಣ ಮಹೋತ್ಸವದ ಅಂಗವಾಗಿ ಐಐಎಂ ಬೆಂಗಳೂರು ಸರಣಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಮೊದಲ ದಿನ(ಅ.26) ಐಐಎಂಬಿ ಆಡಿಟೋರಿಯಂನಲ್ಲಿ ಸಂಜೆ 4ರಿಂದ ಸಂಜೆ 5ರವರೆಗೆ ನಡೆಯಲಿರುವ ಸಮಾರಂಭದಲ್ಲಿ ರಾಷ್ಟ್ರಪತಿ ಮುರ್ಮು ಭಾಷಣ ಮಾಡಲಿದ್ದಾರೆ. ನಂತರ ಐಐಎಂಬಿ ಕ್ಯಾಂಪಸ್‌ನಲ್ಲಿ ಪುಸ್ತಕ ಬಿಡುಗಡೆ ಹಾಗೂ ಚಲನಚಿತ್ರ ಪ್ರದರ್ಶನ ನಡೆಯಲಿದೆ. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸಮಾರಂಭದಲ್ಲಿ ಭಾಗವಹಿಸಿ, ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಐಐಎಂ ಬೆಂಗಳೂರು ಆಡಳಿತ ಮಂಡಳಿ ಅಧ್ಯಕ್ಷ ಡಾ.ದೇವಿಪ್ರಸಾದ್ ಶೆಟ್ಟಿ ಮತ್ತು ಐಐಎಂ ಬೆಂಗಳೂರು ನಿರ್ದೇಶಕ ಪ್ರೊ ರಿಷಿಕೇಶ ಟಿ.ಕೃಷ್ಣನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.



ಮೈಸೂರು ದಸರಾ ಪ್ರಯುಕ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹುಯಿಲಾಳು ಗ್ರಾಮದ ಶ್ರೀ ಸಿದ್ದೇಶ್ವರ ಕೃಪಾಪೋಷಿತ ನಾಟಕ ಮಂಡಳಿ ಸಹಯೋಗದೊಂದಿಗೆ ಬುಧವಾರ ಪುರಭವನದಲ್ಲಿ ನಡೆದ ದಕ್ಷಸುತೆಯರ ಕಲ್ಯಾಣ ನಾಟಕದಲ್ಲಿ ದಕ್ಷಬ್ರಹ್ಮನ ಪಾತ್ರಧಾರಿ ಹುಯಿಲಾಳು ರಾಮಸ್ವಾಮಿ ಅವರನ್ನು ಎಪಿಎನ್ ಪ್ರಾಪರ್ಟೀಸ್ ವ್ಯವಸ್ಥಾಪಕ ನಿರ್ದೇಶಕ ನಾಗೇಶ್ ಅಭಿನಂದಿಸಿದರು. ಈ ವೇಳೆ ಹರೀಶ್ ರೆಡ್ಡಿ, ಸಂಪತ್‌ಕುಮಾರ್, ಜಯರಾಮು, ಮಂಜುನಾಥ್ ಪ್ರಸಾದ್, ತೋಷಿತ್ ರಾಮಸ್ವಾಮಿ ಉಪಸ್ಥಿತರಿದ್ದರು.

ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯ ಪಾರ್ಶ್ವವಾಯು ಕೇಂದ್ರಕ್ಕೆ ಪ್ರತಿಷ್ಠಿತ ಕ್ಯೂಎಐ, ಐಎಸ್‌ಕ್ಯುಯುಎ ಮಾನ್ಯತೆ

ಮೈಸೂರು,ಅ.19–ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯು ಪ್ರತಿಷ್ಠಿತ ಅಂತಾರಾಷ್ಟ್ರೀಯ ಮಟ್ಟದ ಮಾನ್ಯತೆ ಪಡೆದಿದೆ. ಇಂಟರ್‌ನ್ಯಾಷನಲ್ ಸೊಸೈಟಿ ಫಾರ್ ಕ್ವಾಲಿಟಿ ಇನ್ ಹೆಲ್ತ್‌ಕೇರ್ ಎಕ್ಸ್‌ಟರ್ನಲ್ ಎವಲ್ಯೂಷನ್ ಅಸೋಸಿಯೇಷನ್‌ನ ಅಂಗಸಂಸ್ಥೆಯಾದ ಪ್ರತಿಷ್ಠಿತ ಭಾರತದ ಗುಣಮಟ್ಟ ಮತ್ತು ಮಾನ್ಯತೆ ಸಂಸ್ಥೆಯ ಮಂಡಳಿಯಿಂದ (ಬೋರ್ಡ್ ಆಫ್ ದ ಕ್ವಾಲಿಟಿ ಅಂಡ್ ಅಕ್ರೆಡಿಟೇಷನ್ ಇನ್ಸ್‌ಟಿಟ್ಯೂಟ್ಸ್ ಸೆಂಟರ್ ಫಾರ್ ಅಂಡ್ ಸೋಶಿಯಲ್ ಕೇರ್ ಇನ್ ಇಂಡಿಯಾ) ಈ ಅಂತಾರಾಷ್ಟ್ರೀಯ ಮಾನ್ಯತೆ ಸಿಕ್ಕಿದೆ.

ಅಪೋಲೊ ಆಸ್ಪತ್ರೆಯ ಕಾರ್ಯಕಾರಿ ಉಪಾಧ್ಯಕ್ಷ ಡಾ.ಪ್ರೀತಂರೆಡ್ಡಿ, ಕ್ವಾಲಿಟಿ ಅಂಡ್ ಅಕ್ರೆಡಿಟೇಶನ್ ಇನ್‌ಸ್ಟಿಟ್ಯೂಟ್ (ಕ್ಯೂಎಐ) ಮತ್ತು ಐಎಸ್‌ಕ್ಯುಯುಎ ಸಂಸ್ಥೆಯವರು ರೂಪಿಸಿರುವ 64 ಚಿಕಿತ್ಸಾ ಮಾನದಂಡಗಳನ್ನು ನಾವು ಯಶಸ್ವಿಯಾಗಿ ಪೂರೈಸಿದ್ದೇವೆ. ಇಂದು ಅಪೋಲೊ ಆಸ್ಪತ್ರೆಯು ಅಂತಾರಾಷ್ಟ್ರೀಯ ಮಾನದಂಡಗಳಿಗೆ ಅನುಸಾರವಾಗಿದ್ದು, ಜಾಗತಿಕ ಆರೋಗ್ಯ ಸೇವೆಯ ಮಟ್ಟಕ್ಕೆ ಸಮನಾಗಿದೆ ಎಂಬುದು ಈ ಮೂಲಕ ಸಾಬೀತಾಗಿದೆ ಎಂದು ತಿಳಿಸಿದ್ದಾರೆ.

ಹಿರಿಯ ನರರೋಗ ತಜ್ಞ ಮತ್ತು ಮೈಸೂರು ಅಪೋಲೊ ಬಿಜಿಎಸ್ ಆಸ್ಪತ್ರೆಯಲ್ಲಿ ಪಾರ್ಶ್ವವಾಯು ಚಿಕಿತ್ಸಾ ಸೇವೆಯಲ್ಲಿರುವ ಡಾ.ಆಮಿರ್ ಮೋಯಿನ್ ಅವರು, ನಾವು ಕೇವಲ ಪಾರ್ಶ್ವವಾಯುಗೆ ಚಿಕಿತ್ಸೆ ನೀಡುವುದಷ್ಟೇ ಅಲ್ಲ, ರೋಗಿಗಳು ಚೇತರಿಸಿಕೊಳ್ಳಲು ಆತ್ಮವಿಶ್ವಾಸ ತುಂಬುತ್ತಿದ್ದೇವೆ, ಉಪಶಮನಕ್ಕೆ ಹೆಚ್ಚಿನ ಗಮನ ಕೊಟ್ಟಿದ್ದೇವೆ. ಅತ್ಯಾಧುನಿಕ ಪಾರ್ಶ್ವವಾಯು ಕೇಂದ್ರ ಎಂಬ ಈ ಮಾನ್ಯತೆಯು ಪಾರ್ಶ್ವವಾಯು ಪೀಡಿತರಲ್ಲಿ ಪರಿಣಾಮಕಾರಿ ಬದಲಾವಣೆ ತರುತ್ತಿರುವ ನಮ್ಮ ಶ್ರಮವನ್ನು ಎತ್ತಿಹಿಡಿದಿದೆ ಎಂದು ಅವರು ತಿಳಿಸಿದ್ದಾರೆ.

ಮುಖ್ಯ ನರರೋಗ ತಜ್ಞ ಮತ್ತು ಕೇಂದ್ರದ ಮುಖ್ಯಸ್ಥ ಡಾ.ಸೋಮನಾಥ್ ವಾಸುದೇವ್ ಅವರು, ನಮ್ಮ ತಂಡದ ಸಮರ್ಪಣಾ ಭಾವ ಮತ್ತು ಪರಿಣತಿಯಿಂದ ಈ ಮಾನ್ಯತೆ ಪಡೆಯುವುದು ಸಾಧ್ಯವಾಗಿಸಿದೆ ಎಂದು ತಿಳಿಸಿದ್ದಾರೆ.

ಕೆಬಿಜಿ ಅವರಿಗೆ ಅಭಿನಂದನೆ



ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪಡೆದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರನ್ನು ಮೈಸೂರಿನ ಕನ್ನೇಗೌಡನ ಕೊಪ್ಪಲಿನ ಯುವಕ ಮಿತ್ರರು ಶಾಸಕ ಕೆ.ಹರೀಶ್‌ಗೌಡ ಅವರ ನೇತೃತ್ವದಲ್ಲಿ ಅಭಿನಂದಿಸಿದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಪಾಲಿಕೆ ಸದಸ್ಯ ಕೊಪ್ಪಲ್ ಶಿವಕುಮಾರ್, ಎಸ್.ಎಂ.ಕೃಷ್ಣ ಅಭಿಮಾನಿ ಬಳಗದ ವಿಕ್ರಾಂತ್ ಪಿ.ದೇವೇಗೌಡ, ಭೈರವ ಗ್ರೂಪ್ ಮಾದೇವ್, ಬಂದಂತಮ್ಮ ಕಾಳಮ್ಮ ಸಮುದಾಯ ಭವನದ ಸಹ ಕಾರ್ಯದರ್ಶಿ ಬಿ.ಬಸವರಾಜು, ಆರ್.ಬಸಪ್ಪ, ಬಸವೇಗೌಡರ ಪುತ್ರ ರಂಗಪ್ಪ, ನಾಗಭೂಷಣ್, ಶ್ಯಾಮಲ ಗ್ರೂಪ್‌ನ ಆನಂದ್, ಎನ್‌ಐಐ ಶ್ರೀನಿವಾಸ್, ಮಹದೇವ್ ಪಾಂಡೆ ಇನ್ನಿತರರಿದ್ದರು.

ಗ್ರಾಮ ಒನ್ ಕೇಂದ್ರಗಳ ಸ್ಥಾಪನೆಗೆ ಅರ್ಹರಿಂದ ಅರ್ಜಿ ಆಹ್ವಾನ

ಮೈಸೂರು, ಅ.19–ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳು ಒಂದೇ ಸೂರಿನಡಿ ನಡೆಸಲು ಗ್ರಾಮ ಪಂಚಾಯಿತಿ ನಿರ್ಧರಿಸಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಸ್ಥಾಪಿಸಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಗ್ರಾಮೀಣ ಜನರಿಗೆ ತಮ್ಮ ಸಮೀಪದಲ್ಲಿ ಸರ್ಕಾರದ ಹಲವು ಸೇವೆಗಳನ್ನು ತಲುಪುವಂತೆ ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ನೂತನ ಯೋಜನೆಗಳನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಅನುಷ್ಠಾನಗೊಳಿಸಿದ್ದು, ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಒನ್ ಕೇಂದ್ರಗಳಿಗೆ https: //uucms. karnataka.gov.in ಮತ್ತು https:/ /www.cavamysore.karnataka. gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಬೇರೆ ಯಾವುದೇ ರೀತಿಯಲ್ಲೂ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಗೋಲ್‌ಗೊಪ್ಪ ತಿನ್ನಲೂ 'ಸಖಿಯರು' ಸೈ



ಮೈಸೂರು,ಅ.19–ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ ಆಯೋಜಿಸಿದ್ದ ಸಖಿ ದಸರಾ ಉತ್ಸವ ಸಡಗರ–ಸಂಭ್ರಮದಿಂದ ತೆರೆಕಂಡಿತು.

ಸುಮಾರು 70ಕ್ಕೂ ಹೆಚ್ಚು ಸಖಿಯರು ವಿವಿಧ ಮನರಂಜನಾ ಆಟಗಳನ್ನು ಆಡಿ ಗೋಲ್‌ಗೊಪ್ಪ ತಿಂದು ಸಂಭ್ರಮಿಸಿದರು.

ಫೌಂಡೇಶನ್‌ನ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ನೇತೃತ್ವದಲ್ಲಿ ಗೀತಾ ಆರ್. ಸೀತಾ, ಬಿಂದಿ ಲಗಾವ್ ಬಲೂನ್ ಚಡಾವ್ ಪಕ್ಕಾ 420 ಹಾಗೂ ಗೋಲ್‌ಗೊಪ್ಪ ತಿನ್ನುವ ಸ್ಪರ್ಧೆಗಳನ್ನು ಮಹಿಳೆಯರಿಗಾಗಿ ಆಯೋಜಿಸಲಾಗಿತ್ತು.

ಶ್ರೀಮತಿ ಶಿಲ್ಪ ವಿಷಕಂಠ ಅವರು 30 ಸೆಕೆಂಡುಗಳಲ್ಲಿ 6 ಗೋಲ್‌ಗೊಪ್ಪ ತಿನ್ನುವುದರ ಮೂಲಕ ಸ್ಪರ್ಧೆಯಲ್ಲಿ ವಿಜೇತರಾದರು. ಉಳಿದ ಸ್ಪರ್ಧೆಗಳಲ್ಲಿ ಸಹನಾ, ಕಾವ್ಯ ರಾಜು, ಸುನಿತಾ, ಕುಸುಮ, ಪದ್ಮಿನಿ, ವೈಷ್ಣವಿ, ವತ್ಸಲ, ದೀಪಾ, ವೀಣಾ ರಾಜಶೇಖರ್ ಹಾಗೂ ನಾಗರತ್ನ ವಿಜೇತರಾಗಿ ಬಹುಮಾನವಾಗಿ ಸೀರೆಗಳನ್ನು ತಮ್ಮದಾಗಿಸಿಕೊಂಡರು.

ಮೈಸೂರಿನ ಶೃಂಗೇರಿ ಅಭಿನವ ಶಂಕರ ಮಠದಲ್ಲಿ ನವರಾತ್ರಿ ನಾಲ್ಕನೇ ದಿನದಂದು ಶ್ರೀ ಶಾರದಾ ಪರಮೇಶ್ವರಿಗೆ ವಿಶೇಷ ಅಲಂಕಾರ ಪೂಜೆ ನೈವೇದ್ಯ, ಹೂವಿನ ಅಲಂಕಾರ ಹಾಗೂ ಗರುಡವಾಹನ ಅಲಂಕಾರವನ್ನು ವಿಶೇಷವಾಗಿ ಏರ್ಪಡಿಸಲಾಗಿತ್ತು. ಭಕ್ತ ಮಹಾಶಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಶಾರದೆಯ ಕೃಪೆಗೆ ಪಾತ್ರರಾದರು.

ಇತ್ತೀಚಿನ ಮಕ್ಕಳಿಗೆ ಕನ್ನಡ ಸಾಹಿತ್ಯದ ಪರಿಚಯವೇ ಇಲ್ಲ

● ಹಿರಿಯ ರಂಗಕರ್ಮಿ ಚಿತ್ಕಳಾ ಬಿರಾದಾರ್ ಬೇಸರ ● ಮಹಿಳಾ ಕವಿಗೋಷ್ಠಿಯಲ್ಲಿ ಮುದನೀಡಿದ ಸ್ವಾರಸ್ಯಕರ ಕವಿತೆಗಳು



ಮೈಸೂರು,ಅ.19(ಎಸ್‌ಪಿಎನ್)– ಇತ್ತೀಚಿನ ದಿನಗಳಲ್ಲಿ ನಮ್ಮ ಮಕ್ಕಳಿಗೆ ಕವಿತೆ, ಭಾವಗೀತೆ, ಭಕ್ತಿಗೀತೆಗಳನ್ನು ಕೇಳಿಸುತ್ತಿಲ್ಲ. ಈ ಸನ್ನಿವೇಶದಿದ ಕನ್ನಡ ಸಾಹಿತ್ಯವೇ ಪರಿಚಯವಿಲ್ಲದಂತೆ ಮಕ್ಕಳ ಬೆಳವಣಿಗೆಯಾಗುತ್ತಿದೆ. ಈ ಬೆಳವಣಿಗೆ ಮಾತೃಭಾಷೆಗೆ ಮಾಡುವ ಅವಮಾನ ಎಂದು ಹಿರಿಯ ರಂಗಕರ್ಮಿ ಚಿತ್ಕಳಾ ಬಿರಾದಾರ್ ಬೇಸರ ಹೊರಹಾಕಿದರು.

ಮೈಸೂರು ವಿವಿ ಮಾನಸಗಂಗೋತ್ರಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ದಸರಾ ಕವಿಗೋಷ್ಠಿ ಉಪ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 2ನೇ ದಿನ ಮಹಿಳಾ ಕವಿಗೋಷ್ಠಿಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ನಮ್ಮೊಳಗೊಬ್ಬ ಕವಿ–ಕವಿತೆ ಇದೆ ಎಂಬುದನ್ನೇ ಇತ್ತೀಚಿನವರು ಮರೆತಿದ್ದಾರೆ. ಮಹಿಳೆಯರು ಹೆಚ್ಚಾಗಿ ಬರೆಯುವ ಕವಿತೆಗಳೆಲ್ಲವು ಅಳುಬುರುಕಿ, ಅಂಜುಬುರುಕಿ ಬಗ್ಗೆಯೇ ಇರುತ್ತವೆ. ಬದಲಾದ ಕಾಲಘಟ್ಟದಲ್ಲಿ ಅದನ್ನೆಲ್ಲ ನಿಲ್ಲಿಸಿ, ಸಾಧನೆ ಮಾಡುತ್ತಿರುವ ಮಹಿಳಾ ಸಾಧಕರ ಬಗ್ಗೆ, ಎಲ್ಲರೂ ಸಂತೋಷ ಪಡುವ ವಿಷಯಗಳ ಬಗ್ಗೆ ಹೆಚ್ಚಾಗಿ ಕವಿತೆಗಳನ್ನು ಬರೆದರೆ ಬೇರೆಯವರಿಗೂ ಇದು ಸ್ಫೂರ್ತಿ ಆಗುತ್ತದೆ ಎಂದು ಕಿವಿಮಾತು ಹೇಳಿದರು.

ಇತ್ತೀಚಿನ ಮಕ್ಕಳಿಗೆ ಕನ್ನಡದ ಪದ್ಯಗಳೇ ಬರುತ್ತಿಲ್ಲ. ಯಾವ ಮಕ್ಕಳನ್ನು ಕೇಳಿದರು ಇಂಗ್ಲೀಷ್ ಭಾಷೆಯ ರೈಮ್ಸ್‌ಗಳನ್ನೇ ಕೇಳುತ್ತೇವೆ. ಪೋಷಕ ರಾದವರು ಈ ಕಡೆ ಗಮನಹರಿಸಬೇಕು. ಸಾಧ್ಯವಾದಷ್ಟೂ ಮಕ್ಕಳನ್ನು ಕವಿತೆ, ನಾಟಕ, ಸಾಹಿತ್ಯ, ಕವಿತೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವಂತೆ ಮಾಡಬೇಕು ಎಂದರು.

ಇತ್ತೀಚಿನ ಜನರು ಪರಸ್ಪರ ಮಾತನಾಡುವುದೇ ಕಷ್ಟ ಆಗಿದೆ. ಅಂತಹದರಲ್ಲಿ ಕವಿತೆಗಳನ್ನು ಎಲ್ಲಿ ಕೇಳುವರು ಎಂಬ ಪ್ರಶ್ನೆಗೆ ಬಂದು ನಿಂತಿದೆ ಈಗಿನ ಪ್ರಪಂಚ. ಇದೆಲ್ಲಾ ಬಹುಶಃ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಮೊದಲೇ ಅರಿವಿತ್ತೇನೋ, ಅದಕ್ಕಾಗಿಯೇ ಪ್ರತಿವರ್ಷ ದಸರಾದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು. ಅಲ್ಲದೆ ಸಾಧ್ಯವಾದಷ್ಟು ಮನೆಯಲ್ಲಿರುವ ದೇವರ ಕೋಣೆಗಳಲ್ಲಿ ಮಕ್ಕಳು ಕಾಲ ಕಳೆಯುವಂತೆ ಮಾಡಿದರೆ, ಅವರ ಮನಸ್ಸಿನಲ್ಲಿ ಆಧ್ಯಾತ್ಮ ಚಿಂತನೆಗಳು ಮೂಡುತ್ತವೆ. ಅವರಲ್ಲಿ ನೈತಿಕ ಮೌಲ್ಯ ಬೆಳೆಯುತ್ತದೆ ಎಂದು ಪೋಷಕರಿಗೆ ಸಲಹೆ ನೀಡಿದರು. ನಂತರ **'ಕಿತ್ ನೆಟ್ಟ ಸಸಿ'** ಕಾವ್ಯ ವಾಚಿಸಿದರು.

ಕವಿ ಸತೀಶ್ ಕುಲಕರ್ಣಿ ಮಾತನಾಡಿ, ಇತ್ತೀಚೆಗೆ ಎಲ್ಲರೂ ಮಣ್ಣಿನ ಮಗ ಎಂದು ಹೇಳುತ್ತಾರೆ. ಆದರೆ, ನಾನು ಮಣ್ಣಿನ ಮಗನಲ್ಲ, ನಾನು ಹೆಣ್ಣಿನ ಮಗ. ಬಹಳಷ್ಟು ಕವಯತ್ರಿಯರ ಮಧ್ಯೆ ನಾನು ವೇದಿಕೆಯಲ್ಲಿರುವುದು ಬಹಳ ವಿಶೇಷವೆನಿಸುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿ, 'ಸವೆದ ಚಪ್ಪಲಿಗಳು' ಕವಿತೆ ವಾಚಿಸಿದರು.

ಅನೇಕ ಜಿಲ್ಲೆಗಳಿಂದ ಬಂಧಿರುವಂತಹ ಮಹಿಳಾ ಕವಯತ್ರಿಯರು ತಮ್ಮ ಕವಿತೆಗಳ ರಸದೌತಣ ಉಣಬಡಿಸಿದರು.

ಲಾವಣ್ಯ ಪ್ರಭಾ, ಹೇಮಲತ ವಸ್ತ್ರದ್, ಹೆಚ್.ಎ.ಮಮತಾ, ದೀಪ್ತಿ ಭದ್ರಾವತಿ, ಶುಭಾ ಮರವಂತೆ, ಎಂ.ಯು.ಶ್ವೇತಾ, ವಿಭಾ ಪುರೋಹಿತ್, ಸುಚಿತ್ರಾ ಹೆಗಡೆ, ಚೈತ್ರಾ ಶಿವಯೋಗಿಮಠ, ವಿಜಯಲಕ್ಷ್ಮೀ ಮನಾಪುರ, ಮಮತಾ ಅರಸೀಕರೆ, ಅನಸೂಯ ಜಹಾಗೀರದಾರ, ಹಂಚಿಟ್ಟಿರ ಫ್ಯಾನ್ಸಿ ಮುತ್ತಣ್ಣ, ಸುಜಾತ ಅಕ್ಕಿ, ಹೆಚ್.ಕೆ.ಹಸೀನಾ, ವಿಜಯಲಕ್ಷ್ಮೀ ನಾಗೇಶ್, ರೇಣುಕಾ ರಮಾನಂದ, ಕಲಾಭಾಗ್ವತ್, ಎಂ.ಗೀತಾಕುಮಾರಿ, ಶಾಂತ ಅತ್ನಿ, ಸುರಭಿ ಲತಾ, ಸುನೀತಾ ರಾಜು, ಎಂ.ಕುಸುಮ, ಎಂ.ಕನ್ನಿಕಾ, ಕಮಲಾ ರಾಜೇಶ, ರಾಜಶ್ರೀ ಕಿಶೋರ್ ಇಲ್ಲೂರು, ಶಾಂತಾ ಜಯಾನಂದ, ಮೌಲ್ಯ ಸ್ವಾಮಿ, ಮಿಸ್ರಿಯ ಐ ಫಜೀರ್, ವಿಜಯಲಕ್ಷ್ಮಿ ಕೊಟಗಿ, ರೂಪಶ್ರೀ ಕಲ್ಲಿಗನೂರು, ಕೆ.ವಿ.ನೇತ್ರಾವತಿ, ಕಾವ್ಯ ಮನೆ ಮನೆ, ಯಮುನಾ ಗಾಂವ್ಕರ್, ಎಂ.ಎಸ್.ಅನಿತಾ, ಪೂಜಾ ಸಿಂಘೆ, ಕವಿತಾ ಹೆಗಡೆ ಅಭಯಂ, ಸಿ.ತ್ರಿವೇಣಿ, ಗೀತಾಂಜಲಿ, ಶಾಂತಾ ಜಯಾನಂದ, ಸುಮಲತಾ ಸೇರಿದಂತೆ ಇತರೆ ಕವಯತ್ರಿಯರು ಮಹಿಳಾ ಕವಿಗೋಷ್ಠಿಯಲ್ಲಿ ತಮ್ಮ ಕವಿತೆಗಳ ಸಾರವನ್ನು ವಿವರಿಸುವುದರ ಮೂಲಕ 'ಹೆಣ್ಣು ಅಬಲೆಯಲ್ಲ ಸಬಲೆ' ಆಕೆಯ ಶಕ್ತಿ, ಸಾಮರ್ಥ್ಯ, ಸಾಧನೆಯ ಕುರಿತ ಕವನಗಳು ಸಾಹಿತ್ಯಪ್ರಿಯರ ಗಮನ ಸೆಳೆಯಿತು. ಕಾರ್ಯಕ್ರಮದಲ್ಲಿ ದಸರಾ ಸಮಿತಿ ಕಾರ್ಯಾಧ್ಯಕ್ಷೆ, ಡಾ.ವಿಜಯಲಕ್ಷ್ಮಿ ಕರಿಕಲ್, ಡಾ.ಎಂ.ದಾಸೇಗೌಡರು ಹಾಗೂ ಉಪಾಧ್ಯಕ್ಷ ಡಂಡಿಕೆರೆ ನಾಗರಾಜ್ ಸೇರಿದಂತೆ ಇತರರಿದ್ದರು.

> ಕವಿತೆಯ ಬೆನ್ನತ್ತಿ ನಾವು ಹೋಗಬೇಕೇ ವಿನಃ ಕವಿಗೋಷ್ಠಿ ಬೆನ್ನತ್ತಿ ಅಲ್ಲ. ನಾನು ಕಲಾವಿದೆ. ಆದರೆ ಇಲ್ಲಿ ಬಹಳಷ್ಟು ಕವಯತ್ರಿಯರು ಕವನ ಆಸ್ವಾದಿಸುವವರಿದ್ದಾರೆ. ಮೈಸೂರು ದಸರಾದಲ್ಲಿ ಕವಿಗೋಷ್ಠಿಗಳನ್ನು ನಡೆಸಿ, ತಾಯಿ ಕನ್ನಡಾಂಬೆಗೆ ಈ ತರಹದ ಒಂದು ಸೇವೆಯು ಪ್ರತಿ ವರ್ಷ ಸಾಗುತ್ತಿರಲಿ.
>
> **–ಸವಿತಾ ನಾಗಭೂಷಣ್, ಕವಯಿತ್ರಿ**

ಮೈಸೂರು ಮಿತ್ರ ಶುಕ್ರವಾರ 20 ಅಕ್ಟೋಬರ್ 2023

ದಸರಾ ನಮ್ಮ ಕಲೆ, ಸಂಸ್ಕೃತಿಯ ಪ್ರತೀಕ

ಸಚಿವ ಕೃಷ್ಣ ಭೈರೇಗೌಡ



ಶ್ರೀರಂಗಪಟ್ಟಣ, ಅ.19– ಕಲೆ, ಸಂಸ್ಕೃತಿ, ಭಾಷೆ, ಪರಂಪರೆ, ಇತಿಹಾಸ ಉಳಿಯ ಬೇಕಾದರೆ ದಸರಾದಂತಹ ಕಾರ್ಯಕ್ರಮ ಗಳು ನಡೆಯಬೇಕು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.

ಪಟ್ಟಣದ ಶ್ರೀರಂಗ ವೇದಿಕೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಐತಿಹಾಸಿಕ ದಸರಾ ಕಾರ್ಯಕ್ರಮಗಳಿಂದ ಇತಿಹಾಸ ಮರುಕಳಿಸಿದೆ. ದಸರಾ ಹಬ್ಬ ಆಚರಣೆ ಮಾಡುವುದು ಒಂದೆಡೆಯಾದರೇ, ನಾಡಿನಲ್ಲಿ ಮಳೆ ಕೊರತೆಯಿಂದ ಜನತೆ ಸಂಕಷ್ಟದಲ್ಲಿದ್ದಾರೆ. ದಸರಾವನ್ನು ದೇಶದ ಎಲ್ಲೆಡೆ ವಿವಿಧ ರೀತಿ ಆಚರಿಸಲಾಗುತ್ತದೆ. ರಾಜ್ಯದಲ್ಲಿ ಬರಗಾಲವಿದ್ದರೂ ಇರುವ ಸಂಪನ್ಮೂಲದಲ್ಲಿ ಸರಳ ಹಾಗೂ ಅರ್ಥ ಪೂರ್ಣವಾಗಿ ದಸರಾ ಆಚರಿಸಲಾಗುತ್ತಿದೆ ಎಂದರು.

ನಾಡಿನ ಪ್ರತೀಕವಾಗಿ ದಸರಾ ಆಚರಣೆ ಪ್ರಾರಂಭವಾಯಿತು. ಸುಮಾರು 600 ವರ್ಷಗಳ ಇತಿಹಾಸವಿರುವ ದಸರಾ ಮೊದಲು ಪ್ರಾರಂಭವಾಗಿದ್ದು ಶ್ರೀರಂಗಪಟ್ಟಣದಲ್ಲಿ ನಂತರ ಮೈಸೂರಿಗೆ ವರ್ಗಾವಣೆಗೊಂಡಿತು. ಅಲ್ಲದೇ ಶ್ರೀರಂಗಪಟ್ಟಣದಲ್ಲಿ ಹಲವು ಕಾರಣಗಳಿಂದ ನಿಂತು ಹೋಗಿದ್ದ ದಸರಾ ಕಾರ್ಯಕ್ರಮವನ್ನು ವಿಜಯಲಕ್ಷ್ಮಿ ಬಂಡಿಸಿದ್ದೇಗೌಡರು ಶಾಸಕರಾಗಿದ್ದ ವೇಳೆ ಸಾಂಪ್ರದಾಯಿಕವಾಗಿ ಪ್ರಾರಂಭಿಸಿದರು. ಶ್ರೀರಂಗಪಟ್ಟಣ ದಸರಾ ಸಂಭ್ರಮ ಹೆಚ್ಚಾಗಿ ಮೈಸೂರು ದಸರಾ ರೀತಿ ಉತ್ತುಂಗಕ್ಕೆ ಏರಲಿ ಎಂದು ಆಶಿಸಿದರು.

ಕಾವೇರಿ ನದಿಯುದ್ದಕ್ಕೂ ಶ್ರೀರಂಗನ ದೇವಾಲಯವಿದೆ. ಇಂತಹ ಇತಿಹಾಸ ವಿರುವ ನೆಲೆಯಲ್ಲಿ ದಸರಾ ಆಚರಿಸುತ್ತಿರುವುದು ವಿಶೇಷವಾಗಿದೆ. ಕೇವಲ ಒಂದು ಜಾತಿ, ಧರ್ಮಕ್ಕೆ ಸೀಮಿತವಾಗದೇ ಎಲ್ಲಾ ಧರ್ಮದವರು ಸೇರಿ ಆಚರಿಸುವ ನಾಡಿನ ಹಬ್ಬ ದಸರಾ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಮೂರು ದಿನಗಳ ಕಾಲ ಶ್ರೀರಂಗಪಟ್ಟಣ ದಸರಾ ಯಶಸ್ವಿಯಾಗಿ ನಡೆದಿದೆ. ಅದಕ್ಕಾಗಿ ಶ್ರಮಿಸಿದ ಜಿಲ್ಲೆಯ ಅಧಿಕಾರಿಗಳು ಹಾಗೂ ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳು. ರೈತರ ಹಿತ ಕಾಪಾಡುವಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ. ಮಳೆ ಕೊರತೆ ಹಾಗೂ ಕಾವೇರಿ ನೀರು ವಿವಾದ ಇಷ್ಟೆಲ್ಲಾ ಸಂಕಷ್ಟವಿದ್ದರೂ ದಸರಾ ನಿಲ್ಲಬಾರದು ಎಂದು ಸಾಂಪ್ರದಾಯಿಕವಾಗಿ ಆಚರಿಸಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಕುಮಾರ್, ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್, ಎಸ್ಪಿ ಎನ್.ಯತೀಶ್, ಎಡಿಸಿ ಡಾ.ನಾಗರಾಜು ಸೇರಿದಂತೆ ಇನ್ನಿತರರಿದ್ದರು.

ಮತ್ತೆ ಅಮೆರಿಕಾಗೆ ಹಾರಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ

- ಚುನಾವಣೆಯಲ್ಲಿ ಗೆದ್ದ ಐದೇ ತಿಂಗಳಿಗೆ 3 ಬಾರಿ ಅಮೆರಿಕಾಕ್ಕೆ
- ಶಾಸಕರ ನಡೆಗೆ ಕ್ಷೇತ್ರದ ಜನತೆ ಬೇಸರ



ಪಾಂಡವಪುರ, ಅ.19– ಕಳೆದ ವಿಧಾನಸಭಾ ಚುನಾವಣೆ ವೇಳೆ ಮತ್ತೆ ನಾನು ಅಮೆರಿಕಾಕ್ಕೆ ಹೋಗಲ್ಲ ಎಂದು ಹೇಳಿ ಇದೀಗ ಪದೇ ಪದೇ ಕ್ಷೇತ್ರ ಬಿಟ್ಟು ಚುನಾವಣೆಯಲ್ಲಿ ಗೆದ್ದ ಐದೇ ತಿಂಗಳಿಗೆ 3ನೇ ಬಾರಿ ಅಮೆರಿಕಾಕ್ಕೆ ತೆರಳಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ ನಡೆಗೆ ಕ್ಷೇತ್ರದ ಜನತೆ ಬೇಸರ ವ್ಯಕ್ತಪಡಿಸಿದ್ದಾರೆ.

ಚುನಾವಣೆಗೂ ಮುನ್ನ ಅಮೆರಿಕಾದಲ್ಲಿ ಉದ್ಯಮಿಯಾಗಿ ಗುರುತಿಸಿಕೊಂಡಿದ್ದ ದರ್ಶನ್ ಪುಟ್ಟಣ್ಣಯ್ಯ ಅವರು ತಮ್ಮ ತಂದೆ ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಅವರ ನಿಧನದ ಬಳಿಕ ರೈತ ಸಂಘದ ಕಾರ್ಯಕರ್ತರ ಒತ್ತಾಯಕ್ಕೆ ಮಣಿದು ರೈತ ಚಳವಳಿ ಹಾಗೂ ರಾಜಕೀಯ ಪ್ರವೇಶಿಸಿದರು. 2018ರ ವಿಧಾನಸಭಾ ಚುನಾವಣೆಯಲ್ಲಿ ಸೋತು ಅಮೆರಿಕಾಕ್ಕೆ ತೆರಳಿದ್ದ ದರ್ಶನ್ ಪುಟ್ಟಣ್ಣಯ್ಯ 5 ವರ್ಷಗಳ ಕಾಲ ಅಲ್ಲೇ ನೆಲೆಸಿ ಮತ್ತೆ 2023ರ ಚುನಾವಣೆಗೆ ವಾಪಸ್ಸಾಗಿದ್ದರು. ಇನ್ನು ಚುನಾವಣೆ ವೇಳೆ ದರ್ಶನ್ ಅಮೆರಿಕಾದಲ್ಲಿನ ನನ್ನ ಎಲ್ಲಾ ಉದ್ಯಮ, ಕಂಪನಿಯನ್ನು ಮಾರಾಟ ಮಾಡಿದ್ದೇನೆ. ನಾನು ಮತ್ತೆ ಅಮೆರಿಕಾಕ್ಕೆ ಹೋಗುವುದಿಲ್ಲ. ಚುನಾವಣೆಯಲ್ಲಿ ಗೆಲ್ಲಲಿ, ಸೋಲಲಿ ಇಲ್ಲಿಯೇ ಇದ್ದು ರೈತ ಚಳವಳಿ ಮುನ್ನಡೆಸುವುದಾಗಿ ಕ್ಷೇತ್ರದ ಮತದಾರರಿಗೆ ಭರವಸೆ ನೀಡಿದ್ದರು. ಅದರಂತೆ ಕ್ಷೇತ್ರದ ಮತದಾರರು ದರ್ಶನ್ ಪುಟ್ಟಣ್ಣಯ್ಯನವರಿಗೆ ಆಶೀರ್ವಾದ ಮಾಡಿ ಕಳೆದ ಚುನಾವಣೆಯಲ್ಲಿ ಗೆಲ್ಲಿಸಿ ಶಾಸಕರನ್ನಾಗಿ ಆಯ್ಕೆ ಮಾಡಿದ್ದರು. ಚುನಾವಣೆಯಲ್ಲಿ ಗೆದ್ದ ಒಂದು ವಾರಕ್ಕೆ ಅಮೆರಿಕಾಕ್ಕೆ ತೆರಳಿದ್ದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮತ್ತೆ ಎರಡು ತಿಂಗಳ ನಂತರ 2ನೇ ಬಾರಿಗೆ ಅಮೆರಿಕಾಕ್ಕೆ ತೆರಳಿ ಆ.15ರ ಸ್ವಾತಂತ್ರ್ಯ ದಿನಾಚರಣೆಗೂ ಅವರು ಆಗಮಿಸಲಿಲ್ಲ. ಈ ವೇಳೆ ಶಾಸಕರ ವಿರುದ್ಧ ಕ್ಷೇತ್ರದಲ್ಲಿ ಸಾಕಷ್ಟು ಟೀಕೆಗಳು ಕೇಳಿ ಬಂದವು. ಸ್ವಾತಂತ್ರ್ಯ ದಿನಾಚರಣೆಗೆ ಬಾರದ ಶಾಸಕರು ಕ್ಷೇತ್ರದ ಜನರ ಸಮಸ್ಯೆ ಹೇಗೆ ಆಲಿಸುತ್ತಾರೆ ಎಂದು ಸ್ವತಃ ರೈತ ಸಂಘದ ಬೆಂಬಲಿಗರೇ ಶಾಸಕರ ನಡೆಯ ಬಗ್ಗೆ ಬೇಸರ ಹೊರ ಹಾಕಿದ್ದರು. ಆ ನಂತರ ಕ್ಷೇತ್ರಕ್ಕೆ ಆಗಮಿಸಿದ ದರ್ಶನ್ ಪುಟ್ಟಣ್ಣಯ್ಯ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದಕ್ಕೆ ಕ್ಷೇತ್ರದ ಮತದಾರರಲ್ಲಿ ಕೈ ಮುಗಿದು ಕ್ಷಮೆಯಾಚಿಸಿ ಮತ್ತೆ ಅಮೆರಿಕಾಕ್ಕೆ ಹೋಗಲ್ಲ ಎಂದು ಭರವಸೆ ನೀಡಿದ್ದರು.

ಆದರೆ ಇದೀಗ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮೂರನೇ ಬಾರಿಗೆ ಅಮೆರಿಕಾಕ್ಕೆ ತೆರಳಿದ್ದು, ಪದೇ ಪದೇ ಅಮೆರಿಕಾಕ್ಕೆ ತೆರಳುತ್ತಿರುವ ಶಾಸಕರ ನಡೆ ಬಗ್ಗೆ ಕ್ಷೇತ್ರದ ಮತದಾರರಲ್ಲಿ ಸಾಕಷ್ಟು ಗೊಂದಲ ಉಂಟಾಗಿದೆ. ಶಾಸಕರಿಗೆ ಕ್ಷೇತ್ರದಲ್ಲಿ ಸಾಕಷ್ಟು ಕೆಲಸಗಳಿರುತ್ತವೆ. ಕ್ಷೇತ್ರದ ಅಭಿವೃದ್ಧಿ ಜೊತೆಗೆ ಜನರ ಸಮಸ್ಯೆ, ಕಷ್ಟಸುಖ ಆಲಿಸುವ ಜವಾಬ್ದಾರಿ ಇದೆ. ಅದನ್ನು ಬಿಟ್ಟು ಶಾಸಕರು ತಿಂಗಳು ಅಥವಾ 15 ದಿನಗಳ ಕಾಲ ಕ್ಷೇತ್ರ ಬಿಟ್ಟು ಅಮೆರಿಕಾಕ್ಕೆ ಹೋದರೆ ಕ್ಷೇತ್ರದ ಜನರ ಸಮಸ್ಯೆ ಆಲಿಸುವವರು ಯಾರು? ಜನರ ಕಷ್ಟ ಕೇಳುವವರು ಯಾರು? ಶಾಸಕರ ಗೈರಿನಲ್ಲಿ ಅವರ ಆಪ್ತ ಸಹಾಯಕರು, ಬೆಂಬಲಿಗರು ಶಾಸಕರ ಸ್ಥಾನ ತುಂಬಲು ಸಾಧ್ಯವೇ? ಪ್ರಸ್ತುತ ಜಿಲ್ಲೆಯಲ್ಲಿ ಕಾವೇರಿ ಚಳವಳಿ ನಡೆಯುತ್ತಿದೆ. ರೈತರು ನೀರಿಗಾಗಿ ಹೋರಾಡುತ್ತಿರುವಾಗ ಶಾಸಕರು ರೈತರಿಗೆ ಆತ್ಮಸ್ಥೈರ್ಯ ತುಂಬುವುದನ್ನು ಬಿಟ್ಟು ಅಮೆರಿಕಾಕ್ಕೆ ತೆರಳಿರುವುದು ಸರಿಯಲ್ಲ ಎಂದು ಕ್ಷೇತ್ರದ ಜನತೆ ಬೇಸರ ಹೊರ ಹಾಕುತ್ತಿದ್ದಾರೆ. ಕೇವಲ ಕ್ಷೇತ್ರದ ಜನತೆ ಮಾತ್ರವಲ್ಲದೇ ರೈತ ಸಂಘದ ಕಾರ್ಯಕರ್ತರಲ್ಲೂ ಅಸಮಾಧಾನ ಭುಗಿಲೇಳುತ್ತಿದೆ. ಚುನಾವಣೆಯಲ್ಲಿ ಎಲ್ಲಾ ಕಂಪನಿ, ವಹಿವಾಟು ಮಾರಾಟ ಮಾಡಿ ಬಂದಿದ್ದೇನೆ ಎಂದು ಸುಳ್ಳು ಹೇಳಿ ಇದೀಗ ಗೆದ್ದ ಬಳಿಕ ಕಂಪನಿ ಕೆಲಸಕ್ಕೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಮೆರಿಕಾಕ್ಕೆ ಪದೇ ಪದೇ ತೆರಳುತ್ತಿದ್ದಾರೆ ಎಂದು ಕ್ಷೇತ್ರದ ಜನತೆ ಶಾಸಕರ ನಡೆ ವಿರುದ್ಧ ಅಸಮಾಧಾನ ಹೊರ ಹಾಕುತ್ತಿದ್ದಾರೆ.

ಈ ಹಿಂದಿನ ಶಾಸಕರು ಆಗೊಮ್ಮೆ, ಹೀಗೊಮ್ಮೆ ಆರೋಗ್ಯ ತಪಾಸಣೆಗೆ ಹೊರ ದೇಶಕ್ಕೆ ಹೋದರೆ ಟೀಕಿಸುತ್ತಿದ್ದ ರೈತ ಸಂಘದವರು ಇದೀಗ ಅವರ ಶಾಸಕರೇ ಪದೇ ಪದೇ ಕ್ಷೇತ್ರ ಬಿಟ್ಟು ಅಮೆರಿಕಾಕ್ಕೆ ತೆರಳುತ್ತಿದ್ದರೂ ಸುಮ್ಮನಿರುವುದು ಏಕೆ? ನಿಮ್ಮ ಶಾಸಕರನ್ನು ಏಕೆ ಪ್ರಶ್ನಿಸುತ್ತಿಲ್ಲ? ಅವರಿಗೊಂದು ನ್ಯಾಯ, ಇವರಿಗೊಂದು ನ್ಯಾಯವೇ? ಎಂದು ಕ್ಷೇತ್ರದ ಜನತೆ ಪ್ರಶ್ನಿಸುತ್ತಿದ್ದಾರೆ.

ಅ.25, ಜಮಾಬಂಧಿ ಕಾರ್ಯಕ್ರಮ

ಮಂಡ್ಯ, ಅ.19– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಕೆರಗೋಡು ಹೋಬಳಿ ಮಾರಗೌಡನಹಳ್ಳಿ ಗ್ರಾಮ ಪಂಚಾಯತ್‌ನ 2022–23ನೇ ಸಾಲಿನ ಜಮಾಬಂಧಿ ಕಾರ್ಯಕ್ರಮ ಗ್ರಾಮ ಪಂಚಾಯಿತಿ ಆವರಣದಲ್ಲಿ ಅ.25ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ.

ಹಳೇ ದ್ವೇಷಕ್ಕೆ ಅಡಿಕೆ ಬೆಳೆ ನಾಶ

ಕೆ.ಆರ್.ಪೇಟೆ, ಅ.19– ಹಳೇ ದ್ವೇಷದ ಹಿನ್ನೆಲೆಯಲ್ಲಿ ದುಷ್ಕರ್ಮಿಗಳ ತಂಡ ಜಮೀನಿನಲ್ಲಿ ಬೆಳೆದಿದ್ದ ಲಕ್ಷಾಂತರ ರೂ. ಬೆಲೆ ಬಾಳುವ ಅಡಿಕೆ ಸಸಿಗಳು ಹಾಗೂ ಸೋಲಾರ್‌ಗಳನ್ನು ನಾಶಪಡಿಸಿ, ರಕ್ಷಣೆಗೆಂದು ಅಳವಡಿಸಿದ್ದ ಸಿಸಿ ಕ್ಯಾಮರಾಗಳನ್ನು ಹಾಳು ಮಾಡಿರುವ ಘಟನೆ ತಾಲೂಕಿನ ಮುರುಕನಹಳ್ಳಿ ಗ್ರಾಮದಲ್ಲಿ ಜರುಗಿದೆ.


ಮುರುಕನಹಳ್ಳಿ ಗ್ರಾಮದ ಲೇಟ್ ನರಸೇಗೌಡರ ಮಗ ಗೋಕರ್ಣ ಎಂಬುವರಿಗೆ ಸೇರಿದ ಜಮೀನಿನಲ್ಲಿ ಬೆಳೆದಿದ್ದ 33 ಅಡಿಕೆ ಗಿಡಗಳು, ತೊಂಡೆ ಬೆಳೆ, ತೊಂಡೆ ಬಳ್ಳಿ ಹಬ್ಬಲು ಹಾಕಿದ್ದ ಕಲ್ಲಿನ ಚಪ್ಪರ ಹಾಗೂ ಸೋಲಾರ್, ಸಿಸಿ ಕ್ಯಾಮರಾಗಳನ್ನು ನಾಶ ಮಾಡಲಾಗಿದೆ.

ಈ ಸಂಬಂಧ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿರುವ ರೈತ ಗೋಕರ್ಣ, ಕ್ಷುಲ್ಲಕ ಕಾರಣಕ್ಕೆ ಮುರುಕನಹಳ್ಳಿ ಗ್ರಾಮದ ರಾಮೇಗೌಡ, ಕುಮಾರ, ಕಾಂತರಾಜ, ಜಗದೀಶ, ಅನಿತಾ, ದಿನೇಶ್, ವೆಂಕಟೇಶ, ಪರಮೇಶ, ಕುಳ್ಳೇಗೌಡ ಮತ್ತಿತರರು ನಮ್ಮ ಮೇಲೆ ದ್ವೇಷ ಸಾಧಿಸಿ, ಬೆಳೆಗಳನ್ನು ನಾಶ ಮಾಡಿದ್ದು, ಜೊತೆಗೆ ಕೇಳಲು ಹೋದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ. ಅಲ್ಲದೇ ಇದರಿಂದ ನಮಗೆ ಲಕ್ಷಾಂತರ ರೂ. ನಷ್ಟವಾಗಿದೆ. ಈ ಘಟನೆ ಸಿಸಿ ಟಿವಿ ಫುಟೇಜ್‌ನಲ್ಲಿ ದಾಖಲಾಗಿದೆ. ಹೀಗಾಗಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ತಿಳಿಸಿ ಒತ್ತಾಯಿಸಿದ್ದಾರೆ. ದೂರು ಸ್ವೀಕರಿಸಿರುವ ಎಸ್‌ಐ ಸುಬ್ಬಯ್ಯ ಮುಂದಿನ ತನಿಖೆ ಕೈಗೊಂಡಿದ್ದಾರೆ.

ನಟ ಶಿವರಾಜ್ ಕುಮಾರ್, ಸಮಾಜ ಸೇವಕ ಜಯದೇವ್‌ಗೆ ಪ್ರಶಸ್ತಿ ಪ್ರದಾನ

ಮಂಡ್ಯ, ಅ.19– ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಿ.ಕರಡೀಗೌಡರ 10ನೇ ಪುಣ್ಯಸ್ಮರಣೆ ಅಂಗವಾಗಿ ಮಾನಸ ಎಜುಕೇಷನ್ ಟ್ರಸ್ಟ್ ಮತ್ತು ಡಿ.ಕರಡೀಗೌಡ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಅ.22ರಂದು ಪ್ರಶಸ್ತಿ ಪ್ರದಾನ ಸಮಾರಂಭ ಮದ್ದೂರು ತಾಲೂಕು ವಳಗೆರೆ ಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಮಾನಸ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ವಿ.ಕೆ.ಜಗದೀಶ್ ತಿಳಿಸಿದರು.





ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಿ.ಕರಡೀಗೌಡರ ಹೆಜ್ಜೆ ಗುರುತುಗಳನ್ನು ಮುಂದಿನ ತಲೆಮಾರಿಗೆ ಪಸರಿಸುವ ಸದುದ್ದೇಶದಿಂದ ಪ್ರತಿವರ್ಷ ಸಮಾಜದ ಸಾಧಕರನ್ನು ಗೌರವಿಸಲಾಗುತ್ತಿದ್ದು, ಈ ಬಾರಿ ಖ್ಯಾತ ಚಲನಚಿತ್ರ ನಟ ಡಾ.ಶಿವರಾಜ್ ಕುಮಾರ್ ಹಾಗೂ ದೀನಬಂಧು ಮಕ್ಕಳ ಮನೆ ಗೌರವ ಕಾರ್ಯದರ್ಶಿ ಪ್ರೊ.ಜಿ.ಎಸ್.ಜಯದೇವ ಅವರನ್ನು ಸತ್ಕರಿಸಲಾಗುವುದು ಎಂದರು.

ಅಭಿನಂದಿತರಿಗೆ ಸ್ಮರಣಿಕೆ, ಶಾಲು ಹಾಗೂ ತಲಾ 50 ಸಾವಿರ ರೂ. ನಗದು ಪುರಸ್ಕಾರ ನೀಡಿ, ಅವರ ಸಮಾಜಸೇವೆಗೆ ನೀರೆರೆಯುವ ಕಾರ್ಯವನ್ನು ನಮ್ಮ ಟ್ರಸ್ಟ್ ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಚಲನಚಿತ್ರ ನಿರ್ಮಾಪಕಿ ಗೀತಾ ಶಿವರಾಜ್ ಕುಮಾರ್ ಆಗಮಿಸಲಿದ್ದಾರೆ. ಈ ಹಿಂದೆ ಡಾ.ಹಂಸಲೇಖ, ಟಿ.ಎಸ್.ನಾಗಾಭರಣ, ನಾಗತಿಹಳ್ಳಿ ಚಂದ್ರಶೇಖರ್, ಮಂಡ್ಯ ರಮೇಶ್, ಪ್ರೊ.ಚಿದಾನಂದ, ಪ್ರೊ.ರಾಮಮೂರ್ತಿ ಸೇರಿದಂತೆ ಹಲವರಿಗೆ ಸಮಾಜಸೇವಾ ಪ್ರಶಸ್ತಿ ನೀಡಲಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮವನ್ನು ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ತಾವು ವಹಿಸಲಿದ್ದು, ಪ್ರಶಸ್ತಿ ಪ್ರದಾನ ಹಾಗೂ ಅಭಿನಂದನೆಯನ್ನು ನಿವೃತ್ತ ನ್ಯಾಯಾಧೀಶ ಟಿ.ಜಿ.ಶಿವಶಂಕರೇಗೌಡ ನೆರವೇರಿಸಲಿದ್ದಾರೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕಿ ಪ್ರೊ.ಎನ್.ಕೆ.ಲೋಲಾಕ್ಷಿ ಅಭಿನಂದನಾ ನುಡಿಗಳನ್ನು ನುಡಿಯಲಿದ್ದಾರೆಂದು ತಿಳಿಸಿದರು. ಇದೇ ವೇಳೆ ನೂತನ ಶಾಲಾ ಕಟ್ಟಡ ಶಂಕುಸ್ಥಾಪನೆಯನ್ನು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಹೆಚ್.ಎಲ್.ವಿಶಾಲ ರಘು, ವಕೀಲರ ಪರಿಷತ್ ರಾಜ್ಯ ಸಮಿತಿ ಸದಸ್ಯರಾದ ಎಸ್.ಬಸವರಾಜು, ಎಂ.ಎಸ್.ಮಧುಸೂದನ್ ಹಾಗೂ ಪ್ರಶಸ್ತಿ ಪುರಸ್ಕೃತರ ಆಯ್ಕೆ ಸಮಿತಿ ಅಧ್ಯಕ್ಷ, ಖ್ಯಾತ ಅಂಕಣಕಾರ ಡಾ.ಗುಬ್ಬಿಗೂಡು ರಮೇಶ್ ಉಪಸ್ಥಿತರಿರಲಿದ್ದಾರೆಂದು ತಿಳಿಸಿದರು. ಗೋಷ್ಠಿಯಲ್ಲಿ ಮಾನಸ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಹೆಚ್.ಬಿ.ನಾಗರಾಜು, ಸಂಸ್ಥೆ ಪ್ರಾಂಶುಪಾಲ ಪ್ರವೀಣ್ ಕುಮಾರ್ ಉಪಸ್ಥಿತರಿದ್ದರು.

ಡಾ.ಎಂ.ಕೆ.ಮಂಜುಗೆ ಪಿಹೆಚ್.ಡಿ ಪ್ರದಾನ



ಕೆ.ಆರ್.ಪೇಟೆ, ಅ.19– ತಾಲೂಕಿನ ಮಂದಗೆರೆ ಗ್ರಾಮದ ನಿವಾಸಿ ಎಂ.ಕೆ.ಮಂಜು ಅವರು ಮೈಸೂರು ವಿವಿ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ.ಮಂಜಪ್ಪ ಹೊಸಮನಿ ಅವರ ಮಾರ್ಗದರ್ಶನದಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ "An Empirical Analysis of Interrelationship among Macro Economic Variables with Reference to Monetary Policy in India" ಎಂಬ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಸದರಿ ಪಿಹೆಚ್.ಡಿ ಪದವಿಯನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರ ಉಪಸ್ಥಿತಿಯಲ್ಲಿ ನಡೆದ 103ನೇ ಘಟಿಕೋತ್ಸವದಲ್ಲಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಪ್ರದಾನ ಮಾಡಿದರು. ಈ ವೇಳೆ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾದ ಪತ್ರಿಕೋದ್ಯಮಿ ಡಾ.ಕೆ.ಬಿ.ಗಣಪತಿ, ರಾಜೀವ್ ಗಾಂಧಿ ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ಪಿ.ಎಸ್.ಶಂಕರ್ ಸೇರಿದಂತೆ ಇನ್ನಿತರರಿದ್ದರು.

ವಿಶ್ವಕಪ್‌ನಲ್ಲಿ ಭಾರತದ ಗೆಲುವಿನ ನಾಗಾಲೋಟ

- ಏಕದಿನ ಕ್ರಿಕೆಟ್‌ನಲ್ಲಿ 48ನೇ ಶತಕ ಸಿಡಿಸಿದ ಕಿಂಗ್ ಕೊಹ್ಲಿ
- ಸತತ ನಾಲ್ಕನೇ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ 2ನೇ ಸ್ಥಾನ ಅಲಂಕರಿಸಿದ ಟೀಂ ಇಂಡಿಯಾ



ಪುಣೆ, ಅ.19– ವಿರಾಟ್ ಕೊಹ್ಲಿ ಅವರ ಅಜೇಯ ಶತಕ ಹಾಗೂ ಶುಭ್‌ಮನ್ ಗಿಲ್ ಅವರ ಅರ್ಧ ಶತಕದ ನೆರವಿನಿಂದ ಭಾರತ ಬಾಂಗ್ಲಾದೇಶದ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತದ ಗೆಲುವಿನ ನಾಗಾಲೋಟ ಮುಂದುವರೆದಿದ್ದು, ಸತತ 4ನೇ ಗೆಲುವಿನೊಂದಿಗೆ ಭಾರತ ಅಂಕ ಪಟ್ಟಿಯಲ್ಲಿ 2ನೇ ಸ್ಥಾನ ಅಲಂಕರಿಸಿತು.

ಇಲ್ಲಿನ ಮಹಾರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಬಾಂಗ್ಲಾದೇಶ ನೀಡಿದ 257 ರನ್‌ಗಳ ಗುರಿ ಬೆನ್ನತ್ತಿದ ಭಾರತ 41.3 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 261ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ರೋಹಿತ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಉತ್ತಮ ಆರಂಭ ಒದಗಿಸಿಕೊಟ್ಟರು. ಇವರಿಬ್ಬರು ಮೊದಲ ವಿಕೆಟ್‌ಗೆ 12.4 ಓವರ್‌ಗಳಲ್ಲಿ 88 ರನ್ ಕಲೆ ಹಾಕಿದರು. ಈ ವೇಳೆ 40 ಎಸೆತಗಳಲ್ಲಿ 2 ಸಿಕ್ಸರ್, 7 ಬೌಂಡರಿಯೊಂದಿಗೆ 48 ರನ್ ಬಾರಿಸಿ ರೋಹಿತ್ ಪೆವಿಲಿಯನ್ ಸೇರಿಕೊಂಡರು. ಆ ಮೂಲಕ ಕೇವಲ 2 ರನ್‌ಗಳಿಂದ ಅರ್ಧ ಶತಕದಿಂದ ವಂಚಿತರಾದರು. ಮತ್ತೊಂದೆಡೆ ಉತ್ತಮ ಬ್ಯಾಟಿಂಗ್ ಮುಂದುವರೆಸಿದ ಗಿಲ್ ಅರ್ಧ ಶತಕ ಸಿಡಿಸಿ ಸಂಭ್ರಮಿಸಿದರು. ಆದರೆ 55 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಒಳಗೊಂಡ 53 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಶ್ರೇಯಸ್ ಅಯ್ಯರ್ ಕೇವಲ 19 ರನ್ ಪೇರಿಸಿ ಔಟಾದರು. ಈ ವೇಳೆ ಒಂದಾದ ಕೆ.ಎಲ್.ರಾಹುಲ್ ಹಾಗೂ ವಿರಾಟ್ ಕೊಹ್ಲಿ ಮುರಿಯದ 4ನೇ ವಿಕೆಟ್‌ಗೆ 74 ಎಸೆತಗಳಲ್ಲಿ 83 ರನ್‌ಗಳ ಜೊತೆಯಾಟವಾಡಿದರು. ಅಮೋಘ ಆಟವಾಡಿದ ವಿರಾಟ್ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ 48ನೇ ಶತಕ ಸಿಡಿಸಿ ಸಂಭ್ರಮಿಸಿದರು. ಅಲ್ಲದೇ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 26 ಸಾವಿರ ರನ್ ಪೂರೈಸಿದರು. ಜೊತೆಗೆ ಎಲ್ಲಾ ಮಾದರಿಯ ಕ್ರಿಕೆಟ್‌ನಲ್ಲಿ 78ನೇ ಶತಕ ಸಿಡಿಸಿದ ವಿಶ್ವದ 2ನೇ ಆಟಗಾರ ಸಹ ಎನಿಸಿಕೊಂಡರು. ಅಂತಿಮವಾಗಿ ವಿರಾಟ್ ಕೊಹ್ಲಿ 97 ಎಸೆತಗಳಲ್ಲಿ 4 ಸಿಕ್ಸರ್, 6 ಬೌಂಡರಿ ಒಳಗೊಂಡ ಅಜೇಯ 103 ರನ್ ಗಳಿಸಿದರೆ, ಕೊಹ್ಲಿ ಶತಕ ಸಿಡಿಸಲು ನೆರವಾದ ಕನ್ನಡಿಗ ಕೆ.ಎಲ್.ರಾಹುಲ್ 34 ರನ್ ಗಳಿಸಿ ಅಜೇಯರಾಗಿ ಉಳಿದರು. ಬಾಂಗ್ಲಾದೇಶದ ಪರ ಮೆಹಿದಿ ಹಸನ್ ಮಿರಾಜ್ 2, ಹಸನ್ ಮಹಮೂದ್ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 256 ರನ್ ಗಳಿಸಿತು. ತಂಡದ ಪರ ಕಣಕ್ಕಿಳಿದ ತಂಜಿದ್ ಹಸನ್ ಹಾಗೂ ಲಿಟ್ಟನ್ ದಾಸ್ ಮೊದಲ ವಿಕೆಟ್‌ಗೆ 93 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿಕೊಟ್ಟರು. ತಂಜಿದ್ ಹಸನ್ 51 ರನ್ ಗಳಿಸಿದರೇ ನಂತರ ಬಂದ ನಾಯಕ ನಜ್ಮುಲ್ ಹುಸೇನ್ ಶಾಂಟೊ 8, ಮೆಹಿದಿ ಹಸನ್ ಮಿರಾಜ್ 3 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ತೌಹಿದ್ ಹೃದಯ್ 16, ಮುಷ್ಫಿಕರ್ ರಹೀಮ್ 38, ನಸುಮ್ ಅಹ್ಮದ್ 14, ಮಹಮುದುಲ್ಲಾ 46 ರನ್ ಗಳಿಸಿದರು.

ಭಾರತದ ಪರ ಬುಮ್ರಾ, ಸಿರಾಜ್ ಮತ್ತು ಜಡೇಜಾ ತಲಾ 2 ವಿಕೆಟ್ ಪಡೆದರು. ಶಾರ್ದೂಲ್ ಮತ್ತು ಕುಲದೀಪ್ ಒಂದೊಂದು ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು. ಪಂದ್ಯದಲ್ಲಿ ಭರ್ಜರಿ ಶತಕ ಸಿಡಿಸಿದ ವಿರಾಟ್ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ | ಆಸ್ಟ್ರೇಲಿಯಾ V/s ಪಾಕಿಸ್ತಾನ
ಸ್ಥಳ: ಬೆಂಗಳೂರು, ಚಿನ್ನಸ್ವಾಮಿ ಕ್ರೀಡಾಂಗಣ
ಪಂದ್ಯ ಆರಂಭ: ಮಧ್ಯಾಹ್ನ 2 ಗಂಟೆಗೆ

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ನ್ಯೂಜಿಲ್ಯಾಂಡ್	4	4	0	0	8
ಇಂಡಿಯಾ	4	4	0	0	8
ದಕ್ಷಿಣ ಆಫ್ರಿಕಾ	3	2	1	0	4
ಪಾಕಿಸ್ತಾನ್	3	2	1	0	4
ಇಂಗ್ಲೆಂಡ್	3	1	2	0	2
ಆಸ್ಟ್ರೇಲಿಯಾ	3	1	2	0	2
ಬಾಂಗ್ಲಾದೇಶ	4	1	3	0	2
ನೆದರ್‌ಲ್ಯಾಂಡ್ಸ್	3	1	2	0	2
ಅಫ್ಘಾನಿಸ್ತಾನ್	4	1	3	0	2
ಶ್ರೀಲಂಕಾ	3	0	3	0	0

ಮಾಜಿ ಸಿಎಂ ಕುಮಾರಸ್ವಾಮಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

'ಕೈ' ಹಿಡಿದವರ ಬೆನ್ನಿಗೆ ಚೂರಿ ಹಾಕುವ ಜಾಯಮಾನ!

ಬೆಂಗಳೂರು, ಅ.19–(ಕೆಎಂಶಿ) ಜೆಡಿಎಸ್ ಹಂಗಾಮಿ ರಾಜ್ಯಾಧ್ಯಕ್ಷರಾಗಿ ನೇಮಕವಾಗಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿದೆ.



ನಂಬಿದವರಿಗೆ ನಾಮ ಬಳಿಯುವ ಕುಮಾರಸ್ವಾಮಿ, ನಿಮ್ಮ ಬಾಯಲ್ಲಿರುವುದು ನಾಲಿಗೆಯೋ ಅಥವಾ ಕೊಳಕುಮಂಡಲ ಹಾವೋ? ಹಿಂದಿನ ನಿಮ್ಮ ಎಲ್ಲ ಅಕ್ರಮ, ಅನಾಚಾರ, ಅವ್ಯವಹಾರಗಳು ಹೊರಬರುತ್ತವೆ ಎಂದು ಹೆದರಿ ಬಿಜೆಪಿ ಸೆರಗಿನೊಳಗೆ ಸೇರಿಕೊಂಡಿರುವ ನಿಮ್ಮ ಜಾತ್ಯತೀತತೆ ನಾಟ್ಯಕ್ಕೆ ಬೆರಗಾಗಿ ತೆನೆ ಹೊತ್ತ ಮಹಿಳೆಯೇ 'ಕೋಮು–ಕುಂಡ'ದಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಕೈ ಹಿಡಿದವರ ತಲೆ ಕಡಿಯುವ, ಹೆಗಲು ಕೊಟ್ಟವರ ಬೆನ್ನಿಗೆ ಚೂರಿ ಹಾಕುವ, ನಂಬಿದವರಿಗೆ ನಾಮ ಬಳಿಯುವ ಕುಮಾರಸ್ವಾಮಿ ರಾಮಾಯಣದ ಮಂಥರೆ, ಮಹಾಭಾರತದ ಶಕುನಿಯೇ ಸರಿ. ಕ್ಷಣಕ್ಕೊಂದು ಬಣ್ಣ, ದಿನಕ್ಕೊಂದು ವೇಷ ತೊಡುವ ನಿಮ್ಮ ಬಣ್ಣದೋಕುಳಿಯಾಟಕ್ಕೆ ಗೋಸುಂಬೆಯೇ ಲಾಗ ಹೊಡೆದಿದೆ ಎಂದು ವ್ಯಂಗ್ಯವಾಡಿದೆ.

ಮೊದಲ ಬಾರಿ ನಿಮ್ಮನ್ನು ಮುಖ್ಯಮಂತ್ರಿ ಮಾಡಿದ ಯಡಿಯೂರಪ್ಪ ಅವರಿಗೆ ಅಧಿಕಾರ ಹಸ್ತಾಂತರಿಸದೆ ವಚನ ಭ್ರಷ್ಟರಾದಿರಿ, ದ್ರೋಹ ಮಾಡಿದಿರಿ. ಕಾಂಗ್ರೆಸ್ ನಿಮ್ಮನ್ನು ಮುಖ್ಯಮಂತ್ರಿ ಮಾಡಿದಾಗ ಯಡಿಯೂರಪ್ಪ ಅಸೆಂಬ್ಲಿಯಲ್ಲಿ ಹೇಳಿದ್ದರು. 'ಶಿವಕುಮಾರ್, ಈ ಅಪ್ಪ ಮಕ್ಕಳನ್ನು ನಂಬಬೇಡಿ, ಬಳಸಿ ಬಿಸಾಡುತ್ತಾರೆ. ಹಾವು ಇವರ ಲಾಂಛನ' ಎಂದು. ಆದರೆ ಸಿದ್ಧಾಂತಕ್ಕಾಗಿ ಕಾಂಗ್ರೆಸ್ ನಿಮ್ಮ ಜತೆ ನಿಂತಿತ್ತು.

ಕಾಂಗ್ರೆಸ್ ದಯಾಭಿಕ್ಷೆಯಿಂದ ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ನಿಮಗೆ ಕಿಂಚಿತ್ತಾದರೂ ನಿಯತ್ತು ಬೇಡವೇ? ಓಹ್.. ಕ್ಷಮಿಸಿ, ಆತ್ಮಸಾಕ್ಷಿ ಮಾರಿಕೊಂಡೇ ರಾಜಕೀಯ ಬಯಲಾಟ ಆಡುವ ನಿಮ್ಮಂತವರಿಂದ ನೀತಿ, ನಿಯತ್ತು, ನೈತಿಕತೆ ನಿರೀಕ್ಷೆ ಮಾಡುವುದೇ ಮಹಾಪಾಪ.

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರನ್ನು ಅನ್ಯ ರಾಜ್ಯದ ಪೇಶ್ವೆ ಎಂದು ನಿಂದಿಸಿದಿರಿ. 2.50 ಕೋಟಿಯಂತೆ ಸರ್ಕಾರಿ ಹುದ್ದೆ ಮಾರಿಕೊಂಡ ಭ್ರಷ್ಟ ಎಂದಿರಿ. ಸಿ.ಟಿ.ರವಿಯನ್ನು ಲೂಟಿ ರವಿ ಎಂದು ನಾಮಕರಣ ಮಾಡಿದವರೂ ನೀವೇ. ಇವತ್ತು ಅವರದ್ದೇ ಅಂಗಿ ಚುಂಗು ಹಿಡಿದು ನಿಂತಿದ್ದೀರಲ್ಲಾ ನಿಮಗೇನಾದರೂ ಆತ್ಮಗೌರವ ಇದೆಯೇ ಎಂದು ಪ್ರಶ್ನಿಸಲಾಗಿದೆ.

ಇಡೀ ರಾಜ್ಯದ ಜನಕ್ಕೆ ಅರ್ಥವಾಗಿದೆ. ಅಧಿಕಾರದ ಕನಸು ನುಚ್ಚುನೂರಾದ ನಂತರ ನೀವೆಷ್ಟು ಹತಾಶರಾಗಿದ್ದೀರಿ, ಮತಿಭ್ರಂಶರಾಗಿದ್ದೀರಿ ಎಂದು ನೀವಾಡುವ ಒಂದೊಂದು ನುಡಿಯಲ್ಲೂ ಅದರದೇ ಪ್ರತಿಫಲನ. ಪಾಪ, ನಿಮ್ಮ ಸ್ಥಿತಿ ಕಂಡು ಅಯ್ಯೋ ಅನ್ನಿಸುತ್ತದೆ. ಇದೇ ಸ್ಥಿತಿ ಮುಂದುವರೆದರೆ ಬೀದಿಯಲ್ಲಿ ಅಂಗಿ ಹರಿದುಕೊಂಡು ಓಡಾಡುವ ದಿನ ದೂರವಿಲ್ಲ ಎಂಬುದನ್ನು ನೆನೆದು ಭಯವೂ ಆಗುತ್ತದೆ. ಅದು ಒತ್ತಟ್ಟಿಗಿರಲಿ, ನಿಮ್ಮನ್ನು, ನಿಮ್ಮ ಕುಟುಂಬದವರನ್ನು ದಶಕಗಳ ಕಾಲ ಪೊರೆದ ಒಕ್ಕಲಿಗರು ನನಗೆ ಮತ ಹಾಕಿಲ್ಲ ಎನ್ನುವ ಮೂಲಕ ಅವರಿಗೆ ದ್ರೋಹ, ಅವಮಾನ ಮಾಡಿರುವ ನಿಮ್ಮನ್ನು ಆ ಭೈರವೇಶ್ವರನೂ ಕ್ಷಮಿಸುವುದಿಲ್ಲ.

ಒಕ್ಕಲಿಗರಿಂದ ನೀವು ಬೆಳೆದಿರೇ ಹೊರತು ನಿಮ್ಮಿಂದ ಸಮುದಾಯವೇನೂ ಉದ್ಧಾರ ಆಗಿಲ್ಲ. ಎಷ್ಟೇ ಆಗಲಿ, ಒಕ್ಕಲಿಗರ ಆತ್ಮಗೌರವದ ಸಂಕೇತವಾದ ಆದಿಚುಂಚನಗಿರಿ ಮಠದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳಿಗೇ ಸೆಡ್ಡು ಹೊಡೆದು ಮತ್ತೊಂದು ಮಠ ಕಟ್ಟಿದ ಮಹಾನುಭಾವರಲ್ಲವೇ ನೀವು?

ಇನ್ನೊಂದೆಡೆ ಅಲ್ಪಸಂಖ್ಯಾತರ ಅಗತ್ಯವಿಲ್ಲ, ಅವರನ್ನು ನಂಬಿಕೊಂಡು ರಾಜಕಾರಣ ಮಾಡಿಲ್ಲ ಅನ್ನುತ್ತೀರಿ. ಹಾಗಾದರೆ ನಿಮಗೆ ನೀವೇ ಮತ ಹಾಕಿಕೊಂಡು ಗೆದ್ದಿರಾ ಕುಮಾರಣ್ಣ? ಹಿಂದೆ ನೀವು ಮಕ್ಮಲ್ ಟೋಪಿ ಹಾಕಿದ್ದೇನು? ಬಿರಿಯಾನಿ ತಿಂದಿದ್ದೇನು? ಮಸೀದಿ ಹೊಕ್ಕಿದ್ದೇನು? ಅದೇನು ನಾಟಕ, ಅದೇನು ಪಂಚರಂಗಿ ಆಟ? ನೀವೇ ನಿಮ್ಮ ಪಾಲಿನ ಭಸ್ಮಾಸುರ. ಸ್ವಲ್ಪ ಕಾಲ ತಡೆದು ನೋಡಿ, ನಿಮ್ಮ ಗುಂಡಿಯಲ್ಲಿ ಬಿದ್ದು ನೀವೇ ಹೆಂಗೆ ಒದ್ದಾಡುತ್ತೀರಿ ಅಂತಾ!

ಕೈಲಾಗದವರು ಮೈ ಪರಚಿಕೊಂಡರೆ ಆಗೋದು ಗಾಯ, ರಣ ಗಾಯ. ಕೈ ನಾಯಕರ ಮೇಲೆ ಬಿದ್ದರೇ ಕೈಲಾಸ ಪ್ರಾಪ್ತಿ ಆಗದು ಕುಮಾರಣ್ಣ. ನಿಮ್ಮ ಮಾತೇ ನಿಮ್ಮ ಪಾಲಿನ ಶತ್ರು. ಮಂಡ್ಯ ಚುನಾವಣೆಯಲ್ಲಿ ನಿಮ್ಮ ಮಗನನ್ನು ಬಲಿ ಕೊಟ್ಟಿರಿ. ವಿಧಾನಸಭೆ ಚುನಾವಣೆಯಲ್ಲಿ ನಿಮ್ಮ ಪಕ್ಷವನ್ನೇ ಅಡ್ಡಡ್ಡ ಉದ್ದುದ್ದ ಮಲಗಿಸಿದಿರಿ. ಈಗ ನಿಮ್ಮನ್ನು ನೀವೇ ಹಾಳು ಮಾಡಿಕೊಳ್ಳುತ್ತಿದ್ದೀರಿ ಎಂದು ಟೀಕಿಸಲಾಗಿದೆ. ಹೀಗಾಗಿ ನಿಮ್ಮಂತವರ ಮಾತಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡುವ ಅಗತ್ಯವಿಲ್ಲ. ನೀವೀಗ ನಿರುದ್ಯೋಗಿ, ಪರರ ನಿಂದನೆಗೆ ಸಾಕಷ್ಟು ಸಮಯವಿದೆ. ಮಾತಾಡುತ್ತಾ ಹೋಗಿ. ನಾವು ತಲೆ ಕೆಡಿಸಿಕೊಳ್ಳುವುದಿಲ್ಲ. ನಮಗೆ ಕೆಲಸವಿದೆ, ಜನ ಜವಾಬ್ದಾರಿ ಕೊಟ್ಟಿದ್ದಾರೆ. ಅದನ್ನು ಮರೆತು ಹಾದಿ ಬೀದಿಯಲ್ಲಿ ಹೋಗುವವರಿಗೆಲ್ಲ ಉತ್ತರ ಕೊಡುತ್ತಾ ಹೋದರೆ ನಿಮಗೂ ನಮಗೂ ವ್ಯತ್ಯಾಸ ಇರುವುದಿಲ್ಲ ಎಂದಿದೆ.

ನನ್ನ ಸಾವಿಗೆ ಸಚಿವ ಶರಣಪ್ರಕಾಶ್ ಪಾಟೀಲ್ ನೇರ ಕಾರಣ: ಆಡಿಯೋ ರೆಕಾರ್ಡ್ ಮಾಡಿ ಬಿಜೆಪಿ ಕಾರ್ಯಕರ್ತ ಆತ್ಮಹತ್ಯೆ

ಕಲಬುರಗಿ, ಅ.19– ಸಚಿವ ಶರಣಪ್ರಕಾಶ್ ಪಾಟೀಲ್ ಅವರಿಂದ ಕಿರುಕುಳಕ್ಕೊಳಗಾಗಿರುವುದಾಗಿ ಆರೋಪಿಸಿ ಬಿಜೆಪಿ ಕಾರ್ಯಕರ್ತರೊಬ್ಬರು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಶಿರೋಳ್ಳಿ ಗ್ರಾಮದಲ್ಲಿ ನಡೆದಿದೆ.



ಶಿವಕುಮಾರ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಬಿಜೆಪಿ ಕಾರ್ಯಕರ್ತನಾಗಿದ್ದು, "ನನ್ನ ಸಂಬಂಧಿ ನರಸಪ್ಪ ಎಂಬವರ ಹೊಲಕ್ಕೆ ಹೋಗಿದ್ದ ವೇಳೆ ಕಾಂಗ್ರೆಸ್ ಕಾರ್ಯಕರ್ತರು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆಗೆ ಶರಣಾಗಿದ್ದೇನೆ. ನನ್ನ ಸಾವಿಗೆ ಸಚಿವ ಶರಣಪ್ರಕಾಶ್ ಪಾಟೀಲ್ ನೇರ ಕಾರಣ" ಎಂದು ಸಾವಿಗೂ ಮುನ್ನ ಮೂರು ಆಡಿಯೋ ರೆಕಾರ್ಡ್ ಮಾಡಿ ಅವರು ಆರೋಪಿಸಿದ್ದಾರೆ. ನಾನು ಹಿಂದೂ ಹುಲಿಯಾಗಿದ್ದೇನೆ, ಹಿಂದೂ ಹುಲಿಯಾಗಿಯೇ ಸಾಯುತ್ತೇನೆ.

ಹಿಂದೂ ಧರ್ಮದ ಬಗ್ಗೆ ಎಲ್ಲಿಯೂ ಮಾತನಾಡಬಾರದು. ಮಾತಾಡಿದರೆ ಇವರಿಗೆ ಬೆಂಕಿ ಬೀಳುತ್ತದೆ. ಹಾಗಾಗಿ ನನ್ನ ಸಾವಿಗೆ ಕಾಂಗ್ರೆಸ್ ಕಾರ್ಯಕರ್ತರು, ಸಚಿವ ಶರಣಪ್ರಕಾಶ್ ಪಾಟೀಲ್ ಕಾರಣ ಎಂದು ಆರೋಪಿಸಿ ಆಡಿಯೋ ರೆಕಾರ್ಡ್ ಮಾಡಿ ಕಳುಹಿಸಿದ ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನು ಆತ್ಮಹತ್ಯೆಗೂ ಮುನ್ನ ಆತನನ್ನು ಥಳಿಸಲಾಗಿದೆ ಎಂದು ಬಿಜೆಪಿ ಆರೋಪಿಸಿದೆ. ಈ ಸಂಬಂಧ ಕಲಬುರಗಿಯ ಸುಲೇಪೇಟದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಿಚಿತ ವ್ಯಕ್ತಿ ಶವ ಪತ್ತೆ

ಮೈಸೂರು, ಅ.19– ಮೇಟಗಳ್ಳಿ ಮತ್ತು ಮೈಸೂರು ರೈಲ್ವೆ ನಿಲ್ದಾಣಗಳ ನಡುವೆ ರೈಲುಗಾಡಿಗೆ ಸಿಲುಕಿ 25–30 ವರ್ಷದ ವ್ಯಕ್ತಿ ಪಟ್ಟಿದ್ದು, ಮೃತದೇಹ ಮೈಸೂರಿನ ಕೆಆರ್ ಆಸ್ಪತ್ರೆ ಶವಾಗಾರದಲ್ಲಿದೆ.

ಮೃತರು ಚಹರೆ: ಬಿಳಿ ಗೆರೆಯುಳ್ಳ ಚೆಕ್ಸ್ ಇರುವ ನೇವಿ ಬ್ಲೂ ಬಣ್ಣದ ತುಂಬು ತೋಳಿನ ಶರ್ಟ್, ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಕ್ರೀಮ್ ಬಣ್ಣದ ಅಂಡರ್‌ವೇರ್, ಬ್ರೌನ್ ಕಲರ್ ಬೆಲ್ಟ್, ಹಸಿರು ಬಣ್ಣದ ಹವಾಯಿ ಚಪ್ಪಲಿ ಬಲಗಾಲಿನಲ್ಲಿ ಕಪ್ಪು ದಾರ ಧರಿಸಿರುತ್ತಾರೆ. ಮೃತ ವ್ಯಕ್ತಿ 5 ಅಡಿ ಎತ್ತರವಿದ್ದು ಕಪ್ಪು ಮೈಬಣ್ಣ, ದುಂಡು ಮುಖ, ಉದ್ದವಾದ ಮೂಗು, ಸಾಧಾರಣ ಮೈಕಟ್ಟು ಹೊಂದಿದ್ದಾರೆ ತಲೆಯಲ್ಲಿ ಎರಡು ಇಂಚು ಉದ್ದದ ಕಪ್ಪು ಕೂದಲು ಹಾಗೂ ಗಡ್ಡ ಮೀಸೆ ಬಿಟ್ಟಿರುತ್ತಾರೆ.

ಮೃತನ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ದೂರವಾಣಿ ಸಂಖ್ಯೆ 0821–7516579 ಸಂಪರ್ಕಿಸಬಹುದು ಎಂದು ರೈಲ್ವೆ ಪೊಲೀಸ್ ಠಾಣೆಯ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಡಾ.ಎಂ.ಲಾವಣ್ಯಗೆ ಪಿ.ಹೆಚ್.ಡಿ ಪ್ರಶಸ್ತಿ ಪ್ರದಾನ

ಮೈಸೂರು, ಅ. 19– ಮೈಸೂರಿನ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ.ಎಂ.ಲಾವಣ್ಯ ಅವರು ವಿದ್ವಾಂಸರಾದ ಡಾ.ಆರ್.ರಾಮಕೃಷ್ಣ ಅವರ ಮಾರ್ಗದರ್ಶನದಲ್ಲಿ ನಡೆಸಿದ ಲೇಖಕಿ ನಳಿನಿ ಮೂರ್ತಿ ಅವರ ಸಾಹಿತ್ಯ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಕುಲಪತಿಗಳಾದ ಡಾ.ಲೋಕನಾಥ್ ರವರು ಪಿ.ಹೆಚ್.ಡಿ ಪದವಿ ಪ್ರದಾನ ಮಾಡಿದರು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಡಾ.ಶೈಲಜಾ, ಡಾ.ಎನ್.ಮಹದೇವ್, ಹಣಕಾಸು ಅಧಿಕಾರಿ ಪೂಜಾ ಉಪಸ್ಥಿತರಿದ್ದಾರೆ.

ಆಹಾರ ಮೇಳದಲ್ಲಿ ನಾಗಮ್ಮರ ನಾಟಿ ಔಷಧಕ್ಕೆ ಹೆಚ್ಚಿದ ಬೇಡಿಕೆ

ಕೊಡಗಿನ ದೊಡ್ಡಬೆಟ್ಟಗೇರಿ ನಾಟಿ ವೈದ್ಯೆ



ಮೈಸೂರು,ಅ.19(ಎಂಟಿವೈ)– ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ನಡೆಯುತ್ತಿರುವ ದಸರಾ ಆಹಾರ ಮೇಳದಲ್ಲಿ ಬುಡಕಟ್ಟು ಸಮುದಾಯ ನಾಟಿ ವೈದ್ಯೆ ನಾಗಮ್ಮ ಅವರು ಮಾರುತ್ತಿರುವ ನಾಟಿ ಔಷಧಕ್ಕೆ ಬೇಡಿಕೆ ವ್ಯಕ್ತವಾಗುತ್ತಿದ್ದು, ಸ್ತ್ರೀರೋಗ ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗೆ ಬೇಕಾದ ಔಷಧ ಹಾಗೂ ಸಲಹೆ ಪಡೆದುಕೊಳ್ಳುತ್ತಿದ್ದಾರೆ.

ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲೂಕಿನ, ಕುಶಾಲನಗರ ಹೋಬಳಿ ದೊಡ್ಡಬೆಟ್ಟಗೇರಿ ನಿವಾಸಿ ನಾಗಮ್ಮ ಎಂಬುವವರು ಕಳೆದ ಹಲವು ವರ್ಷಗಳಿಂದ ದಸರಾ ಆಹಾರ ಮೇಳದಲ್ಲಿ ನಾಟಿ ಔಷಧ ಮಾರಾಟ ಮಾಡುತ್ತಿದ್ದು, ಈ ಬಾರಿಯೂ ಬೊಂಬು ಬಿರಿಯಾನಿ ಮಳಿಗೆ ಬಳಿ ನಾಟಿ ಔಷಧ ಮಾರಾಟ ಮಾಡುತ್ತಿದ್ದಾರೆ. 5–6 ತಲೆಮಾರಿನಿಂದಲೂ ನಾಟಿ ಔಷಧಿ ನೀಡುವ ಕಾಯಕವನ್ನೇ ನಾಗಮ್ಮ ಕುಟುಂಬ ಅನುಸರಿಸುತ್ತಾ ಬಂದಿದ್ದು, ದೊಡ್ಡಬೆಟ್ಟಗೇರಿ ಭಾಗದಲ್ಲಿ ನಾಗಮ್ಮರ ನಾಟಿ ಔಷಧ ಪ್ರಶಂಸೆಗೆ ಪಾತ್ರವಾಗಿದೆ. ಬುಡಕಟ್ಟು ಸಮುದಾಯದಲ್ಲಿ ಕೆಲವರು ನೀಡುವ ನಾಟಿ ಔಷಧ ಪರಿಣಾಮಕಾರಿಯಾಗಿದ್ದು, ಅದರಲ್ಲಿ ನಾಗಮ್ಮ ಅವರ ಕೈಗುಣವೂ ಪ್ರಶಂಸೆಗೆ ಪಾತ್ರವಾಗಿದೆ.

ಆಹಾರ ಮೇಳದ ಮಳಿಗೆಯಲ್ಲಿ ನಾಗಮ್ಮ ಅವರು ನಾಗರಹಾವು ಕಡಿತಕ್ಕೆ ಬಳಸುವ ಔಷಧಿ, ಕಂಕುಳಲ್ಲಿ ಏಳುವ ಶಂಕತಾಳು, ಬಾಣಂತಿಯರಿಗೆ, ಮಕ್ಕಳಿಗೆ ಬಳಸುವ ಔಷಧಿ, ಗ್ಯಾಸ್ಟ್ರಿಕ್, ಬಿಪಿ, ಹಲ್ಲು ನೋವು, ತೊಡೆಬಾವು, ಅಲರ್ಜಿ, ನೆಗಡಿ, ಶೀತ, ಕೆಮ್ಮು, ರಕ್ತಭೇದಿ, ಹೊಟ್ಟೆನೋವು, ಅರ್ಧತಲೆ ನೋವು ಹಾಗೂ ಇನ್ನಿತರ ಆರೋಗ್ಯ ಸಮಸ್ಯೆಗೂ ನಾಟಿ ಔಷಧಿ ನೀಡುತ್ತಿದ್ದಾರೆ. ಈ ಹಿಂದೆ ಇವರಿಂದ ಔಷಧಿ ಖರೀಸಿದ್ದವರು, ಈ ಬಾರಿಗೂ ಔಷಧಿ ಖರೀದಿಸುತ್ತಿದ್ದಾರೆ. ಅದರಲ್ಲೂ ತಲೆ ನೋವು ಹಾಗೂ ಸ್ತ್ರೀರೋಗದ ಔಷಧಿಗೆ ಹೆಚ್ಚಿನ ಜನ ನಾಟಿ ಔಷಧಿ ಪಡೆದುಕೊಳ್ಳುತ್ತಿದ್ದಾರೆ. ನಾಗಮ್ಮ ಅವರು ನೀಡುವ ಔಷಧಿಯನ್ನು ಹೇಗೆ ಬಳಸಬೇಕು ಎಂದು ತಿಳಿಸಿಕೊಡುತ್ತಿರುವುದು ಪ್ರಶಂಸೆಗೆ ಪಾತ್ರವಾಗಿದೆ.

ವಿಧಾನ ಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಗೆ ಹೆಸರು ನೋಂದಣಿ

ಮೈಸೂರು, ಅ.19– ಕರ್ನಾಟಕ ವಿಧಾನಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹರಿರುವ ವ್ಯಕ್ತಿಯು ನಮೂನೆ–19ರಲ್ಲಿ ಅರ್ಜಿಯನ್ನು ನ. 6 ಇಲ್ಲವೇ ಅದಕ್ಕೂ ಮೊದಲು ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳ ಕಚೇರಿಗೆ ತಲುಪಿಸಲು ತಿಳಿಸಲಾಗಿದೆ. ಮೇಲೆ ತಿಳಿಸಲಾದ ಎಲ್ಲಾ ವ್ಯಕ್ತಿಗಳು ತಮ್ಮ ಹೆಸರನ್ನು ಇದುವರೆವಿಗೂ ಸೇರಿಸದೇ ಇದ್ದಲ್ಲಿ ನಿಗದಿತ ನಮೂನೆ–19ರಲ್ಲಿ ನ. 6ರೊಳಗೆ ಅಥವಾ ಅದಕ್ಕೂ ಮುಂಚೆ ಅರ್ಜಿಗಳನ್ನು ಸಲ್ಲಿಸಬಹುದು. ಮೇಲ್ಕಂಡ ವಿವರಗಳು ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ಇವರ ವೆಬ್‌ಸೈಟ್ ವಿಳಾಸ: https://kal-mys.gramaone.karnataka.gov.inರಲ್ಲಿ ಸಹ ಲಭ್ಯವಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಸರಾ ಅಂಗವಾಗಿ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆ; ಸಾವಿರಾರು ಯೋಗಪಟುಗಳಿಂದ ಅದ್ಭುತ ಪ್ರದರ್ಶನ

- ಯುವಕರಿಂದ ವೃದ್ಧರ ತನಕ ಯೋಗದ ಹಲವು ಅಪರೂಪದ ಭಂಗಿ
- 14 ವಿವಿಧ ವರ್ಗಗಳಿಗೆ ಯೋಗ ಸ್ಪರ್ಧೆ
- 16,645 ಯೋಗಪಟುಗಳು ಭಾಗಿ
- 10 ಸೆಕೆಂಡ್ ಯೋಗ ಭಂಗಿ ನಿರ್ಣಾಯಕ
- ಒಲಂಪಿಕ್‌ನಲ್ಲಿ ಯೋಗ ಸೇರ್ಪಡೆ





ಮೈಸೂರು, ಅ.19(ಜಿಎಲ್‌ಯು)– ಮೈಸೂರಿನ ದಸರಾ ವಸ್ತುಪ್ರದರ್ಶನದಲ್ಲಿ ಇಂದು ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆ ನಡೆಯಿತು. ವಯೋವೃದ್ಧರಾದಿಯಾಗಿ ಸಾವಿರಕ್ಕೂ ಹೆಚ್ಚು ಯೋಗಪಟುಗಳು ಸ್ಪರ್ಧೆಯಲ್ಲಿ ಪಾಲ್ಗೊಂಡು ಯೋಗದ ವಿವಿಧ ಭಂಗಿಗಳನ್ನು ಪ್ರದರ್ಶಿಸಿದರು.

ಭಾರತದ ಯೋಗ ವಿಶ್ವ ಮನ್ನಣೆ ಪಡೆದಿದ್ದು, ಯೋಗ ಮಾಡುವವರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಹಲವು ರೋಗಗಳಿಗೆ ರಾಮಬಾಣವಾಗಿರುವ ಯೋಗಕ್ಕೆ ವಿಶ್ವದ ಹಲವು ದೇಶಗಳ ಜನರು ಆಕರ್ಷಿತರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಯೋಗ ದಸರಾ ಅಂಗವಾಗಿ ಮೈಸೂರಿನಲ್ಲಿ ಇಂದು ರಾಜ್ಯಮಟ್ಟದ ಯೋಗ ಸ್ಪರ್ಧೆ ಆಯೋಜಿಸಲಾಗಿತ್ತು. ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಯೋಗಪಟುಗಳು ಸ್ಪರ್ಧೆಯಲ್ಲಿ ಉತ್ಸಾಹದಿಂದ ಭಾಗಿಯಾಗಿದ್ದರು.

ಮೈಸೂರಿನ ದಸರಾ ವಸ್ತುಪ್ರದರ್ಶನ ಕಾಳಿಂಗರಾವ್ ಸಭಾಂಗಣದಲ್ಲಿ ಇಂದು ಬೆಳಗ್ಗೆ ಆರಂಭವಾದ ಯೋಗಾಸನ ಸ್ಪರ್ಧೆ ಸಂಜೆವರೆಗೂ ನಡೆಯಿತು. 1,425 ಯೋಗಪಟುಗಳು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿಕೊಂಡಿದ್ದರೆ, 220 ಯೋಗಪಟುಗಳು ಸ್ಥಳಕ್ಕೆ ಬಂದು ನೋಂದಣಿ ಮಾಡಿಕೊಂಡರು. ಈ ಮೂಲಕ ಒಟ್ಟು 1,645 ಯೋಗಪಟುಗಳು ಯೋಗ ಸ್ಪರ್ಧೆಯಲ್ಲಿ ಭಾಗಿಯಾಗಿದ್ದರು.

ದಸರಾ ಯೋಗಾಸನ ಉದ್ಘಾಟಿಸಿ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ವಿಶ್ವದ ಯೋಗಕ್ಕೆ ಭಾರತ ಗುರುವಾದರೆ, ಕರ್ನಾಟಕದ ಯೋಗಕ್ಕೆ ಮೈಸೂರು ಗುರುವಾಗಿದೆ. ಯೋಗದಿಂದ ಆರೋಗ್ಯ ವೃದ್ಧಿಯಾಗಿ, ಮನಃಶಾಂತಿ ದೊರೆಯುತ್ತದೆ ಎಂದರು.

ಚೀನಾದಲ್ಲಿ ಮುಂದೆ ನಡೆಯುವ ಒಲಂಪಿಕ್ ಕ್ರೀಡಾಕೂಟದಲ್ಲಿ ಯೋಗ ಕೂಡ ಸೇರಿಸಲಾಗಿದೆ. ಆ ವೇಳೆ ಭಾರತವೇ ಹೆಚ್ಚು ಪದಕಗಳನ್ನು ಗಳಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಯಸ್ಸಿಗೆ ತಕ್ಕಂತೆ 14 ವಿವಿಧ ವರ್ಗಗಳನ್ನು ಮಾಡಿ ಆಯಾ ವಯಸ್ಸಿನವರು ಸಮಿತಿ ಸೂಚಿಸಿದ ಯೋಗವನ್ನೇ ಕಡ್ಡಾಯವಾಗಿ ಪ್ರದರ್ಶಿಸಬೇಕೆಂದು ಷರತ್ತು ವಿಧಿಸಲಾಗಿತ್ತು.

> ಮೈಸೂರು ಸಾಂಸ್ಕೃತಿಕ ನಗರಿ, ಪಾರಂಪರಿಕ ನಗರಿ ಬಿರುದು ಪಡೆದಿರುವಂತೆ ಯೋಗ ನಗರಿ ಹೆಸರಿನಿಂದ ಕೂಡ ಪ್ರಖ್ಯಾತವಾಗಿದೆ. ಈ ಹಿನ್ನೆಲೆ ಮೈಸೂರು ದಸರಾದಲ್ಲಿ ಯೋಗ ಕುರಿತಾದ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.
> –ಮೇಯರ್ ಶಿವಕುಮಾರ್

ಬಾಲಕ ಮತ್ತು ಬಾಲಕಿಯರ ವರ್ಗದಲ್ಲಿ 8ರಿಂದ 10, 10ರಿಂದ 12, 12ರಿಂದ 14 ಹಾಗೂ 14ರಿಂದ 18ನೇ ವಯಸ್ಸಿನವರಿಗೆ ಪ್ರತ್ಯೇಕವಾಗಿ ಯೋಗ ಸ್ಪರ್ಧೆ ಆಯೋಜಿಸಲಾಗಿತ್ತು. ಯುವಕ ಮತ್ತು ಯುವತಿಯರ ವಿಭಾಗದಲ್ಲಿ 18 ರಿಂದ 21, 21ರಿಂದ 25, 25ರಿಂದ 35ನೇ ವಯಸ್ಸಿನವರಿಗೆ ಯೋಗ ಸ್ಪರ್ಧೆ ನಡೆಯಿತು.

ಇದೇ ವೇಳೆ 35ರಿಂದ 45, 45ರಿಂದ 55, 55ರಿಂದ 65 ಹಾಗೂ 65 ವರ್ಷ ಮೇಲ್ಪಟ್ಟವರಿಗೆ ಯೋಗ ಸ್ಪರ್ಧೆ ಆಯೋಜನೆ ಮಾಡಲಾಗಿತ್ತು. ಇವರಲ್ಲಿ 12ರಿಂದ 14ನೇ ವಯೋಮಾನದವರು ಹೆಚ್ಚಾಗಿ ಭಾಗಿಯಾಗಿದ್ದರು. ಇನ್ನು 65 ವರ್ಷ ಮೇಲ್ಪಟ್ಟ 16 ಯೋಗಪಟುಗಳು ಸ್ಪರ್ಧೆಯಲ್ಲಿ ಭಾಗಿಯಾಗಿ ನಾವು ಯಾರಿಗಿಂತ ಕಡಿಮೆ ಇಲ್ಲ ಎಂದು ಸಾಬೀತು ಮಾಡಿದರು.

ಮತ್ಸ್ಯಾಸನ, ಚಕ್ರಾಸನ, ವೀರಭದ್ರಾಸನ, ಹಲಾಸನ, ಸರ್ವಾಂಗಾಸನ, ವೃಕ್ಷಾಸನ, ಮತ್ಸ್ಯಾಸನ, ಶೀರ್ಷಾಸನ, ಸರ್ವಾಂಗಾಸನ ಸೇರಿದಂತೆ ಹಲವು ಆಸನಗಳನ್ನು ಸ್ಪರ್ಧಿಗಳು ಪ್ರದರ್ಶಿಸಿದರು.

ಒಟ್ಟು 5 ರೀತಿಯ ಯೋಗ ಪ್ರದರ್ಶನಕ್ಕೆ ಅವಕಾಶ ನೀಡಲಾಗಿತ್ತು, ಈ ವೇಳೆ ಒಂದು ಯೋಗ ಭಂಗಿಯ ಪ್ರದರ್ಶನಕ್ಕೆ ಒಂದು ನಿಮಿಷ ಕಾಲಾವಕಾಶ ನೀಡಲಾಗಿತ್ತು. ಅಂತಿಮವಾಗಿ ಯೋಗ ಪ್ರದರ್ಶನ ಮಾಡುವ ಯೋಗಪಟು 10 ಸೆಕೆಂಡ್‌ಗಳ ಕಾಲ ಅದೇ ಯೋಗದ ಭಂಗಿಯಲ್ಲಿ ನಿಲ್ಲಬೇಕೆಂದು ಷರತ್ತು ಹಾಕಲಾಗಿತ್ತು. ಉತ್ತಮ ಯೋಗ ಭಂಗಿ ಪ್ರದರ್ಶಿಸುವ ಹಾಗೂ 10 ಸೆಕೆಂಡ್ ಕಾಲ ಅದೇ ಯೋಗ ಭಂಗಿಯಲ್ಲೇ ನಿಲ್ಲುವವರನ್ನು ವಿಜೇತರೆಂದು ಘೋಷಿಸಲಾಯಿತು.

ವಿಜೇತರಿಗೆ 6 ಬಹುಮಾನದ ಜೊತೆಗೆ 3 ಸಾವಿರ, 2 ಸಾವಿರ ಹಾಗೂ 1 ಸಾವಿರ ನಗದು ಬಹುಮಾನ ನೀಡಲಾಯಿತು.

ಮೈಸೂರು ದಸರಾದಲ್ಲಿ 2007ರಿಂದ ಯೋಗ ಸ್ಪರ್ಧೆ ಆಯೋಜಿಸಿಕೊಂಡು ಬರಲಾಗುತ್ತಿದೆ. ಕಳೆದ ವರ್ಷ 1,200 ಯೋಗಪಟುಗಳು ಪಾಲ್ಗೊಂಡಿದ್ದರು. ಆದರೆ ಈ ಬಾರಿ 1,645 ಯೋಗಪಟುಗಳು ಪಾಲ್ಗೊಂಡಿದ್ದಾರೆ. ಈ ಮೂಲಕ ಯೋಗದ ಉಪಯೋಗದ ಬಗ್ಗೆ ಜನರಲ್ಲಿರುವ ಜಾಗೃತಿ ಹೆಚ್ಚಾಗುತ್ತಿರುವುದು ಸ್ಪಷ್ಟ, ಉಪ ಮೇಯರ್ ಡಾ. ರೂಪ, ಯೋಗ ದಸರಾ ಉಪಸಮಿತಿ ವಿಶೇಷಾಧಿಕಾರಿ ಕೆ.ರಮ್ಯಾ, ಕಾರ್ಯದರ್ಶಿ ಡಾ.ಪುಷ್ಪಾ, ಡಿ.ಎಂ. ರಾಣಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದಸರಾ ಸಿಎಂ ಕಪ್: ಅಥ್ಲೆಟಿಕ್ಸ್‌ನಲ್ಲಿ ಕ್ರೀಡಾಪಟುಗಳ ಸಾಧನೆ

ಹಾಕಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟ ಮೈಸೂರಿನ ಪುರುಷ, ಮಹಿಳಾ ತಂಡ



ಮೈಸೂರು, ಅ.19(ಎಂಟಿವೈ)– ದಸರಾ ಮಹೋತ್ಸವ ಅಂಗವಾಗಿ ಮೈಸೂರಿನ ನಜ಼ರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಆರಂಭವಾದ ಸಿಎಂ ಕಪ್ ದಸರಾ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ವಿವಿಧ ಕ್ರೀಡೆಗಳಲ್ಲಿ ಕ್ರೀಡಾಪಟು ಗಮನಾರ್ಹ ಸಾಧನೆ ಮಾಡಿ ಗಮನ ಸೆಳೆದಿದ್ದಾರೆ.

ಅಥ್ಲೆಟಿಕ್ಸ್ ವಿಭಾಗದಲ್ಲಿ ವಿವಿಧ ಕ್ರೀಡಾ ಚಟುವಟಿಕೆ ಆರಂಭವಾಗಿದ್ದು, ರಾಜ್ಯದ ವಿವಿಧೆಡೆಯಿಂದ ದಸರಾ ಕ್ರೀಡಾಕೂಟಕ್ಕೆ ಆಗಮಿಸಿರುವ ಕ್ರೀಡಾಪಟುಗಳು ಜಿದ್ದಾಜಿದ್ದಿನ ಪ್ರದರ್ಶನ ನೀಡುತ್ತಿದ್ದು, ಗೆಲ್ಲುವ ಗುರಿಯೊಂದಿಗೆ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದಾರೆ. ಎತ್ತರ ಜಿಗಿತ, ಉದ್ದ ಜಿಗಿತ, ಗುಂಡು ಎಸೆತ, ಓಟ ಸೇರಿದಂತೆ ವಿವಿಧ ಕ್ರೀಡಾ ಚಟುವಟಿಕೆಗಳು ಕ್ರೀಡಾಸಕ್ತರ ಗಮನ ಸೆಳೆಯಿತು.

ಇಬ್ಬರು ಆಟಗಾರರಿಂದ ಒಂದೇ ಸಾಧನೆ: ಕ್ರೀಡಾಕೂಟದ ಎತ್ತರ ಜಿಗಿತದ ಸ್ಪರ್ಧೆಯಲ್ಲಿ ಪಲ್ಲವಿ ಪಾಟೀಲ್(1.67 ಮೀ.) ಹಾಗೂ ಬೆಂಗಳೂರಿನ ಎನ್.ಪಾವನ(1.67 ಮೀ.)ಒಂದೇ ಪ್ರಮಾಣದ ಎತ್ತರ ಜಿಗಿದು ಸಮ ಸಾಧನೆ ಮಾಡಿದರು. ಆದರೆ ತೀರ್ಪುಗಾರರು ಚಿನ್ನದ ಪದಕವನ್ನು ಇಬ್ಬರಿಗೆ ನೀಡಲು ಸಾಧ್ಯವಿಲ್ಲ. ಯಾರು ಕಡಿಮೆ ಅವಕಾಶದಲ್ಲಿ ಹಾಗೂ ಕಡಿಮೆ ತಪ್ಪುಗಳನ್ನು ಮಾಡಿ 1.67 ಮೀ. ಎತ್ತರ ಜಿಗಿದಿದ್ದಾರೆ ಎಂಬುದರ ಆಧಾರದ ಮೇಲೆ ಪಲ್ಲವಿ ಅವರಿಗೆ ಚಿನ್ನದ ಪದಕ ನೀಡಿರುವುದಾಗಿ ಘೋಷಿಸಿದರು. ಪಲ್ಲವಿ ಅವರಿಗಿಂತ ಹೆಚ್ಚು ಅವಕಾಶ ಪಡೆದು ಹಾಗೂ ಹೆಚ್ಚು ತಪ್ಪು ಮಾಡಿ ಸಾಧನೆ ಮಾಡಿದ ಪಾವನಾಗೆ ಬೆಳ್ಳಿ ಪದಕ ಎಂದು ತಿಳಿಸಿದರು. 1.64 ಮೀ. ಎತ್ತರ ಜಿಗಿದ ದಕ್ಷಿಣ ಕನ್ನಡ ಜಿಲ್ಲೆಯ ಫ್ಲಾವಿಶಾ ವೆಲಿಶಾ ಮೊಂಟಿರೊ ತೃತೀಯ ಸ್ಥಾನ ಪಡೆದರು.

ಎತ್ತರಜಿಗಿತದಲ್ಲಿ ಒಲಿಯದ ಚಿನ್ನ ಉದ್ದ ಜಿಗಿತದಲ್ಲಿ ಪ್ರಾಪ್ತಿ : ಎತ್ತರ ಜಿಗಿತದಲ್ಲಿ ಚಿನ್ನದ ಪದಕ ಪಡೆದವರಷ್ಟೇ ಎತ್ತರ ಜಿಗಿದರೂ ನಿಯಮಗಳ ಅನುಸಾರ ಚಿನ್ನದ ಪದಕ ವಂಚಿತರಾಗಿದ್ದ ಬೆಂಗಳೂರಿನ ಪಾವನಾ, ಉದ್ದ ಜಿಗಿತದಲ್ಲಿ ಚಿನ್ನದ ಬೇಟೆಯಾಡುವಲ್ಲಿ ಯಶಸ್ವಿಯಾದರು. ತಮ್ಮ ಸಮೀಪಸ್ಪರ್ಧಿಗಿಂತ 0.65 ಮೀ. ಹೆಚ್ಚು ಉದ್ದ ಜಿಗಿದ ಪಾವನಾ(6.10 ಮೀ.)ಚಿನ್ನದ ಪದಕಕ್ಕೆ ಕೊರಳೊಡ್ಡಿದರು. 5. 94 ಮೀ. ಸಾಧನೆ ಮಾಡಿದ ವಿ. ಎಸ್. ಶ್ರೀದೇವಿಕಾ ಬೆಳ್ಳಿ ಪದಕ ಪಡೆದರು. ಅಕ್ಷತಾ 5.45 ಉದ್ದ ಜಿಗಿದು ತೃತೀಯ ಸ್ಥಾನ ಪಡೆದರು.

ಸೂರ್ಯಗೆ ಒಲಿದ ಚಿನ್ನ: ಪುರುಷರ 800 ಮೀ ಓಟ ಸ್ಪರ್ಧೆಯಲ್ಲಿ ಬೆಂಗಳೂರು ನಗರ ವಿಭಾಗದಲ್ಲಿ 2:07.47 ಸೆಕೆಂಡುಗಳಲ್ಲಿ ಗುರಿ ತಲುಪಿದ ಕೆ. ಸೂರ್ಯ ಚಿನ್ನದ ಪದಕ ಪಡೆದರು. ಕೇವಲ 47 ನಿಮಿಷ ತಡವಾಗಿ ಓಟ ಪೂರ್ಣಗೊಳಿಸಿದ ರಾಹುಲ್ ಚೌದರಿ(2:07.94ಸೆ.) ದ್ವಿತೀಯ ಸ್ಥಾನ ಪಡೆದರು. 2:08.03ಸೆಕೆಂಡುಗಳಲ್ಲಿ ಗುರಿ ತಲುಪಿದ ಕಮಲ ಕಣ್ಣನ್ ತೃತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು.

5000 ಮೀ. ಓಟ(ಪುರುಷರು): ವೈಭವ ಮೂರ್ತಿ ಪಾಟೀಲ್(15:17.24ಸೆ.)ಪ್ರಥಮ, ಎ.ಆರ್. ರೋಹಿತ್(15:17.70 ಸೆ.) ದ್ವಿತೀಯ, ಗುರುಪ್ರಸಾದ್(15:28.66ಸೆ)ತೃತೀಯ.

ಗುಂಡು ಎಸೆತ : ಎಸ್.ಆರ್. ರಾಹುಲ್ ಕಶ್ಯಪ್(16.45 ಮೀ.)ಪ್ರಥಮ, ಪ್ರಜ್ವಲ್ ಎಂ. ಶೆಟ್ಟಿ(16.10ಮೀ.)ದ್ವಿತೀಯ, ಬಿ. ಮನುಶ್(16.09ಮೀ.)ತೃತೀಯ.

ಮಹಿಳೆಯರ ವಿಭಾಗ : 800 ಮೀ. ಓಟ: ವಿಜಯಕುಮಾರಿ(2:10.46ಸೆ.)ಪ್ರಥಮ, ಅರ್ಪಿತಾ(2:12.92ಸೆ.)ದ್ವಿತೀಯ, ದೀಪಾಶ್ರೀ(2:13.43ಸೆ.)ತೃತೀಯ.

ಜಾವಲಿನ್ ಥ್ರೋ : ಕರೀಷ್ಮಾ ಎಸ್. ಸಾಯಿಲ್(52.07ಮೀ.)ಪ್ರಥಮ, ಶ್ರವ್ಯ(52.07ಮೀ.)ದ್ವಿತೀಯ, ನಿದಿ ಎಂ. ಶೆಟ್ಟಿ(38.59 ಮೀ.)ತೃತೀಯ.

5000 ಮೀ. ಓಟ : ಚೈತ್ರಾ(18:24.44ಸೆ.) ಪ್ರಥಮ, ಎನ್.ಎಲ್. ತೇಜಸ್ವಿ(19:22.53ಸೆ) ದ್ವಿತೀಯ, ಶಾಹಿನ್ ಸಂಸುದ್ದೀನ್ (19:39.34 ಸೆ) ತೃತೀಯ ಬಹುಮಾನ ಪಡೆದುಕೊಂಡರು.

ಸೆಮಿಫೈನಲ್ ತಲುಪಿದ ಮೈಸೂರು ತಂಡ: ದಸರಾ ಹಾಕಿಯಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ಮೈಸೂರಿನ ಮಹಿಳೆ, ಪುರುಷರ ತಂಡಗಳೆರಡೂ ಸೆಮಿಫೈನಲ್ಸ್‌ಗೆ ಲಗ್ಗೆ ಇಟ್ಟಿವೆ.

ಮೈಸೂರಿನ ಚಾಮುಂಡಿವಿಹಾರ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೈಸೂರಿನ ವನಿತೆಯರ ತಂಡ ಎಂಟರ ಘಟ್ಟಕ್ಕೆ ಪ್ರವೇಶಿಸಿದೆ. 1ನೇ ಸೆಮಿಫೈನಲ್ಸ್‌ನಲ್ಲಿ ಮೈಸೂರಿನ ಮಹಿಳೆಯರು ಬೆಳಗಾವಿ ವಿರುದ್ಧ ಹಾಗೂ 2ನೇ ಸೆಮಿಫೈನಲ್ಸ್‌ನಲ್ಲಿ ದಕ್ಷಿಣ ಕನ್ನಡ ಬಾಗಲಕೋಟೆ ವಿರುದ್ಧ ಸ್ಪರ್ಧಿಸಲಿದೆ.

ಪುರುಷರ ವಿಭಾಗದ ಮೊದಲ ಸೆಮಿಫೈನಲ್ಸ್‌ನಲ್ಲಿ ಧಾರವಾಡ ತಂಡವು ಕೊಡಗು ವಿರುದ್ಧ 2ನೇ ಸೆಮಿಫೈನಲ್ಸ್‌ನಲ್ಲಿ ಹಾಕಿ ಮೈಸೂರು ತಂಡವು ಹಾಸನದ ವಿರುದ್ಧ ಸೆಣಸಲಿದೆ.



ಸಂಗೀತ ವಿವಿಯಿಂದ ಗೌರವ ಡಾಕ್ಟರೇಟ್ ಪಡೆದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರನ್ನು ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ವಿಧಾನ ಪರಿಷತ್ ಮಾಜಿ ಸದಸ್ಯರಾದ ಭಾನುಪ್ರಕಾಶ್, ಸಿದ್ದರಾಜು, ಮುಖಂಡರಾದ ಜೋಗಿ ಮಂಜು, ಕೇಬಲ್ ಮಹೇಶ್, ಕಿಶೋರ್ ಮುಂತಾದವರು ಸನ್ಮಾನಿಸಿದರು.

ಮೈಸೂರು ಸುತ್ತ ಇನ್ನೂ ಮೂರು ಕಡೆ ಆಟೋನಗರ ನಿರ್ಮಾಣಕ್ಕೆ ಆಗ್ರಹ

ವಾಹನ ದುರಸ್ತಿ ಕಾರ್ಮಿಕರಿಂದ ಸಂಸದ ಪ್ರತಾಪ್ ಸಿಂಹರಿಗೆ ಮನವಿ



ಮೈಸೂರು, ಅ.19(ಆರ್‌ಕೆ)– ಲಘು ಮತ್ತು ಭಾರಿ ವಾಹನಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಮೈಸೂರು ಸುತ್ತ ಇನ್ನೂ ಮೂರು ಕಡೆಗಳಲ್ಲಿ ಆಟೋನಗರ ನಿರ್ಮಿಸಿಕೊಡುವಂತೆ ಮೈಸೂರು ನಗರ ವಾಹನ ದುರಸ್ತಿ ಮಾಡುವ ಕಾರ್ಮಿಕರ ಒಕ್ಕೂಟವು ಒತ್ತಾಯಿಸಿದೆ.

ಈ ಸಂಬಂಧ ಜಲದರ್ಶಿನಿ ಅತಿಥಿ ಗೃಹದಲ್ಲಿ ಮಂಗಳವಾರ ಸಂಸದ ಪ್ರತಾಪ್ ಸಿಂಹ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಒಕ್ಕೂಟದ ಅಧ್ಯಕ್ಷ ಬಿ.ಎನ್. ಮಹೇಶ್ ರಾಜೇ ಅರಸ್, ಉಪಾಧ್ಯಕ್ಷರಾದ ಸೈಯದ್ ನಯಾಜ್ ಅಹಮ್ಮದ್, ಅಮಾನುಲ್ಲಾ, ಡಿ. ನಾಗರಾಜು ನೇತೃತ್ವದ ಸದಸ್ಯರ ನಿಯೋಗವು 1998 ರಿಂದ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದ ಹಿನ್ನೆಲೆಯಲ್ಲಿ ಮುಡಾದಿಂದ ನಂಜನಗೂಡು ರಸ್ತೆಯ ಬಂಡಿಪಾಳ್ಯ ಎಪಿಎಂಸಿ ಸಮೀಪ ಜಾಗ ಮಂಜೂರು ಮಾಡಿ ಆಟೋನಗರ ಬಡಾವಣೆ ನಿರ್ಮಾಣವಾಗುತ್ತಿದೆ ಎಂದರು.


ಮೈಸೂರು ನಗರದಲ್ಲಿ ಶಾಲಾ ಕಾಲೇಜು, ಆಸ್ಪತ್ರೆ, ಧಾರ್ಮಿಕ ಕೇಂದ್ರಗಳಿರುವುದರಿಂದ ವಾಹನ ಸಂಚಾರ ಸಂದಣಿ ವಾಯುಮಾಲಿನ್ಯ, ಶಬ್ದಮಾಲಿನ್ಯ ಉಂಟಾಗುವ ಕಾರಣ ಹೊರವರ್ತುಲ ರಸ್ತೆ ಹೊರಗಡೆ ಆಟೋನಗರ ನಿರ್ಮಿಸಿದರೆ, ಸಂಚಾರದ ಒತ್ತಡ ಕಡಿಮೆಯಾಗಲಿದೆ ಹಾಗೂ ಒಂದೇ ಕಡೆ ವಾಹನಗಳ ದುರಸ್ತಿ ಸೌಲಭ್ಯವಿದ್ದರೆ ವಾಹನ ಮಾಲೀಕರು, ಮೆಕ್ಯಾನಿಕ್‌ಗಳಿಗೂ ಅನುಕೂಲವಾಗುತ್ತದೆ ಎಂದು ವಿವರಿಸಿದರು.

ಮೈಸೂರಲ್ಲಿ 2,500 ಮಂದಿ ವಾಹನ ದುರಸ್ತಿ ಮಾಡುವ ಮೆಕ್ಯಾನಿಕ್‌ಗಳಿದ್ದು, ಅವರನ್ನು ಅವಲಂಬಿಸಿರುವ ಸಾವಿರಾರು ಮಂದಿ ಜೀವನ ನಡೆಸುತ್ತಿದ್ದಾರೆ. ಹೆಚ್ಚುತ್ತಿರುವ ವಾಹನಗಳ ಸಂಖ್ಯೆಗೆ ಅನುಗುಣವಾಗಿ ಮೈಸೂರಿನ ಹೊರ ಭಾಗದಲ್ಲಿ ಮೂರು ಕಡೆ ಆಟೋನಗರಕ್ಕೆ ಜಾಗ ಗುರ್ತಿಸಿ ಯೋಜನೆ ಜಾರಿಗೊಳಿಸಬೇಕು ಎಂದು ಅವರು ಸಂಸದರಲ್ಲಿ ಮನವಿ ಮಾಡಿದ್ದಾರೆ.

ಈಗಾಗಲೇ ನಿರ್ಮಾಣವಾಗುತ್ತಿರುವ ಆಟೋನಗರದ ಎದುರೇ ರಿಂಗ್‌ರಸ್ತೆಗೆ ಹೊಂದಿಕೊಂಡಂತೆ ಜಾಗ ಗುರ್ತಿಸಲಾಗಿದ್ದರೂ ಕೆಲ ಕಾನೂನು ತೊಡಕಿನಿಂದಾಗಿ ಕಾರ್ಯಗತವಾಗಿರಲಿಲ್ಲ. ಈಗ ಆ ಸಮಸ್ಯೆ ಬಗೆಹರಿದಿರುವುದರಿಂದ ಅಲ್ಲಿ ಆಟೋನಗರ ನಿರ್ಮಿಸಲು ಕ್ರಮ ವಹಿಸಬೇಕೆಂದೂ ಒಕ್ಕೂಟದ ಪದಾಧಿಕಾರಿಗಳು ಸಂಸದರಿಗೆ ನೀಡಿರುವ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಒಕ್ಕೂಟದ ಕಾರ್ಯದರ್ಶಿಗಳಾದ ಹಬೀಬ್ ಉಲ್ಲಾ, ಪದ್ಮನಾಭ, ಜಯರಾಮ್, ಆರ್. ನಾಗರಾಜು, ಸಹಕಾರ್ಯದರ್ಶಿಗಳಾದ ಫಯಾಜ್ ಅಹಮ್ಮದ್, ವಿ.ಪಿ. ಪ್ರಸಾದ್, ಖಜಾಂಚಿ ಜೆ.ಪಿ. ವಿನ್ಸೆಂಟ್ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಕಲಾವಿದರ ಕೈಚಳಕದಲ್ಲಿ ಅರಳಿದ ಕಲಾಕೃತಿ, ಚಿತ್ರಕಲೆ ಅನಾವರಣ



ಮೈಸೂರು,ಅ.19(ಎಂಟಿವೈ)– ಮೈಸೂರಿನ ಕಲಾಮಂದಿರದ ಆವರಣದಲ್ಲಿ ಗುರುವಾರ ಆರಂಭವಾದ ಅಖಿಲ ಭಾರತ ಹಾಗೂ ರಾಜ್ಯ ಮಟ್ಟದ ಕರಕುಶಲ ಕಲೆಗಳ ಪ್ರಾತ್ಯಕ್ಷಿಕೆ ಹಾಗೂ ಪ್ರದರ್ಶನ ಮೇಳದಲ್ಲಿ ಕಲಾವಿದರ ಕೈಚಳಕದಿಂದ ಅರಳಿದ ಕಲಾಕೃತಿ ಹಾಗೂ ಚಿತ್ರಕಲೆ ಅನಾರವಣಗೊಂಡಿತು.

ಲಲಿತಕಲೆ ಮತ್ತು ಕರಕುಶಲ ಕಲೆ ಉಪಸಮಿತಿ ಆಯೋಜಿಸಿದ್ದ ಕರಕುಶಲ ಕಲೆಗಳ ಪ್ರಾತ್ಯಕ್ಷಿಕೆ ಹಾಗೂ ಪ್ರದರ್ಶನ ಮೇಳದಲ್ಲಿ ಹಲವು ಕಲಾವಿದರು ಪಾಲ್ಗೊಂಡಿದ್ದು, ತಾವು ರಚಿಸಿದ್ದ ಕಲಾಕೃತಿಗಳು, ಅಲಂಕಾರಿಕ ವಸ್ತುಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಪ್ರದರ್ಶನಗೊಂಡಿರುವ ಕಲಾಕೃತಿಗಳು ಒಂದಕ್ಕಿಂತ ಒಂದು ಆಕರ್ಷಕವಾಗಿ ಮೂಡಿ ಬಂದಿವೆ. ಅ.19ರಿಂದ 22 ರವರೆಗೆ ಜರುಗುವ ಈ ಪ್ರದರ್ಶನ ಮೇಳವು ಕಲಾಸಕ್ತರ ಮನಸೂರೆಗೊಳ್ಳುತ್ತಿದೆ.

ಮಣ್ಣಿನಿಂದ ತಯಾರಿಸಿದ ವಸ್ತುಗಳು, ನವಲಗುಂದ ಧರೀಸ್‌ನ ಜಮಕಾನಗಳು, ಪಟ್ಟಚಿತ್ರ ಪೇಂಟಿಂಗ್, ರಾಜಸ್ಥಾನಿ ಪೇಂಟಿಂಗ್, ಲೆದರ್ ಪಪ್ಪೆಟ್ರಿ, ಚರ್ಮದಿಂದ ತಯಾರಿಸಿದ ಕೈಚೀಲ, ಪರ್ಸ್, ಮುರಾಲ್ ಪೇಂಟಿಂಗ್, ಬೀಟೆ ಮರದ ಕುಂದಣ ಕಲೆ, ಇನ್ಲೇ ವರ್ಕ್, ಮಧುಬಾನಿ ಪೇಂಟಿಂಗ್, ಮ್ಯಾಟ್ ವರ್ಕ್, ಮರದ ಕೆತ್ತನೆಗಳು, ಚನ್ನಪಟ್ಟಣದ ಆಟಿಕೆಗಳು, ಸೆಣಬಿನ ಉತ್ಪನ್ನಗಳು, ಟೆರಾಕೋಟ ವಸ್ತುಗಳು, ಆಕರ್ಷಕ ಕರಕುಶಲ ಮತ್ತು ಕೈ ಮಗ್ಗದ ವಸ್ತುಗಳು ಸೇರಿದಂತೆ ವಿವಿಧ ರಾಜ್ಯಗಳಿಂದ ತಂದಿರುವ ವಸ್ತುಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಚಾಲನೆ: ಮೇಳಕ್ಕೆ ಸಣ್ಣ ಕೈಗಾರಿಕೆಗಳು, ಸಾರ್ವಜನಿಕ ವಲಯ ಉದ್ಯಮಗಳ ಸಚಿವ ಶರಣಬಸಪ್ಪ ದರ್ಶನಾಪುರ ಚಾಲನೆ ನೀಡಿದ ನಂತರ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹಳೆಯ ಕರಕುಶಲ ಕಲೆಗಳು ಮತ್ತಷ್ಟು ಪ್ರಖ್ಯಾತಿ ಪಡೆದುಕೊಳ್ಳುತ್ತಿವೆ. ಇದರಿಂದ ಮರಳಿ ಹಳೆಯ ಕರಕುಶಲ ಕಲೆಗಳತ್ತ ಸಾಗಲು ಮುಂದೆ ಬರುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ದಸರಾ ಮಹೋತ್ಸವವನ್ನು ನಾಡಹಬ್ಬವಾಗಿ ಆಚರಿಸುತ್ತಿದ್ದೇವೆ. ದಸರಾ ಮಹೋತ್ಸವಕ್ಕೆ ರಾಜ್ಯ ಹಾಗೂ ದೇಶದ ವಿವಿಧ ಭಾಗಗಳಿಂದ ಕಲಾವಿದರು ಹಾಗೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ವಿದೇಶಿಗರು ಮೈಸೂರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.

ರಾಜರ ಕಾಲದಲ್ಲಿಯೇ ಮೈಸೂರು ಸಾಕಷ್ಟು ಅಭಿವೃದ್ಧಿ ಹೊಂದಿದೆ. ಮೈಸೂರಲ್ಲಿ ಕಲೆಗಳನ್ನು ಪೋಷಿಸಿ, ಪ್ರೋತ್ಸಾಹಿಸುವುದಕ್ಕೆ ಆದ್ಯತೆ ನೀಡುತ್ತಿರುವುದರಿಂದ ಕಲಾಕೃತಿಗಳಿಗೆ ಬಹು ಬೇಡಿಕೆ ವ್ಯಕ್ತವಾಗುತ್ತಿದೆ. ಕಲಾವಿದರು ಹಾಗೂ ಕಲೆಗಳನ್ನು ನಾವು ಗೌರವಿಸಬೇಕು. ಕಲಾವಿದರು ಮತ್ತಷ್ಟು ಅಭಿವೃದ್ಧಿಯಾಗುವಂತಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಕರಕುಶಲ ಕಲೆಗಳನ್ನೇ ಆಧರಿಸಿ ಮೈಸೂರು ನಗರದಲ್ಲಿ ಹೆಚ್ಚು ಜನ ಬದುಕು ಕಟ್ಟಿಕೊಂಡಿದ್ದಾರೆ. ಶಿಲ್ಪಿಗಳ ಕೆತ್ತನೆಯನ್ನೇ ಕಸುಬನ್ನಾಗಿಸಿ ಜೀವನ ಸಾಗಿಸುತ್ತಿದ್ದಾರೆ. ಕರಕುಶಲಕರ್ಮಿಗಳ ಜೀವನಾಧಾರ ಅವರ ಕಲೆಯೇ ಆಗಿದ್ದು, ಈ ಕಲೆಗಳನ್ನು ಉಳಿಸಿ ಬೆಳೆಸುವ ಕರ್ತವ್ಯ ನಮ್ಮದಾಗಿದೆ. ಕಲೆಗೆ ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಡಿಸಿಪಿ ಮುತ್ತುರಾಜ್, ಲಲಿತ ಕಲೆ ಹಾಗೂ ಕರಕುಶಲ ಉಪಸಮಿತಿ ಉಪವಿಶೇಷಾಧಿಕಾರಿ ದೇವರಾಜು, ಕಾರ್ಯಾಧ್ಯಕ್ಷೆ ನಾಜಿಯಾ ಸುಲ್ತಾನ, ಕಾರ್ಯದರ್ಶಿ ಬಿ.ರಶ್ಮಿ, ಸಮಿತಿ ಅಧ್ಯಕ್ಷೆ ಹೇಮಲತಾ, ಉಪಾಧ್ಯಕ್ಷರಾದ ಜಯಚಂದ್ರ ಹಾಗೂ ಮಹಮ್ಮದ್ ಅಕ್ಬರ್ ಅಲಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ವಿದ್ಯುತ್ ಸಮಸ್ಯೆ ಪರಿಹಾರಕ್ಕಾಗಿ ರೈತರ ಪ್ರತಿಭಟನೆ



ಮೈಸೂರು, ಅ.19(ಜಿಎ)–ರಾಜ್ಯದಲ್ಲಿ ಎದುರಾಗಿರುವ ವಿದ್ಯುತ್ ಸಮಸ್ಯೆಯನ್ನು ಸರಿಪಡಿಸುವಂತೆ ಆಗ್ರಹಿಸಿ ಗುರುವಾರ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು, ಮೈಸೂರಿನ ವಿಜಯನಗರದಲ್ಲಿರುವ ವಿದ್ಯುತ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ರಾಜ್ಯದ 192ಕ್ಕಿಂತಲೂ ಅಧಿಕ ತಾಲೂಕುಗಳು ಸಂಪೂರ್ಣ ಬರಕ್ಕೆ ತುತ್ತಾಗಿವೆ. ಈ ಸಂಬಂಧ ರಾಜ್ಯ ಸರ್ಕಾರಕ್ಕೂ ಶಿಫಾರಸ್ಸು ಮಾಡಲಾಗಿದೆ. ರಾಜ್ಯದಲ್ಲಿ 45 ಲಕ್ಷಕ್ಕೂ ಅಧಿಕ ರೈತರು ಪಂಪ್ ಸೆಟ್ ನೀರಾವರಿ ಮೂಲಕ ತೋಟಗಾರಿಕೆ ಮತ್ತು ಇತರ ಫಸಲುಗಳನ್ನು ಬೆಳೆದಿದ್ದಾರೆ. ಆದರೆ, ವಿದ್ಯುತ್ ಸರಬರಾಜಿನ ವ್ಯತ್ಯಯದಿಂದಾಗಿ ನಷ್ಟ ಅನುಭವಿಸುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಕಾರ್ಖಾನೆಗೆ ಬೇಕಿದ್ದರೆ ಅರ್ಧ ವಿದ್ಯುತ್ ನೀಡಿದರೂ ಪರವಾಗಿಲ್ಲ. ರೈತರ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಲಿ ಎಂದು ಆಗ್ರಹಿಸಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ನಿತ್ಯವೂ 7 ಗಂಟೆ 3–ಫೇಸ್ ವಿದ್ಯುತ್ ನೀಡಿ ರೈತರು ಬೆಳೆದಿರುವ ಫಸಲುಗಳನ್ನು ರಕ್ಷಣೆ ಮಾಡಬೇಕು. ಹಾಗೇ ವಿದ್ಯುತ್ ವ್ಯತ್ಯಯವಾಗದಂತೆ ಎಚ್ಚರಿಕೆ ವಹಿಸಬೇಕು. ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಹೆಚ್ಚು ಒತ್ತು ನೀಡಿ, ಎಲ್ಲಾ ಸಕ್ಕರೆ ಕಾರ್ಖಾನೆಗಳು ವಿದ್ಯುತ್ ಉತ್ಪಾದನೆ ಮಾಡುವುದನ್ನು ಕಡ್ಡಾಯಗೊಳಿಸಿ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ರಾಜ್ಯಾಧ್ಯಕ್ಷರಾದ ಬಡಗಲಪುರ ನಾಗೇಂದ್ರ, ಹೊಸಕೋಟೆ ಬಸವರಾಜ್, ಹೊಸೂರು ಕುಮಾರ್, ಪ್ರಸನ್ನ ಎನ್.ಗೌಡ, ನೇತ್ರಾವತಿ ಮತ್ತು ಮರಂಕಯ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜಾನಪದ ಸಂಸ್ಕೃತಿ ಬಿಂಬಿಸಿದ ಜಾನಪದ ದಸರಾ ಉತ್ಸವ

ಮೆರಗು ನೀಡಿದ ಪುಟಾಣಿಗಳ ಚಂಡೆಮೇಳ, ವೀರಗಾಸೆ, ಪಟ ಕುಣಿತ, ಡೊಳ್ಳು ಕುಣಿತ

ಮಡಿಕೇರಿ, ಅ.19– ಪ್ರೀತಿ, ಸೌಹಾರ್ದತೆ, ಮಾನವೀಯ ಕಳಕಳಿಯನ್ನು ತನ್ನೊಳಗೆ ಮಿಳಿತವಾಗಿಸಿಕೊಂಡಿರುವ 'ಜಾನಪದ' ಎನ್ನುವುದು ಬದುಕಿನ ಪದ್ಧತಿಯೇ ಆಗಿದೆ. ಇಂತಹ ಜಾನಪದ ಸಂಸ್ಕೃತಿಯನ್ನು ವೈವಿಧ್ಯಮಯ ಕಲಾ ಪ್ರಕಾರಗಳ ಪ್ರದರ್ಶನಗಳೊಂದಿಗೆ ಸಮರ್ಥವಾಗಿ ಕಟ್ಟಿಕೊಡುವಲ್ಲಿ ಮಡಿಕೇರಿಯ ಜಾನಪದ ದಸರಾ ಉತ್ಸವ ಯಶಸ್ವಿಯಾಯಿತು.

ಜಾನಪದ ಉಡುಪು ತೊಟ್ಟ ಮಕ್ಕಳು, ಪುಟಾಣಿಗಳ ಚೆಂಡೆ ಮೇಳ, ವೀರಗಾಸೆ, ಪಟ ಕುಣಿತ, ಡೊಳ್ಳು ಕುಣಿತಗಳೊಂದಿಗೆ ಗುರುವಾರ ಬೆಳಗ್ಗೆ ನಗರದ ಜನರಲ್ ತಿಮ್ಮಯ್ಯ ವೃತ್ತದ ಬಳಿಯಿಂದ ಗಾಂಧಿ ಮೈದಾನದವರೆಗೆ ನಡೆದ 'ಕಲಾ ಜಾಥಾ' ದಸರಾ ಉತ್ಸವಕ್ಕೆ ವಿಶೇಷ ಮೆರುಗನ್ನು ನೀಡಿ, ಈ ನೆಲದ ಶ್ರೀಮಂತ ಜಾನಪದ ಸಂಸ್ಕೃತಿಯ ಸೌಗಂಧವನ್ನು ಪಸರಿಸಿತು.

ಕಲಾ ಜಾಥಕ್ಕೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಚಾಲನೆ ನೀಡಿದರೆ, ಜಾನಪದ ದಸರಾ ಉತ್ಸವದ ಪ್ರಮುಖ ರೂವಾರಿಯಾದ ಕೊಡಗು ಜಿಲ್ಲಾ ಜಾನಪದ ಪರಿಷತ್‌ನ ಅಧ್ಯಕ್ಷ ಬಿ.ಜಿ. ಅನಂತಶಯನ ಮತ್ತು ಪದಾಧಿಕಾರಿಗಳು, ಮಡಿಕೇರಿ ದಸರಾ ಸಮಿತಿ ಅಧ್ಯಕ್ಷೆ ಅನಿತಾ ಪೂವಯ್ಯ ಮತ್ತು ಪದಾಧಿಕಾರಿಗಳು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿ ಗಮನ ಸೆಳೆದರು.



ಜಾನಪದ ಸಂಸ್ಕೃತಿಯೊಂದಿಗೆ ಮುನ್ನಡೆಯಿರಿ: ಜಾನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತೆ ರೂಪಿಸಿದ್ದ ಕಲಾ ಸಂಭ್ರಮ ವೇದಿಕೆಯಲ್ಲಿ ರಾಗಿ ಬೀಸುವ ಜಾನಪದ ಹಾಡಿನ ಹಿಮ್ಮೇಳದಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ರಾಗಿಕಲ್ಲನ್ನು ತಿರುಗಿಸುವ ಮೂಲಕ ಜಾನಪದ ದಸರಾಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಜಾನಪದ ಶ್ರೀಮಂತ ಸಂಸ್ಕೃತಿಯೊಂದಿಗೆ ನಾವೆಲ್ಲರೂ ಮುನ್ನಡೆಯಬೇಕಾಗಿದೆ. ಬದುಕಿನ ಪದ್ಧತಿಯೇ ಆಗಿರುವ ಜಾನಪದದ ಅರಿವನ್ನು ಮುಂದಿನ ಪೀಳಿಗೆಗೆ ನೀಡುವ ಅಗತ್ಯವಿದೆ ಎಂದು ನುಡಿದರು. ಈ ನೆಲದ ಬದುಕು, ಪರಂಪರೆ, ಹಬ್ಬ ಹರಿದಿನಗಳನ್ನು ಒಳಗೊಂಡ ಜಾನಪದ ಸಂಸ್ಕೃತಿಯ ಉಳಿವು ಅತ್ಯವಶ್ಯವಾಗಿ ನಡೆಯಬೇಕಾಗಿದ್ದು, ಇದಕ್ಕಾಗಿ ಇದರ ಕುರಿತ ತಿಳುವಳಿಕೆಯನ್ನು ಯುವ ಪೀಳಿಗೆಗೆ ನೀಡುವುದು ಅತ್ಯವಶ್ಯ. ವಿಶಾಲವಾದ ಭಾರತ ದೇಶದಲ್ಲಿ ನೂರಾರು ಭಾಷೆ, ಸಂಸ್ಕೃತಿಗಳಿವೆಯಾದರು, ಜಾನಪದವೆನ್ನುವುದು ಒಂದೇ ಆಗಿದೆ. ಎಲ್ಲರ ನಡುವಿನ ಪ್ರೀತಿ ವಿಶ್ವಾಸ, ಪರಸ್ಪರ ಸೌಹಾರ್ದತೆಗಳೆ ಜಾನಪದದ ಆಂತರ್ಯದ ಮೂಲ ಸೆಲೆಯಾಗಿದೆ. ಈ ಹಿನ್ನೆಲೆ ಜಾನಪದ ಕಾರ್ಯಕ್ರಮ ದಸರಾ ಉತ್ಸವಕ್ಕಷ್ಟೆ ಸೀಮಿತವಾಗದಿರಲಿ ಎಂದು ಆಶಿಸಿದರು.

ಮಡಿಕೇರಿ ದಸರಾ ಸಮಿತಿ ಅಧ್ಯಕ್ಷೆ ಅನಿತಾ ಪೂವಯ್ಯ ಮಾತನಾಡಿ, ಈ ಬಾರಿ 3ನೇ ವರ್ಷದ ಜಾನಪದ ದಸರಾ ಉತ್ಸವವನ್ನು ನಡೆಸಲಾಗುತ್ತಿದೆ. ಇದರ ಮೂಲಕ ಮರೆಯಾಗಿ ಹೋಗುತ್ತಿರುವ ನಮ್ಮ ಜಾನಪದ ಬದುಕು, ಸಂಸ್ಕೃತಿಯನ್ನು ಮುನ್ನೆಲೆಗೆ ತರುವ ಶ್ಲಾಘನೀಯ ಕಾರ್ಯ ನಡೆಯುತ್ತಿದೆ ಎಂದರು. ಮುಂಜಾನೆಯಿಂದ ಸಂಜೆಯವರೆಗಿನ ಗ್ರಾಮೀಣ ಬದುಕಿನ ಪ್ರತಿಯೊಂದು ಹಂತದಲ್ಲಿಯೂ ಜಾನಪದದ ಸೊಗಡನ್ನು ಕಾಣಬಹುದಾಗಿದೆ. ಇಂತಹ ಶ್ರೀಮಂತ ಜಾನಪದ ಪರಂಪರೆಯ ಉಳಿವಿನಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದು. ಬದಲಾದ ಕಾಲ ಘಟ್ಟದಲ್ಲಿ ಇಂಗ್ಲೀಷ್ ಅನಿವಾರ್ಯವಾದರು, ತಮ್ಮ ಮಕ್ಕಳಿಗೆ ಈ ನೆಲದ ಭಾಷೆ, ಸಂಸ್ಕೃತಿಯ ಮಹತ್ವವನ್ನು ತಿಳಿಸಿಕೊಡಲು ಎಂದಿಗೂ ಮರೆಯದಿರಿ ಎಂದು ಕಿವಿ ಮಾತುಗಳನ್ನಾಡಿದರಲ್ಲದೇ, ಜಾನಪದ ಸಂಸ್ಕೃತಿಯ ಕ್ರೀಡೆಗಳನ್ನು ಶಾಲಾ ಮಟ್ಟದಲ್ಲಿ ನಡೆಸಲು ಜಾನಪದ ಪರಿಷತ್ ಮುಂದಾಗುವಂತೆ ಮನವಿ ಮಾಡಿದರು.

ವೇದಿಕೆಯಲ್ಲಿ ಮಡಿಕೇರಿ ದಸರಾ ಸಮಿತಿ ಉಪಾಧ್ಯಕ್ಷೆ ಸವಿತಾ ರಾಕೇಶ್, ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ಪ್ರಧಾನ ಕಾರ್ಯದರ್ಶಿ ರಾಜೇಶ್ ಯಲ್ಲಪ್ಪ, ಖಜಾಂಚಿ ಅರುಣ್ ಶೆಟ್ಟಿ, ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಅನಿಲ್ ಎಚ್.ಟಿ, ನಗರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ. ಸತೀಶ್, ನಗರಸಭಾ ಸದಸ್ಯರಾದ ಶಾರದಾ ನಾಗರಾಜು, ಕೆ.ಎಸ್.ರಮೇಶ್, ಸರ್ವೋದಯ ಸಮಿತಿ ಅಧ್ಯಕ್ಷ ಅಂಬೆಕಲ್ ಕುಶಾಲಪ್ಪ, ಜಾನಪದ ಪರಿಷತ್ ತಾಲೂಕು ಅಧ್ಯಕ್ಷರುಗಳಾದ ಸುಜಲಾ ದೇವಿ, ಟೋಮಿ ಥೋಮಸ್, ಪ್ರಕಾಶ್, ಚಂದ್ರಮೋಹನ್, ಪ್ರಶಾಂತ್, ದಿಲನ್ ಚಂಗಪ್ಪ ಮೊದಲಾದವರಿದ್ದರು.

ಸೌಹಾರ್ದತೆ ಹಂಚುವ ಶಕ್ತಿ ಜಾನಪದಕ್ಕಿದೆ



ಕೊಡಗು ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಬಿ.ಜಿ. ಅನಂತಶಯನ ಮಾತನಾಡಿ, ಪರಸ್ಪರ ಪ್ರೀತಿ, ವಿಶ್ವಾಸ, ಮಮಕಾರ, ಸೌಹಾರ್ದತೆಗಳನ್ನು ಹೃದಯದಿಂದ ಹೃದಯಕ್ಕೆ ಹಂಚುವ ಶಕ್ತಿ ಮತ್ತು ಚೈತನ್ಯ 'ಜಾನಪದ'ಕ್ಕಿದೆ. ಇತರರನ್ನು ವಿಶ್ವಾಸದಿಂದ ಕಂಡು ಪ್ರೀತಿ, ಸೌಹಾರ್ದತೆಗಳನ್ನು ತೋರುವ ಮನಸ್ಥಿತಿ ಅತ್ಯಂತ ಸಹಜವಾಗಿ ಜಾನಪದ ಸಂಸ್ಕೃತಿಯಲ್ಲಿ ಅಂತರ್ಗತವಾಗಿದೆ. ಇಂತಹ ಜಾನಪದ ಸಂಸ್ಕೃತಿಯನ್ನು ಸಂರಕ್ಷಿಸಿಕೊಂಡು ಮುನ್ನಡೆಯಬೇಕೆನ್ನುವ ಆಶಾ ಭಾವನೆಯನ್ನು ವ್ಯಕ್ತಪಡಿಸಿದರು. ಭಾರತವನ್ನಾಳಿದ ಬ್ರಿಟೀಷರು ಇಲ್ಲಿನ ಶಿಕ್ಷಣ ಕ್ರಮಗಳನ್ನು, ಸಂಸ್ಕೃತಿಯನ್ನು ಬದಲಾಯಿಸುವ ಮೂಲ ಚಿಂತನೆಗಳನ್ನು ಹೊಂದಿದ್ದಂತಹವರು. ಅಂತಹ ಬ್ರಿಟೀಷರು ಇಲ್ಲಿನ ಗ್ರಾಮೀಣ ಭಾಗದ ಜನತೆಯಲ್ಲಿ ಕಂಡು ಬಂದ ಪ್ರೀತಿ, ವಿಶ್ವಾಸ, ಪರಸ್ಪರ ಸಹಕಾರ, ಸಹಾನುಭೂತಿಗಳಿಂದ ಆಶ್ಚರ್ಯ ಚಕಿತರಾಗಿದ್ದರು. ಬದುಕಿನ ಈ ಸುಂದರ ಪಾಠಗಳನ್ನು ಮತ್ತೆ ಅಳವಡಿಸಿಕೊಳ್ಳಲು ಬ್ರಿಟೀಷರಿಗೆ ಜಾನಪದ ಬದುಕು ಪ್ರೇರಣೆಯನ್ನು ನೀಡಿತ್ತೆಂದು ಅನಂತಶಯನ ಹೇಳಿದರು. ಜಾರ್ಜ್ ಫರ್ಡಿನಾಂಡ್ ಕಿಟ್ಟೆಲ್ ಅವರು ಗ್ರಾಮೀಣ ಭಾಗಗಳಲ್ಲಿ ಸಂಚರಿಸಿ, ಅಲ್ಲಿನ ಜನತೆಯೊಂದಿಗೆ ಒಡನಾಡಿ ರಚಿಸಿರುವ 'ಶಬ್ದ ಕೋಶ' ಕನ್ನಡ ಅಧಿಕೃತವಾದ ಶಬ್ದ ಕೋಶವಾಗಿದೆ. ಅದರಲ್ಲಿ 5 ಸಾವಿರಕ್ಕೂ ಹೆಚ್ಚಿನ ಜಾನಪದ ಗಾದೆಗಳನ್ನು, ಶಬ್ದಗಳ ಅರ್ಥ ವಿವರಣೆಗಳನ್ನು ನೀಡಲು ಬಳಸಲಾಗಿದೆ ಎಂದು ಮಾಹಿತಿ ನೀಡಿದರು. ಕೊಡಗು ಜಿಲ್ಲಾ ಜಾನಪದ ಪರಿಷತ್‌ಗೆ ಕಟ್ಟಡವೊಂದನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿ, ಬೇಡಿಕೆ ಈಡೇರಿಸಿದಲ್ಲಿ ಜಾನಪದ ಮ್ಯೂಸಿಯಂ ಮಾಡುವುದಾಗಿ ತಿಳಿಸಿದರು.

ಇದೇ ಸಂದರ್ಭ ಮೂರ್ನಾಡು ಜಾನಪದ ಪರಿಷತ್ ಘಟಕದ ಪದಾಧಿಕಾರಿಗಳಾದ ಕಿಗ್ಗಾಲು ಹರೀಶ್ ಅವರು ಆಯೋಜಿಸಿದ್ದ ಅತ್ಯಪರೂಪದ ಹಳೆಯ ನಿತ್ಯೋಪಯೋಗಿ ವಸ್ತುಗಳ ಪ್ರದರ್ಶನ ಗಮನ ಸೆಳೆಯಿತು. ಗೊಂಬೆ ಜೋಡಣೆ ಮತ್ತು ಜಾನಪದ ಕಥಾ ಸ್ಪರ್ಧೆಗಳಿಗೆ ಗಣ್ಯರು ಬಹುಮಾನಗಳನ್ನು ನೀಡಿ ಗೌರವಿಸಿದರು.

ಇಳಿಜಾರಿನಲ್ಲಿ ಮಗುಚಿದ ಸಿಲಿಂಡರ್ ತುಂಬಿದ ಲಾರಿ



ಮಡಿಕೇರಿ, ಅ.19– ಅಡುಗೆ ಅನಿಲದ ಸಿಲಿಂಡರ್ ಸಾಗಿಸುತ್ತಿದ್ದ ಲಾರಿಯೊಂದು ಇಳಿಜಾರು ರಸ್ತೆಯಲ್ಲಿ ಮಗುಚಿ ಬಿದ್ದ ಘಟನೆ ಮಡಿಕೇರಿ–ಸುಂಟಿಕೊಪ್ಪ ರಾಷ್ಟ್ರೀಯ ಹೆದ್ದಾರಿ ಬೋಯಿಕೇರಿ ಬಳಿ ನಡೆದಿದೆ.

ಇಳಿಜಾರು ರಸ್ತೆಯಲ್ಲಿ ಲಾರಿ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಪಕ್ಕದ ಗುಡ್ಡಕ್ಕೆ ಡಿಕ್ಕಿಯಾಗಿ ಮಗುಚಿಕೊಂಡಿದೆ. ಲಾರಿ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದು, ಸಿಲಿಂಡರ್‌ಗಳು ರಸ್ತೆಯಲ್ಲಿ ಉರುಳಿ ಬಿದ್ದಿದ್ದವು. ಬಳಿಕ ಬೇರೊಂದು ಲಾರಿಯಲ್ಲಿ ಸಿಲಿಂಡರ್‌ಗಳನ್ನು ಕಳುಹಿಸಿಕೊಡಲಾಯಿತು. ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಸಂಚಾರ ವ್ಯವಸ್ಥೆ ಸುಗಮಗೊಳಿಸಲಾಯಿತು.

ಅಡುಗೆ ಮಾಡುವ ವಿಚಾರಕ್ಕೆ ಜಗಳ
ದೊಣ್ಣೆಯಿಂದ ಹೊಡೆದು ತಂದೆಯನ್ನು ಕೊಂದ ಮಗ

ವಿರಾಜಪೇಟೆ, ಅ.19– ಮನೆಯಲ್ಲಿ ಅಡುಗೆ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಪುತ್ರನೊಬ್ಬ ತನ್ನ ತಂದೆಯನ್ನೇ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ವಿರಾಜಪೇಟೆ ತಾಲೂಕಿನ ನಾಂಗಾಲ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಚೇಂದ್ರಿಮಾಡ ಕೆ.ಚಿಟ್ಟಿಯಪ್ಪ(63) ಕೊಲೆಯಾದ ದುರ್ದೈವಿ.



ದರ್ಶನ್ ತಮ್ಮಯ್ಯ

ಬುಧವಾರ ಸಂಜೆ 7 ಗಂಟೆ ಸಮಯದಲ್ಲಿ ಚಿಟ್ಟಿಯಪ್ಪ ಮತ್ತು ಅವರ ಪುತ್ರ ದರ್ಶನ್ ತಮ್ಮಯ್ಯ(38) ನಡುವೆ ಅಡುಗೆ ಮಾಡುವ ವಿಚಾರಕ್ಕೆ ಗಲಾಟೆ ನಡೆದಿದೆ. ಈ ವೇಳೆ ದರ್ಶನ್ ತಮ್ಮಯ್ಯ ದೊಣ್ಣೆಯಿಂದ ತಂದೆ ಚಿಟ್ಟಿಯಪ್ಪ ಅವರ ತಲೆಯ ಭಾಗಕ್ಕೆ ಹೊಡೆದಿದ್ದು, ಗಂಭೀರ ಗಾಯಗೊಂಡು ಚಿಟ್ಟಿಯಪ್ಪ ಮೃತಪಟ್ಟಿದ್ದಾರೆ. ಕೊಲೆ ಆರೋಪಿ ದರ್ಶನ್ ತಮ್ಮಯ್ಯ(38) ನನ್ನು ಪೊಲೀಸರು ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಪೊಲೀಸ್ ಅಧಿಕಾರಿಗಳ ಭೇಟಿ: ಕೊಲೆ ಘಟನೆ ನಡೆದ ಸ್ಥಳಕ್ಕೆ ಸೋಮವಾರಪೇಟೆ ಉಪ ವಿಭಾಗದ ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ, ವಿರಾಜಪೇಟೆ ವೃತ್ತ ನಿರೀಕ್ಷಕ ಬಿ.ಎಸ್.ಶಿವರುದ್ರಪ್ಪ, ವಿರಾಜಪೇಟೆ ಗ್ರಾಮಾಂತರ ಠಾಣಾಧಿಕಾರಿ ಸಿ.ಸಿ. ಮಂಜುನಾಥ್, ಅಪರಾಧ ಪತ್ತೆ ದಳದ ವಿಶೇಷ ಸಿಬ್ಬಂದಿಗಳು, ಆರ್.ಎಫ್.ಎಸ್.ಎಲ್ ಮೈಸೂರು ಘಟಕದ ಬೆರಳಚ್ಚು ತಜ್ಞರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಮತ್ತು ಸಾಕ್ಷ್ಯಾಧಾರಗಳನ್ನು ಕಲೆ ಹಾಕಲಾಗುತ್ತಿದ್ದು, ತನಿಖೆ ಮುಂದುವರೆದಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ. ಈ ಘಟನೆ ಕುರಿತು ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾದಕ ವಸ್ತು ಮಾರಾಟ: ಇಬ್ಬರ ಬಂಧನ





ಮಡಿಕೇರಿ, ಅ.19– ನಿಷೇಧಿತ ಮಾದಕ ವಸ್ತು ಎಂಡಿಎಂಎ ಅನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಕೇರಳ ಮೂಲದ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆಯುವಲ್ಲಿ ಕೊಡಗು ಪೊಲೀಸರು ಯಶಸ್ವಿಯಾಗಿದ್ದಾರೆ. ಕೇರಳ ರಾಜ್ಯದ ಕಾಸರಗೋಡು ಮೂಲದ ಅಮೀರ್. ಟಿ.ಎಂ(28) ಹಾಗೂ ಮಹಮ್ಮದ್ ಶಬೀರ್.ಕೆ (30) ಬಂಧಿತ ಆರೋಪಿಗಳಾಗಿದ್ದಾರೆ. ಇವರ ಬಳಿಯಿಂದ 20 ಗ್ರಾಂ ಎಂಡಿಎಂಎ ಮಾದಕ ವಸ್ತು ಮತ್ತು ಕೃತ್ಯಕ್ಕೆ ಬಳಸಿದ ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಮಡಿಕೇರಿ ಉಪ ವಿಭಾಗದ ಡಿವೈಎಸ್‌ಪಿ ಜಗದೀಶ್.ಎಂ, ಡಿಸಿಆರ್‌ಬಿ ವೃತ್ತ ನಿರೀಕ್ಷಕ ಐ.ಪಿ.ಮೇದಪ್ಪ, ಮಡಿಕೇರಿ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಗರಠಾಣೆ ಠಾಣಾಧಿಕಾರಿ ಲೋಕೇಶ್, ಸಿಬ್ಬಂದಿಗಳು ಹಾಗೂ ಡಿಸಿಆರ್‌ಬಿ ವಿಶೇಷ ತಂಡ ಈ ಕಾರ್ಯಾಚರಣೆ ನಡೆಸಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಕಾರ್ಯದಕ್ಷತೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶ್ಲಾಘಿಸಿದ್ದಾರೆ.

ವಿದ್ಯುತ್ ಕಂಬಕ್ಕೆ ಜೀಪು ಡಿಕ್ಕಿ: ಕಾರ್ಮಿಕ ಸಾವು
ಚಾಲಕನ ನಿಯಂತ್ರಣ ತಪ್ಪಿ ದುರಂತ, ಮೂವರಿಗೆ ಗಾಯ

ಮಡಿಕೇರಿ, ಅ.19– ಹಾಕತ್ತೂರಿನಿಂದ ಕಾರ್ಮಿಕರನ್ನು ಸಿದ್ದಾಪುರಕ್ಕೆ ಕರೆದೊಯ್ಯುತ್ತಿದ್ದ ಜೀಪೊಂದು ಮರಗೋಡು ಬಕ್ಕ ಬಳಿಯ ಚೆಲ್ಲಂಗೋಡು ಸೇತುವೆಯ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಜೀಪಿನಲ್ಲಿದ್ದ ಅಸ್ಸಾಂ ಮೂಲದ ಕಾರ್ಮಿಕರೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಡೆದಿದೆ. ಅಸ್ಸಾಂ ಮೂಲದ ರಜಾಕ್(55) ಮೃತ ವ್ಯಕ್ತಿಯಾಗಿದ್ದು ಕಳೆದ 3 ವರ್ಷಗಳಿಂದ ಅಮ್ಮತ್ತಿಯಲ್ಲಿ ಕಟ್ಟಡ ಕೆಲಸ ಮಾಡಿಕೊಂಡಿದ್ದರು ಎಂದು ತಿಳಿದು ಬಂದಿದೆ. ಜೀಪಿನಲ್ಲಿದ್ದ ಇತರ ಮೂವರು ಕಾರ್ಮಿಕರು ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಸಿದ್ದಾಪುರ ಅಮ್ಮತ್ತಿ ಮೂಲದ ಕಟ್ಟಡ ಗುತ್ತಿಗೆದಾರನೊಬ್ಬ ತನ್ನ ಸೆಂಟ್ರಿಂಗ್ ಕಾರ್ಮಿಕರನ್ನು ಸಂಜೆ ಕೆಲಸ ಮುಗಿಸಿ ಜೀಪಿನಲ್ಲಿ ಅಮ್ಮತ್ತಿಗೆ ಕರೆದುಕೊಂಡು ಬರುತ್ತಿದ್ದ ವೇಳೆ ಈ ಘಟನೆ ನಡೆದಿದೆ. ದೊಡ್ಡ ತಿರುವಿನಲ್ಲಿ ಚಾಲಕನಿಗೆ ಜೀಪನ್ನು ನಿಯಂತ್ರಿಸಲಾಗದೆ ತಿರುವಿನಲ್ಲಿದ್ದ ವಿದ್ಯುತ್ ಕಂಬಕ್ಕೆ ಗುದ್ದಿದ ಪರಿಣಾಮ ಈ ಅಪಘಾತ ನಡೆದಿದ್ದು, ಗಾಯಗೊಂಡ ಮೂವರನ್ನು ಮಡಿಕೇರಿಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಇಂದು ಖ್ಯಾತ ಗಾಯಕ ರಾಜೇಶ್ ಕೃಷ್ಣನ್ ಸಂಗೀತ ಸಂಜೆ

ಚಾಮರಾಜನಗರ, ಅ.19– ದಸರಾ ಮಹೋತ್ಸವದ ಅಂಗವಾಗಿ ಅ.20 ರಂದು ಚಾಮರಾಜೇಶ್ವರ ದೇವಸ್ಥಾನದ ಆವರಣದ ಪ್ರಧಾನ ವೇದಿಕೆಯಲ್ಲಿ ಖ್ಯಾತ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಮತ್ತು ತಂಡದವರಿಂದ ಸಂಗೀತ ಸಂಜೆ ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ತಿಳಿಸಿದ್ದಾರೆ.



ನಾಳೆ ಪದವೀಧರ ಪ್ರಾಥಮಿಕ ಶಿಕ್ಷಕರ ಸ್ಥಳ ನಿಯುಕ್ತಿಗೆ ಕೌನ್ಸೆಲಿಂಗ್

ಚಾಮರಾಜನಗರ, ಅ.19– ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಪಧವೀಧರ ಪ್ರಾಥಮಿಕ ಶಿಕ್ಷಕರ (6–8) ವೃಂದದ ನೇಮಕಾತಿಗೆ ಸಂಬಂಧಿಸಿದಂತೆ 1:1 ಅನುಪಾತದಂತೆ ಮುಖ್ಯ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿ ಕೌನ್ಸೆಲಿಂಗ್ ಕಾರ್ಯವು ನಗರದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)ನಲ್ಲಿ ಅ.21ರಂದು ನಡೆಯಲಿದೆ.

ಅಂದು ಬೆಳಗ್ಗೆ 9.30 ಗಂಟೆಗೆ ಅಭ್ಯರ್ಥಿಗಳು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಚೇರಿಯಿಂದ ಮೂಲ ದಾಖಲೆಗಳನ್ನು ಸಲ್ಲಿಸಿ ಪಡೆದಿರುವ ಸ್ವೀಕೃತಿ ಪತ್ರ ಭಾವಚಿತ್ರವುಳ್ಳ ಗುರುತಿನ ಚೀಟಿಯೊಂದಿಗೆ ಕೌನ್ಸೆಲಿಂಗ್ ಗೆ ಹಾಜರಾಗಬೇಕು. ಮಾಹಿತಿ ಅಗತ್ಯವಿದ್ದಲ್ಲಿ ದೂ.ಸಂ 08226–222406, ಮೊ.ಸಂ 9743099505 ಮತ್ತು 9448978661 ಸಂಪರ್ಕಿಸಲು ಪ್ರಕಟಣೆ ಕೋರಿದೆ.

ಪದ್ಮ ನಿಧನ

ಚಾಮರಾಜನಗರ, ಅ.19– ನಗರದ ರಾಮಸಮುದ್ರ ಬಡಾವಣೆಯ ನಾಯಕರ ಬೀದಿಯ ನಿವಾಸಿ ಪದ್ಮ(38) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತಿ ಕುಮಾರ್, ಪುತ್ರ ಧನುಷ್, ಪುತ್ರಿ ಲಕ್ಷ್ಮೀ, ಸಹೋದರ ಡಾ. ನಂಜುಂಡಸ್ವಾಮಿ ಹರದನಹಳ್ಳಿ ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸಂಜೆ ರಾಮಸಮುದ್ರ ನಾಯಕರ ರುದ್ರಭೂಮಿಯಲ್ಲಿ ನೆರವೇರಿತು.



ಜನಮನ ಸೂರೆಗೊಂಡ ರೈತ ದಸರಾ, ಆಕರ್ಷಕ ಮೆರವಣಿಗೆ



ಚಾಮರಾಜನಗರ, ಅ.19– ಚಾಮರಾಜನಗರ ದಸರಾ ಮಹೋತ್ಸವದ ಅಂಗವಾಗಿ ನಗರದಲ್ಲಿ ಹಮ್ಮಿಕೊಳ್ಳಲಾಗಿದ್ದ ರೈತ ದಸರಾ ಕಾರ್ಯಕ್ರಮ ಜನಮನ ಸೂರೆಗೊಂಡಿತು.

ನಗರದ ಚಾಮರಾಜೇಶ್ವರ ದೇವಾಲಯದ ಮುಂಭಾಗದಲ್ಲಿಂದು ರೈತ ದಸರಾದಲ್ಲಿ ಪಾಲ್ಗೊಳ್ಳಲು ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ವಿಶೇಷವಾಗಿ ಸಿಂಗರಿಸಿದ್ದ ಎತ್ತಿನ ಗಾಡಿಗಳು ಹಾಗೂ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಪಶುಪಾಲನೆ ಹಾಗೂ ರೇಷ್ಮೆ ಇಲಾಖೆಯ ಸ್ತಬ್ಧಚಿತ್ರಗಳು ಮೆರವಣಿಗೆಗೆ ಮೆರುಗು ತಂದವು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಭವ್ಯವಾಗಿ ಸಿಂಗಾರಗೊಂಡಿದ್ದ ಎತ್ತಿನಗಾಡಿ ಮೆರವಣಿಗೆಗೆ ಚಾಲನೆ ನೀಡುವ ಮೂಲಕ ರೈತ ದಸರಾ ಕಾರ್ಯಕ್ರಮ ಆರಂಭವಾಯಿತು. ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಜಿಲ್ಲಾಧಿಕಾರಿಯವರಿಗೆ ಸಾಥ್ ನೀಡಿದರು.

ಚಾಮರಾಜೇಶ್ವರ ದೇವಸ್ಥಾನದಿಂದ ಆರಂಭಗೊಂಡ ಎತ್ತಿನಗಾಡಿ ಸ್ತಬ್ಧ ಚಿತ್ರಗಳ ಮೆರವಣಿಗೆ ನಗರದ ಬಿ. ರಾಚಯ್ಯ ಜೋಡಿ ರಸ್ತೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ರಸ್ತೆಯಲ್ಲಿ ಸಾಗಿ ಕರಿನಂಜನ ಪುರ ರಸ್ತೆಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನದ ಆವರಣದಲ್ಲಿ ಕೊನೆಗೊಂಡಿತು.

ರೈತ ದಸರಾ ಪ್ರಯುಕ್ತ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಇಲಾಖೆಯ ಸಹಯೋಗದಲ್ಲಿ ನಡೆದ 2023–24ನೇ ಸಾಲಿನ ಕೇಂದ್ರ ಪುರಸ್ಕೃತ ಆಹಾರ ಭದ್ರತೆ ಯೋಜನೆ–ನ್ಯೂಟ್ರಿ ಸಿರಿಧಾನ್ಯ ಕಾರ್ಯಕ್ರಮದಡಿ ಜಿಲ್ಲಾಮಟ್ಟದ ಸಿರಿಧಾನ್ಯಗಳ ಹಬ್ಬ ಹಾಗೂ ಕಾರ್ಯಾಗಾರವನ್ನು ವೇದಿಕೆ ಮುಂಭಾಗದಲ್ಲಿ ಆಕರ್ಷಕವಾಗಿ ಚಿತ್ರಿಸಲಾಗಿದ್ದ ರಾಗಿ ಕಣದಲ್ಲಿ ರಾಶಿ ಪೂಜೆ ನೆರವೇರಿಸಲಾಯಿತು. ಬಳಿಕ ಕಾರ್ಯಕ್ರಮದ ದೀಪ ಬೆಳಗಿಸಿ, ಬಿಡಿಸಿದ ತೆಂಗಿನ ಹೊಂಬಾಳೆಯನ್ನು ಪ್ರದರ್ಶಿಸಿ ವಿದ್ಯುಕ್ತವಾಗಿ ಉದ್ಘಾಟಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಜಿಲ್ಲಾ ಕೇಂದ್ರದಲ್ಲಿ ನಾಲ್ಕು ದಿನಗಳ ಕಾಲ ನಡೆಯುವ ಚಾಮರಾಜನಗರ ದಸರಾ ಮಹೋತ್ಸವದಲ್ಲಿ ಆಚರಿಸುವ ವಿಶಿಷ್ಟ ಹಾಗೂ ವಿಭಿನ್ನ ಕಾರ್ಯಕ್ರಮಗಳಲ್ಲಿ ರೈತ ದಸರಾ ಕೂಡ ಒಂದಾಗಿದೆ. ರೈತ ದಸರಾ ಕಾರ್ಯಕ್ರಮದಲ್ಲಿ ವಿಶೇಷವಾಗಿ ಗ್ರಾಮೀಣ ಭಾಗದಿಂದ ಜನರು ಆಗಮಿಸಿ ಮೆರವಣಿಗೆ ಹೆಚ್ಚಿನ ಕಳೆ ತಂದಿದ್ದಾರೆ. ಇದು ಜನರ ದಸರಾವಾಗಿದೆ ಎಂದರು.

ದಸರಾ ಸಂದರ್ಭದಲ್ಲಿ ಇಡೀ ವಿಶ್ವವೇ ಮೈಸೂರಿನ ಕಡೆ ತಿರುಗಿ ನೋಡಲಿದೆ. ಮೈಸೂರಿನ ಸಾಂಸ್ಕೃತಿಕ ವೈಭವವೇ ಇದಕ್ಕೆ ಸಾಕ್ಷಿಯಾಗಿದೆ. ಮೈಸೂರಿನ ಅವಿಭಾಜ್ಯ ಅಂಗವಾಗಿರುವ ಚಾಮರಾಜನಗರದಲ್ಲಿಯೂ ಸಹ ದಸರಾ ಆಯೋಜನೆ ಜಿಲ್ಲೆಯ ಕಲೆ, ಸಂಸ್ಕೃತಿ, ಪರಂಪರೆಗಳನ್ನು ಅಭಿವ್ಯಕ್ತಗೊಳಿಸುವುದೇ ಆಗಿದೆ. ಗ್ರಾಮೀಣ ಭಾಗದಲ್ಲಿ ನಶಿಸುತ್ತಿರುವ ಜನಪದ ಕಲೆಗಳಿಗೆ ಮರುಜೀವ ನೀಡಬೇಕಾಗಿದೆ ಎಂದು ತಿಳಿಸಿದರು.

ಕೃಷಿ ಪ್ರಧಾನವಾಗಿರುವ ಭಾರತದಲ್ಲಿ ರೈತರೇ ದೇಶದ ಬೆನ್ನೆಲುಬು. ಈ ಬಾರಿ ಮಳೆ ಅಭಾವದಿಂದ ನಾಡಿನೆಲ್ಲೆಡೆ ರೈತರಿಗೆ ಅನೇಕ ಸಮಸ್ಯೆ, ಸಂಕಷ್ಟಗಳು ಎದುರಾಗಿವೆ. ಆದರೂ ರೈತರು ಎದೆಗುಂದಬಾರದು. ವೈಜ್ಞಾನಿಕ ಕೃಷಿ ಹಾಗೂ ಮಣ್ಣಿನ ಸಂರಕ್ಷಣೆಗೆ ಮುಂದಾಗಬೇಕು. ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ರೈತರು ಆರ್ಥಿಕವಾಗಿ ಸದೃಢರಾಗುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಸಲಹೆ ಮಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪ್ರಗತಿಪರ ರೈತ ಮುಖಂಡ ಹೊನ್ನೂರು ಪ್ರಕಾಶ್ ಅವರು ಮಾತನಾಡಿ, ಪ್ರಸ್ತುತ ನಾಡಿನಲ್ಲಿ ಬರ ಪರಿಸ್ಥಿತಿ ತಲೆದೋರಿದೆ. ಆದರೂ ಹತಾಶೆಗೊಳಗಾಗದ ಕಾಯಕಯೋಗಿ ರೈತರು ಕೃಷಿಯಲ್ಲಿ ತೊಡಗಿದ್ದಾರೆ. ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಬೇಕು. ಕನಿಷ್ಠ ಬೆಂಬಲ ಬೆಲೆ ದರ ನಿಗದಿಪಡಿಸಬೇಕು. ಆ ಮೂಲಕ ರೈತರಿಗೆ ಆಸರೆಯಾಗಿ ಸರ್ಕಾರ ನಿಲ್ಲಬೇಕು ಎಂದರು.

ಹವಾಮಾನ ವೈಪರೀತ್ಯದಿಂದ ಇಂದು ಕಲುಷಿತಗೊಂಡು ಭೂಮಿ ಹಾಳಾಗುತ್ತಿದೆ. ಭೂಮಿಯಲ್ಲಿ ಎಲ್ಲವೂ ಇದೆ. ಆದರೆ ಜೀವಾಣುಗಳ ನಾಶವಾಗಿದೆ. ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡಿ ಭೂಮಿಯನ್ನು ಉಳಿಸಿಕೊಳ್ಳಬೇಕಾಗಿದೆ. ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಯಬೇಕು. ನೀರಿನ ಸದ್ಬಳಕೆ ಹಾಗೂ ಮಳೆ ನೀರು ಸಂಗ್ರಹದ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.



ಇದೇ ವೇಳೆ ಮುಸುಕಿನ ಜೋಳ ಕಟಾವು ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ರಾಮಸಮುದ್ರದ ವೆಂಕಟಾಚಲ ನಾಯಕ, ಯಲಚಗೆರೆ ಗ್ರಾಮದ ಸಿದ್ದಪ್ಪ, ಗುಂಡ್ಲುಪೇಟೆ ತಾಲೂಕಿನ ಚಿಕ್ಕತುಪ್ಪೂರಿನ ಕುಮಾರಸ್ವಾಮಿ, ಚಾಮರಾಜನಗರ ತಾಲೂಕಿನ ಹೊಂಡರಬಾಳು ಗ್ರಾಮದ ಕುಮಾರಸ್ವಾಮಿ ಹಾಗೂ ಗುಂಡ್ಲುಪೇಟೆ ತಾಲೂಕಿನ ಕೊಡಸೋಗೆಯ ಗೌರಮ್ಮ ಅವರನ್ನು ಗೌರವಿಸಲಾಯಿತು.

ಕೃಷಿ ಜಂಟಿ ನಿರ್ದೇಶಕರಾದ ಅಬೀಬ್, ಉಪನಿರ್ದೇಶಕ ಮಧುಸೂಧನ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶಿವಪ್ರಸಾದ್, ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕ ಮಂಜೇಶ್, ರೇಷ್ಮೆ ಇಲಾಖೆಯ ಉಪನಿರ್ದೇಶಕ ಗಿರೀಶ್, ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಹನುಮೇಗೌಡ, ಕೃಷಿ ಪರಿಕರಗಳ ಮಾರಾಟ ಸಹಕಾರ ಸಂಘದ ಅಧ್ಯಕ ಯೋಗರಾಜ್, ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ವಿವಿಯ ವಿಜ್ಞಾನಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಬಳಿಕ ಹೈನುಗಾರಿಕೆ, ವೈಜ್ಞಾನಿಕ ಕೃಷಿ ಪದ್ದತಿ ಹಾಗೂ ಮಣ್ಣಿನ ಸಂರಕ್ಷಣೆ ಕುರಿತು ರೈತರಿಗೆ ಕಾರ್ಯಾಗಾರ ನಡೆಯಿತು.

ಕಾಡು ಕುರಿ ಬೇಟೆಯಾಡಿ ಜೈಲು ಸೇರಿದ ವ್ಯಕ್ತಿ

ಕೊಳ್ಳೇಗಾಲ, ಅ.19– ಕಾಡು ಕುರಿಯನ್ನು ಭೇಟೆಯಾಡಿದ್ದ ವ್ಯಕ್ತಿಯೋರ್ವನನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ. ತಾಲೂಕಿನ ಶಿಲುವೈಪುರ ನಿವಾಸಿ ಥೋಮಿದಿನ್ ಬಂಧಿತ ಆರೋಪಿ. ಮತ್ತೋರ್ವ ಆರೋಪಿ ಜಪಪಾಕ್ಯ @ ಅಳಗಿ ತಲೆ ಮರೆಸಿ ಕೊಂಡಿದ್ದಾನೆ. ಬಂಧಿತರಿಂದ ಕಾಡು ಕುರಿ ಚರ್ಮ, ಒಂದು ಮಚ್ಚು, ಒಂದು ಚೂರಿ, ಒಂದು ತಲೆ ಬ್ಯಾಟರಿ, ಒಂದು ನಾಡಬಂದೂಕನ್ನು ವಶಪಡಿಸಿಕೊಳ್ಳಲಾಗಿದೆ. ಇವರುಗಳು ಸತ್ತೇಗಾಲ ಜಾಗೇರಿಯ ಅರಣ್ಯ ಪ್ರದೇಶದ ದೊಡ್ಡ ಮಾಕಳಿಯಲ್ಲಿ ಭೇಟೆಯಾಡಿ ಅದರ ಮಾಂಸವನ್ನು ಮಾರಾಟ ಮಾಡುತ್ತಿದ್ದಾಗ ಅರಣ್ಯ ಇಲಾಖಾಧಿಕಾರಿಗಳು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದರು. ಇನ್ನೋರ್ವ ಆರೋಪಿ ಪರಾರಿಯಾಗಿದ್ದಾನೆ. ಈ ಸಂಬಂಧ ಅರಣ್ಯ ಇಲಾಖೆಯಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕೊಂಡು, ಬಂಧಿತ ಆರೋಪಿಯನ್ನು ನ್ಯಾಯಾಂಗದ ಮುಂದೆ ಹಾಜರುಪಡಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಡಿಎಫ್‌ಓ ಸಂತೋಷ್ ಕುಮಾರ್, ಎಸಿಎಫ್ ಶಶಿಧರ್. ಆರ್.ಎಫ್.ಓ ಭರತ್, ಡಿ.ಆರ್.ಎಫ್.ಓ ನಂದೀಶ್ ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.



ಉಯ್ಯಾಲೆ ಆಡುತ್ತಿದ್ದ ಮಹಿಳೆ ಎರಡನೇ ಮಹಡಿಯಿಂದ ಬಿದ್ದು ಸಾವು

ಕೊಳ್ಳೇಗಾಲ, ಅ.19– ಎರಡು ಅಂತಸ್ತಿನ ಮಹಡಿ ಮನೆಯ ಮೇಲೆ ಉಯ್ಯಾಲೆ ಆಡುತ್ತಿದ್ದ ಮಹಿಳೆ ಆಕಸ್ಮಿಕವಾಗಿ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ.



ಇಲ್ಲಿನ ಜಿ.ಪಿ ಮಲ್ಲಪ್ಪ ಪುರಂ ಬಡಾವಣೆಯ ನಿವಾಸಿ ಶಿಕ್ಷಕಿ ಕೆ.ಪುಟ್ಟಿ(53) ಮೃತ ಮಹಿಳೆ. ಇವರು ಯಳಂದೂರು ತಾಲೂಕಿನ ಮಾಂಬಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು ಹಾಗೂ ರಾಜ್ಯ ಸಾವಿತ್ರಿಬಾಯಿ ಫುಲೆ ಶಿಕ್ಷಕಿ ಸಂಘದ ತಾಲೂಕು ಅಧ್ಯಕ್ಷರು ಆಗಿದ್ದರು. ಮಂಗಳವಾರ ಸಂಜೆ ಮನೆಯ ಮೇಲೆ ಉಯ್ಯಾಲೆ ಆಡುತ್ತಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ಕೆಳಗೆ ಬಿದ್ದಿದ್ದಾರೆ. ತಕ್ಷಣ ಅವರನ್ನು ನಗರದ ಸರ್ಕಾರಿ ಉಪ ವಿಭಾಗ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ರವಾನಿಸಿದರು ಆದರೆ ಚಿಕಿತ್ಸೆ ಫಲಿಸದೆ ಇಂದು ಮುಂಜಾನೆ ಮೃತಪಟ್ಟಿದ್ದಾರೆ. ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ಬಿಜೆಪಿ ಪ್ರತಿಭಟನೆ



ಚಾಮರಾಜನಗರ, ಅ.19– ರಾಜ್ಯದ ಜನರ ಹಾಗೂ ರೈತರ ಹಿತ ಕಾಯುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ನಗರದಲ್ಲಿ ಗುರುವಾರ ಜಿಲ್ಲಾ ಬಿಜೆಪಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಕಾಡಾ ಮಾಜಿ ಅಧ್ಯಕ್ಷ ಜಿ. ನಿಜಗುಣರಾಜು ಮಾತನಾಡಿ, ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಲ್ಲಾ ಇಲಾಖೆಗಳಲ್ಲಿ ಬೃಹತ್ ಮಟ್ಟದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಸರ್ಕಾರಿ ಅಧಿಕಾರಿಗಳ ವರ್ಗಾವಣೆಗೆ ದಂಧೆ, ಬಿಬಿಎಂಪಿ, ನೀರಾವರಿ, ಲೋಕೋಪಯೋಗಿ ಸೇರಿದಂತೆ ಇತರೆ ಎಲ್ಲಾ ಇಲಾಖೆಗಳಲ್ಲಿ ಕಾಮಗಾರಿಗಳಿಗೆ ಕಮಿಷನ್, ಭ್ರಷ್ಟಾಚಾರ ಮಿತಿಮೀರಿದೆ ಎಂದು ಆರೋಪಿಸಿದರು. ಅಧಿಕಾರಕ್ಕೆ ಬರುವ ಮುಂಚೆ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ 10 ಗಂಟೆ ತ್ರಿಪೇಸ್ ವಿದ್ಯುತ್ ನೀಡಲಾಗುತ್ತದೆ ಎಂದು ಸುಳ್ಳು ಹೇಳಿ ಈಗ ಸಮರ್ಪಕವಾಗಿ ವಿದ್ಯುತ್ ನೀಡುತ್ತಿಲ್ಲ. ಇದರಿಂದ ರೈತರ ಬೆಳೆದ ಬೆಳೆಗಳು ಒಣಗಿ ನಷ್ಟ ಉಂಟಾಗಿದೆ. ಬಿಜೆಪಿ ಸರ್ಕಾರ ಇದ್ದಾಗ ಒಂದೆರಡು ಗಂಟೆ ವಿದ್ಯುತ್ ಕಡಿತವಾದಾಗ ಡಿ.ಕೆ. ಶಿವಕುಮಾರ್ ಅಂದಿನ ವಿದ್ಯುತ್ ಮಂತ್ರಿ ವಿರುದ್ಧ ವ್ಯಂಗವಾಡಿದ್ದರು. ಪ್ರಸ್ತುತ ತಾವು ಏನನ್ನು ಮಾಡುತ್ತಿದ್ದೀರಿ ಎಂದರು.

ನಂತರ ಮುಖಂಡ ಸಿ.ಎನ್. ಬಾಲರಾಜು ಮಾತನಾಡಿ, ಕಾಂಗ್ರೆಸ್ ಪಕ್ಷದ ಭ್ರಷ್ಟಾಚಾರದ ಲೂಟಿಯಿಂದ ರಾಜ್ಯವನ್ನು ಅಧಃಪತನಕ್ಕೆ ಇಳಸುತ್ತಿದ್ದಾರೆ. ಕಾಂಗ್ರೆಸ್‌ನವರು ಸತ್ಯ ಹರಿಶ್ಚಂದ್ರರು ಎನ್ನುವಂತೆ ಪೋಸ್ ಕೊಟ್ಟದ್ದರು. ಈಗ ಇವರ ಭ್ರಷ್ಟಾಚಾರದ ಮುಖವಾಡ ದಿನನಿತ್ಯ ಹೊರಬರುತ್ತಿದೆ ಎಂದರು.

ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರಾದ ನೂರೊಂದುಶೆಟ್ಟಿ, ಬಸವರಾಜು, ಸುರೇಶ್ ನಾಯಕ, ಬೇಡರಪುರ ಬಸವಣ್ಣ ವಿ. ಶ್ರೀನಿವಾಸ ಪ್ರಸಾದ್, ಶೈಲಜಾ, ಶಿವಣ್ಣ, ಪುಟ್ಟಮಲ್ಲಪ್ಪ ರಂಗಸ್ವಾಮಿ, ವೇಣುಗೋಪಾಲ್, ಪ್ರಸನ್ನ, ಮುತ್ತಿಗೆ ರಾಜು, ಜಯಸುಂದರ ವಿವಿಧ ಮೋರ್ಚಾದ ಪದಾಧಿಕಾರಿಗಳು ಭಾಗವಹಿಸಿದ್ದರು.

ಇಡೀ ಬ್ರಿಟನ್ ರಾಷ್ಟ್ರ ನಿಮ್ಮೊಂದಿಗಿದ್ದೇವೆ



ಜೆರುಸೆಲಂ, ಅ.19– ಇಸ್ರೇಲ್–ಹಮಾಸ್ ಸಂಘರ್ಷದ ನಡುವೆ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಗುರುವಾರ ಇಸ್ರೇಲ್‌ಗೆ ಭೇಟಿ ನೀಡಿದ್ದು, ಇಸ್ರೇಲ್ ಮೇಲೆ ನಡೆದಿರುವ ದಾಳಿಯನ್ನು ತೀವ್ರವಾಗಿ ಖಂಡಿಸಿದ್ದಾರೆ.

ನಾನು ಇಸ್ರೇಲ್‌ನಲ್ಲಿದ್ದೇನೆ, ಇಸ್ರೇಲ್ ದುಃಖದಲ್ಲಿರುವ ರಾಷ್ಟ್ರ, ನಾನು ನಿಮ್ಮೊಂದಿಗಿದ್ದೇನೆ. ಇಂದು ಮತ್ತು ಸದಾಕಾಲ ಭಯೋತ್ಪಾದನೆ ಎಂಬ ದುಷ್ಟತನದ ವಿರುದ್ಧ ನಿಮ್ಮೊಂದಿಗೆ ನಿಲ್ಲುತ್ತೇನೆಂದು ರಿಷಿ ಸುನಕ್ ಹೇಳಿದ್ದಾರೆ. ಹಮಾಸ್‌ನೊಂದಿಗೆ ನಡೆಯುತ್ತಿರುವ ಸಂಘರ್ಷದ ಮಧ್ಯೆ, ಯುಎಸ್ ಅಧ್ಯಕ್ಷ ಜೋ ಬಿಡೆನ್ ಅವರ ಮಧ್ಯಸ್ಥಿಕೆಯ ನಂತರ ಗಾಜಾ ಪಟ್ಟಿಗೆ ಸೀಮಿತ ಮಾನವೀಯ ಸರಬರಾಜುಗಳನ್ನು ತಲುಪಿಸಲು ಈಜಿಪ್ಟ್ ಒಪ್ಪಿಕೊಂಡಿದ್ದು, ಇದರ ಬೆನ್ನಲ್ಲೇ ರಿಷಿ ಸುನಕ್ ಅವರು ಇಸ್ರೇಲ್‌ಗೆ ಭೇಟಿ ನೀಡಿದ್ದಾರೆ.

ಈ ನಡುವೆ ನಿನ್ನೆ ಇಸ್ರೇಲ್ ಪ್ರವಾಸ ಕೈಗೊಂಡಿದ್ದ ಅಮೆರಿಕ ಅಧ್ಯಕ್ಷ ಬೈಡನ್ ಅಮೆರಿಕಕ್ಕೆ ವಾಪಸ್ ಆಗಿದ್ದಾರೆ. ಇಸ್ರೇಲ್‌ಗೆ ಭೇಟಿ ನೀಡಿದ ನಂತರ, ಬೈಡನ್ ವಾಷಿಂಗ್ಟನ್‌ಗೆ ಮರಳಿದ್ದಾರೆಂದು ವರದಿಗಳು ತಿಳಿಸಿವೆ. ಗಾಜಾದಲ್ಲಿ ಸಿಲುಕಿರುವ ನಾಗರಿಕರ ಸಂಕಷ್ಟಗಳನ್ನು ನಿವಾರಿಸುವ ಮಾರ್ಗಗಳನ್ನು ಇಸ್ರೇಲ್ ಕೂಡ ಅನ್ವೇಷಿಸಬೇಕು ಎಂದು ಬೈಡನ್ ಇದೇ ವೇಳೆ ಸಲಹೆ ಕೂಡಾ ನೀಡಿದ್ದಾರೆ. ಹಮಾಸ್ ವಿರುದ್ಧ ಹೋರಾಡುತ್ತಿರುವ ಇಸ್ರೇಲ್‌ಗೆ ಸಂಪೂರ್ಣ ಬೆಂಬಲ ಘೋಷಿಸಲು ಅಮೆರಿಕ ಅಧ್ಯಕ್ಷ ಜೋ ಬೈಡನ್ ಟೆಲ್ ಅವೀವ್‌ಗೆ ಭೇಟಿ ನೀಡಿದ್ದರು. ಇದರ ಭಾಗವಾಗಿ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಭೇಟಿ ಮಾಡಿದರು. ಇಸ್ರೇಲ್ ತೀವ್ರವಾಗಿ ಹಾನಿಗೊಳಗಾಗಿದೆ. ಆದಾಗ್ಯೂ, ಗಾಜಾದ ಜನರ ನೋವನ್ನು ನಿವಾರಿಸುವ ಮಾರ್ಗಗಳನ್ನು ಇಸ್ರೇಲ್ ಸಹ ಅನ್ವೇಷಿಸಬೇಕು ಎಂದು ಅವರು ಸಲಹೆ ನೀಡಿದರು.

ಒಂದನೇ ಪುಟದಿಂದ

ಸಿಬಿಐ ತನಿಖೆ

ನ್ಯಾಯಾಲಯದ ಈ ತೀರ್ಪು ಶಿವಕುಮಾರ್ ಅವರಿಗೆ ದೊಡ್ಡ ಆಘಾತ ನೀಡಿದೆ. ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿಯಾಗಿರುವ ಶಿವಕುಮಾರ್ ಆ ಸ್ಥಾನ ಪಡೆಯಲು ಪಕ್ಷ ಸಂಘಟನೆಯ ಜೊತೆಗೆ ರಾಜಕೀಯ ತಂತ್ರಗಳನ್ನು ರೂಪಿಸುತ್ತಿರುವ ಸಂದರ್ಭದಲ್ಲೇ ಈ ತೀರ್ಪು ಬಂದಿರುವುದು ಹಿನ್ನಡೆ ತಂದಂತಾಗಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಪಕ್ಷಕ್ಕೆ 20 ಸ್ಥಾನಗಳನ್ನು ತಂದು ಕೊಡಲೇಬೇಕು ಎಂದು ಈಗಿನಿಂದಲೇ ಹೋರಾಟ ಆರಂಭಿಸಿದ್ದಾರೆ.

ಈ ಮಧ್ಯೆ ಆದಾಯ ತೆರಿಗೆ ಇಲಾಖೆ ಅವರ ಆಪ್ತರು ಎನ್ನುವವರ ಮೇಲೆ ದಾಳಿ ನಡೆಸಿ ಕೋಟ್ಯಾಂತರ ರೂ. ವಶಪಡಿಸಿಕೊಂಡು ತನಿಖೆ ಆರಂಭಿಸಿದೆ. ಅದರ ಬೆನ್ನಲ್ಲೇ ಈಗ ಕೋರ್ಟ್ ತೀರ್ಪು ಹೊರ ಬಿದ್ದಿದೆ. ತನಿಖೆ ಪೂರ್ಣಗೊಂಡು ಪ್ರಕರಣದ ಅಂತಿಮ ವರದಿಯನ್ನು ಸಿಬಿಐ ಸಲ್ಲಿಸಿದ ನಂತರ ಪ್ರಕರಣ ರದ್ದುಗೊಳಿಸುವಂತೆ ಶಿವಕುಮಾರ್ ಮತ್ತೊಮ್ಮೆ ನ್ಯಾಯಾಲಯವನ್ನು ಸಂಪರ್ಕಿಸಲು ಸ್ವಾತಂತ್ರ್ಯವಿದೆ ಎಂದು ಕೋರ್ಟ್ ಸ್ಪಷ್ಟಪಡಿಸಿದೆ. 2014–2018ರ ಸಮಯದಲ್ಲಿ ಆಸ್ತಿ ಗಳಿಕೆಯಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಡಿಕೆಶಿ ವಿರುದ್ಧ ಸಿಬಿಐ ಕೇಸ್ ದಾಖಲಿಸಿ ತನಿಖೆ ಆರಂಭಿಸಿತ್ತು. ಈ ಸಂಬಂಧ ಡಿಕೆಶಿ ಸಿಬಿಐ ತನಿಖೆ ರದ್ದು ಕೋರಿದ್ದರು. ಡಿ.ಕೆ.ಶಿವಕುಮಾರ್ ಪರ ಉದಯ್ ಹೊಳ್ಳ, ಸಂದೇಶ್ ಚೌಟ ಹಾಗೂ ಸಿಬಿಐ ಪರ ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು. 2017ರಲ್ಲಿ ಡಿ.ಕೆ.ಶಿವಕುಮಾರ್ ನಿವಾಸ ಹಾಗೂ ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿತ್ತು. ನಂತರ ಜಾರಿ ನಿರ್ದೇಶನಾಲಯ ಕೂಡ ಡಿ.ಕೆ.ಶಿವಕುಮಾರ್ ವಿರುದ್ಧ ತನಿಖೆ ನಡೆಸಿತ್ತು. ಇದಕ್ಕೆ ಸಂಬಂಧಿಸಿದಂತೆ ಸಿಬಿಐ 2019ರಲ್ಲಿ ತನಿಖೆ ನಡೆಸಿತ್ತು. ಕೊನೆಗೆ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಅಂದಿನ ಹಿಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಸರ್ಕಾರ ಅನುಮತಿ ನೀಡಿತ್ತು. ಸರ್ಕಾರದ ಅನುಮತಿ ನಂತರ ಅಕ್ಟೋಬರ್ 2020ರಲ್ಲಿ ಡಿ.ಕೆ.ಶಿವಕುಮಾರ್ ವಿರುದ್ಧ ಪ್ರಕರಣವನ್ನು ಸಿಬಿಐ ದಾಖಲಿಸಿಕೊಂಡಿದ್ದು, ಇದೇ ಪ್ರಕರಣದಲ್ಲಿ ಡಿ.ಕೆ.ಶಿವಕುಮಾರ್ ತಿಹಾರ್ ಜೈಲಿಗೆ ಕೂಡ ಹೋಗಿದ್ದರು, ಜಾಮೀನು ಪಡೆದು ಹೊರ ಬಂದಿದ್ದರು. ನಂತರ ಸಿಬಿಐ ಪ್ರಕರಣ ರದ್ದುಗೊಳಿಸಬೇಕು ಎಂದು ಹೈಕೋರ್ಟ್‌ಗೆ ಡಿ.ಕೆ.ಶಿವಕುಮಾರ್ ಅರ್ಜಿ ಸಲ್ಲಿಸಿದ್ದರು.

ವೈದ್ಯರಿಗೆ ಗ್ರಾಮೀಣ ಸೇವೆ ಕಡ್ಡಾಯ ರದ್ದು

ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ತೀರ್ಮಾನಿಸಲಾಗಿದೆ ಎಂದರು. ಇಂತಹ ಸಂದರ್ಭದಲ್ಲಿ ಪದವಿ ಪಡೆದ ವೈದ್ಯರನ್ನು ನೇಮಕ ಮಾಡಿಕೊಳ್ಳಲು ಆದ್ಯತೆ ನೀಡಲಾಗುವುದು. ಗ್ರಾಮೀಣ ಸೇವೆ ಕಡ್ಡಾಯದ 2023 ರ ಕಾಯ್ದೆಯನ್ನು ಹಿಂದಕ್ಕೆ ಪಡೆದು ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ತಂದು ಪೂರ್ಣ ಅಧಿಕಾರ ಉಳಿಸಿಕೊಳ್ಳಲಿದೆ. ವಿಧಾನ ಮಂಡಲದ ಚಳಿಗಾಲದ ಅಧಿವೇಶನ ನಡೆಸಲು ತೀರ್ಮಾನಿಸಿದ ಸಂಪುಟ ಎಷ್ಟು ದಿನ ಹಾಗೂ ಯಾವಾಗ ನಡೆಸಬೇಕು ಎಂಬುದನ್ನು ತೀರ್ಮಾನ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿಗೆ ನೀಡಲಾಗಿದೆ. ಕೇಂದ್ರ ಸರ್ಕಾರದ ನಿರ್ದೇಶನದಂತೆ ನೂರು ಕೋಟಿ ರೂಪಾಯಿ ವೆಚ್ಚದಲ್ಲಿ 400 ಗ್ರಾಮ ನ್ಯಾಯಾಲಯ ಸ್ಥಾಪನೆಗೆ ಸಂಪುಟ ಸಮ್ಮತಿಸಿದೆ. ಹೈಕೋರ್ಟ್ ಸಹಕಾರದೊಂದಿಗೆ ಗ್ರಾಮ ನ್ಯಾಯಾಲಯಗಳ ಸ್ವರೂಪ ಹಾಗೂ ಕಾರ್ಯ ವೈಖರಿ ನಿರ್ಧರಿಸಲಾಗುವುದು ಎಂದು ಕಳುಹಿಸಿದರು.

ಅಧಿಕಾರ ಕಳೆದುಕೊಂಡ ಸಿಎಂ ಇಬ್ರಾಹಿಂ!

ಜೆಡಿಎಸ್ ಘಟಕದ ಹಂಗಾಮಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಈ ಎರಡೂ ಆದೇಶಗಳು ತಕ್ಷಣದಿಂದಲೇ ಜಾರಿಗೆ ಬರುತ್ತವೆ ಎಂದು ದೇವೇಗೌಡರು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು. ಜನತಾದಳ (ಜಾತ್ಯತೀತ) ಪಕ್ಷದ ಸಂವಿಧಾನ ಮತ್ತು ನಿಯಮಗಳ ಅಡಿಯಲ್ಲಿ, ಅಂದರೆ, ಆರ್ಟಿಕಲ್ 10ರ ಪ್ರಕಾರ, ಕರ್ನಾಟಕ ಪ್ರದೇಶ ಜನತಾದಳ (ಜಾತ್ಯಾತೀತ) ಪಕ್ಷದ ರಾಜ್ಯಾಧ್ಯಕ್ಷರು ಮತ್ತು ರಾಜ್ಯ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳನ್ನು ಒಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಆ ಸಮಿತಿಯನ್ನು ವಿಸರ್ಜನೆ ಮಾಡಲಾಗಿದೆ ಎಂದು ಆದೇಶದಲ್ಲಿ ದೇವೇಗೌಡರು ತಿಳಿಸಿದ್ದಾರೆ.

ಕರ್ನಾಟಕ ಪ್ರದೇಶ ಜನತಾದಳದ (ಜಾತ್ಯತೀತ) ರಾಜ್ಯಾಧ್ಯಕ್ಷರು ಮತ್ತು ರಾಜ್ಯ ಕಾರ್ಯಕಾರಿ ಸಮಿತಿಯ ಪದಾಧಿಕಾರಿ ಗಳನ್ನು ಒಳಗೊಂಡಂತೆ ಆ ಸಮಿತಿಯನ್ನು ಈಗಾಗಲೇ ವಿಸರ್ಜನೆ ಮಾಡಲಾಗಿದೆ. ಪಕ್ಷದ ಮುಂದಿನ ಕಾರ್ಯ ಚಟುವಟಿಕೆಗಳನ್ನು ಸುಲಲಿತವಾಗಿ ಮುಂದುವರಿಸಿ ಕೊಂಡು ಹೋಗಲು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಪಕ್ಷದ ರಾಜ್ಯ ಘಟಕದ ಅಡಾಕ್ ಅಧ್ಯಕ್ಷರನ್ನಾಗಿ ಕೂಡಲೇ ಜಾರಿಗೆ ಬರು ವಂತೆ ನೇಮಕ ಮಾಡಲಾಗಿದೆ.

ಚುನಾವಣೆ ಮುಗಿದು ನಾಲ್ಕು ತಿಂಗಳು ಆಯಿತು. ಇಲ್ಲಿ ಸಿ.ಎಂ.ಇಬ್ರಾಹಿಂ ಅವರು ನೀಡಿರುವ ಹೇಳಿಕೆಗಳ ಬಗ್ಗೆ ಪ್ರಸ್ತಾಪ ಮಾಡಲ್ಲ. ಆದರೆ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಹಾಗೂ ಇತರೆ ಮುಖಂಡರ ಜತೆಗೆ ಸಮಾಲೋಚನೆ ಮಾಡಿದ್ದೇವೆ. ಪಕ್ಷದ ವಿವಿಧ ರಾಜ್ಯಗಳ ಘಟಕಗಳಿಗೆ ಮಾಹಿತಿ ನೀಡಲಾಗಿದೆ. ಅವರಿಗೆ ನಮ್ಮ ನಡೆ ಮನವರಿಕೆ ಆಗಿದೆ. ನಮ್ಮ, ಬಿಜೆಪಿ ಮೈತ್ರಿ ನಿರ್ಧಾರಕ್ಕೆ ಕೇರಳ ಘಟಕ ಒಪ್ಪಿಗೆ ನೀಡಿದೆ ಎಂದು ಅವರು ಹೇಳಿದರು.

ಪಕ್ಷದ ಹಲವು ಮುಸ್ಲಿಂ ನಾಯಕರು ಕೂಡ ನಮ್ಮ ಜತೆಗೆ ಇದ್ದಾರೆ. ಯಾರೂ ಧೃತಿಗೆಡಬೇಕಾಗಿಲ್ಲ. ಬೇರೆ ಬೇರೆ ರಾಜ್ಯ ದಲ್ಲಿ ಬೇರೆ ಬೇರೆ ಸನ್ನಿವೇಶ ಇದೆ. ಕುಮಾರಸ್ವಾಮಿ ಅವರು ಶಾಸಕಾಂಗ ಪಕ್ಷದ ನಾಯಕ ಜವಾಬ್ದಾರಿಯ ಜತೆ–ಜತೆಗೆ ಪಕ್ಷದ ಅಧ್ಯಕ್ಷ ಸ್ಥಾನದ ಹೊಣೆಯನ್ನೂ ನಿರ್ವಹಣೆ ಮಾಡಬೇಕು ಎಂದು ನಿರ್ಧಾರ ಮಾಡಲಾಗಿದೆ ಎಂದು ತಿಳಿಸಿದರು. ಜೆಡಿಎಸ್ ರಾಜ್ಯ ಘಟಕದ ಕಾರ್ಯ ದರ್ಶಿಯಾಗಿ ವಿಧಾನಪರಿಷತ್ ಸದಸ್ಯ ಕೆ.ಎ.ತಿಪ್ಪೇಸ್ವಾಮಿ ಕಾರ್ಯ ನಿರ್ವಹಿಸಲಿ ದ್ದಾರೆ. ಪಕ್ಷದ ಮುಖಂಡರೊಂದಿಗೆ ಸಮಾಲೋಚಿಸಿ ಮೂರು ದಿನದಲ್ಲಿ ಕೆಲವು ಪದಾಧಿಕಾರಿಗಳನ್ನು ನೇಮಕ ಮಾಡಲಾ ಗುವುದು. ಜೆಡಿಎಸ್ ರಾಜ್ಯಾಧ್ಯಕ್ಷರಾಗಿದ್ದ ವರ ಬಗ್ಗೆ ಯಾವ ತೀರ್ಮಾನ ಮಾಡ ಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಉತ್ತರಿ ಸಿದ ದೇವೇಗೌಡರು, ಅವರನ್ನು ರಿಮೂವ್ ಮಾಡಲಾಗಿದ್ದು, ನೀವು ವಿಸರ್ಜನೆ ಮಾಡಲಾಗಿದೆ ಎಂದು ಭಾವಿಸಬಹುದು ಎಂದು ತಿಳಿಸಿದರು. ಕೋರ್ ಕಮಿಟಿಯ ಅಧ್ಯಕ್ಷರು, ಶಾಸಕಾಂಗ ಪಕ್ಷದ ನಾಯಕರು ಒಕ್ಕಲಿಗರೇ ಆಗಿದ್ದಾರೆ ಎಂದು ನೀವು ಪ್ರಶ್ನಿಸ ಬಹುದು. ಕುಮಾರಸ್ವಾಮಿ ಅವರ ನಾಯಕತ್ವಕ್ಕೆ ರಾಷ್ಟ್ರ ಮಟ್ಟದಲ್ಲಿ ಮಾನ್ಯತೆ ಇದೆ. ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮಾಡಿದ ರೈತರ ಸಾಲಮನ್ನಾ, ಚುನಾ ವಣಾ ಪೂರ್ವದಲ್ಲಿ ನಡೆಸಿದ ಜನತಾ ಜಲಧಾರೆ, ಪಂಚರತ್ನ ಕಾರ್ಯಕ್ರಮಗಳಿಂದ ಅವರನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸಿದ್ದಾರೆ. ಹೀಗಾಗಿ ಪಕ್ಷದ ಎಲ್ಲ ನಾಯಕರು, ಮುಖಂಡರು ಒಟ್ಟಾಗಿ ಕುಮಾರಸ್ವಾಮಿ ಅವರೇ ಅಡಹಾಕ್ ಅಧ್ಯಕ್ಷರಾಗಬೇಕು ಎಂದು ತೀರ್ಮಾನ ಮಾಡಿದ್ದೇವೆ ಎಂದರು.

ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರೆತೀನಿ

ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಿದ ಬಳಿಕ ಮಾತನಾಡಿದ ಹೆಚ್.ಡಿ. ಕುಮಾರಸ್ವಾಮಿ, ಚುನಾವಣೆ ಬಳಿಕ ನಡೆದ ರಾಜಕೀಯ ಘಟನೆಗಳ ಹಿನ್ನೆಲೆಯಲ್ಲಿ ಹಳೆ ಘಟಕ ವಿಸರ್ಜನೆ ಮಾಡಿ ಹೊಸ ಸಮಿತಿ ರಚನೆ ಮಾಡಲಾಗಿದೆ. ಪಕ್ಷದಲ್ಲಿ ಪುನಶ್ಚೇತನ ಮಾಡಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಜವಾಬ್ದಾರಿ ನಿರ್ವಹಣೆ ಮಾಡಲು ಹೇಳಿದ್ದಾರೆ. ರಾಷ್ಟ್ರೀಯ ಅಧ್ಯಕ್ಷರ ಆದೇಶದಂತೆ ಪಕ್ಷವನ್ನು ಸಶಕ್ತಗೊಳಿಸಲಾಗುವುದು ಎಂದರು. ಕೋರ್ ಕಮಿಟಿ ಸದಸ್ಯರು ಹಾಗೂ ಎಲ್ಲಾ ಶಾಸಕರು, ವಿಧಾನಪರಿಷತ್ ಸದಸ್ಯರು ಈ ಸಭೆಯಲ್ಲಿ ಭಾಗಿಯಾಗಿದ್ದರು. ಎಲ್ಲರ ಸಹಮತದಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು. ಪಕ್ಷವನ್ನು ಬಲಿಷ್ಠವಾಗಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಾಗುತ್ತದೆ. ವಿಜಯದಶಮಿ ಬಳಿಕ ಪಕ್ಷ ಸಂಘಟನೆ ಹಾಗೂ ರಾಜ್ಯದ ಸಮಸ್ಯೆ ಹಿನ್ನೆಲೆಯಲ್ಲಿ ಪರಿಣಾಮವಾಗಿ ಕೆಲಸ ಮಾಡಲು ನಿರ್ಧಾರ ಮಾಡಲಾಗಿದೆ ಎಂದರು. ಇನ್ನು ಕುಟುಂಬ ರಾಜಕಾರಣದ ಕುರಿತಾದ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯೆ ನೀಡಿ, ಕಾಂಗ್ರೆಸ್ ಪಕ್ಷದ್ದು ಏನು? ಅವರದೂ ಕುಟುಂಬ ಮೂಲ ಅಲ್ಲವೇ? ಅವರಿಗೆ ಯಾವ ನೈತಿಕತೆ ಇದೆ ನಮ್ಮ ಪಕ್ಷದ ಬಗ್ಗೆ ಮಾತನಾಡಲು ಎಂದು ಎಚ್‌ಡಿಕೆ ಪ್ರಶ್ನಿಸಿದರು.

ಅರಮನೆ ಆವರಣದಲ್ಲಿ ನೆರವೇರಿದ ಜಂಬೂಸವಾರಿ ತಾಲೀಮು

●12 ಆನೆ, 27 ಕುದುರೆ, 8 ಪೊಲೀಸ್ ತುಕಡಿಗಳು ಭಾಗಿ ●ಜಂಬೂಸವಾರಿ ಲೈನ್‌ಅಪ್ ಮಾಡಿಕೊಂಡ ಪೊಲೀಸ್ ತುಕಡಿ





ಮೈಸೂರು,ಅ.19(ಎಂಟಿವೈ)– ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಕೇಂದ್ರಬಿಂದು ಜಂಬೂಸವಾರಿ ಮೆರವಣಿಗೆಗೆ ಕೇವಲ ನಾಲ್ಕು ದಿನ ಮಾತ್ರವಿದ್ದು, ಗುರುವಾರ ಅರಮನೆ ಆವರಣದಲ್ಲಿ ಜಂಬೂಸವಾರಿ ಮೊದಲ ಹಂತದ ತಾಲೀಮು ನಡೆಸಲಾಯಿತು.

ಅರಮನೆ ಮುಂಭಾಗದ ಪ್ರಾಂಗಣದಲ್ಲಿ ಇಂದು ಬೆಳಗ್ಗೆ ನಡೆದ ತಾಲೀಮಿನಲ್ಲಿ ಜಂಬೂಸವಾರಿ ದಿನ ಕ್ರಮಬದ್ಧವಾಗಿ ಸಾಗುವಂತೆ ಲೈನ್‌ಅಪ್ ಮಾಡಿ ಪೊಲೀಸ್ ತುಕಡಿ ನಡೆಸಿದ ಪಥಸಂಚಲನದಲ್ಲಿ ಆನೆಗಳು ಹೆಜ್ಜೆ ಹಾಕಿದವು. ಆ ಮೂಲಕ ಅ.24 ರಂದು ನಡೆಯಲಿರುವ ಜಂಬೂಸವಾರಿಗೆ ಗಜಪಡೆ, ಅಶ್ವಪಡೆ ಸಜ್ಜಾಗುತ್ತಿದ್ದು, ಇಂದು ನಡೆದ ತಾಲೀಮಿನಲ್ಲಿ ನಿಗದಿತ ಅಂತರದಲ್ಲೇ ಹೆಜ್ಜೆ ಹಾಕಿ ಗಮನ ಸೆಳೆದವು.

ತಾಲೀಮಿನ ವೇಳೆ 14 ಆನೆಗಳಲ್ಲಿ ಪಟ್ಟದ ಆನೆ ನಿಶಾನೆ ಆನೆ ಹೊರತುಪಡಿಸಿ, ಉಳಿದ 12 ಆನೆಗಳನ್ನು ಕರೆದೊಯ್ಯಲಾಯಿತು. ಜಂಬೂಸವಾರಿ ದಿನ ಅರಮನೆ ಆವರಣದಲ್ಲಿ ಗಜಪಡೆಯನ್ನು ಕರೆದುಕೊಂಡು ಬರುವ ಮಾರ್ಗ ಹಾಗೂ ಚಿನ್ನದ ಅಂಬಾರಿ ಕಟ್ಟುವ ಸ್ಥಳಕ್ಕೆ ಅಂಬಾರಿ ಆನೆ ಅಭಿಮನ್ಯು, ಕುಮ್ಕಿ ಆನೆಗಳಾದ ವರಲಕ್ಷ್ಮೀ ಹಾಗೂ ವಿಜಯ ಆನೆಯನ್ನು ಕರೆದೊಯ್ದು ಸ್ಥಳ ಪರಿಚಯಿಸಲಾಯಿತು. ಉಳಿದ ಆನೆಗಳು ಮೆರವಣಿಗೆ ಹೊರಡುವ ಸ್ಥಳ ವರಹಸ್ವಾಮಿ ದೇವಾಲಯದ ಮುಂಭಾಗದ ರಸ್ತೆಯಲ್ಲಿ ನಿಲ್ಲಿಸಲಾಗಿತ್ತು.

ತಾಲೀಮು ಆರಂಭಿಸಲು ಕಮಾಂಡ್ ನೀಡುತ್ತಿದ್ದಂತೆಯೇ ರಾಜವಂಶಸ್ಥರ ನಿವಾಸದ ಬಳಿಯಿರುವ ಅಂಬಾರಿ ಕಟ್ಟುವ ಕ್ರೇನ್ ಬಳಿಯಿಂದ ಕುಮ್ಕಿ ಆನೆಗಳೊಂದಿಗೆ ಅಂಬಾರಿ ಆನೆ ಅಭಿಮನ್ಯುವನ್ನು ಕರೆತರಲಾಯಿತು. ಅದರ ಮುಂದೆ ಪೊಲೀಸ್ ಬ್ಯಾಂಡ್ ವಾದ್ಯ ನುಡಿಸಿದ ಸಂಗೀತಕ್ಕೆ ಅನುಗುಣವಾಗಿ 8 ಪೊಲೀಸ್ ತುಕಡಿ ಹಾಗೂ ಅಶ್ವಪಡೆಯ 27 ಕುದುರೆಗಳು ಹೆಜ್ಜೆ ಹಾಕುತ್ತಾ, ಅರಮನೆಯ ಮುಂಭಾಗದ ಪ್ರಾಂಗಣಕ್ಕೆ ಬಂದವು.

ಆ ನಂತರ ಪೊಲೀಸ್ ಬ್ಯಾಂಡ್ ವಾದನದ ತಂಡ ರಾಷ್ಟ್ರಗೀತೆಯನ್ನು ನುಡಿಸಿತು. ಈ ವೇಳೆ ಅಂಬಾರಿ ಆನೆ ಮೇಲೆ ಗಣ್ಯರು ಪುಷ್ಪಾರ್ಚನೆ ಮಾಡುವಂತೆ ಡಿಸಿಎಫ್ ಸೌರಭ್ ಕುಮಾರ್, ಮೌಂಟೆಡ್ ಕಮಾಂಡರ್ ಶೈಲೇಂದ್ರ, ಅರಮನೆ ಭದ್ರತಾ ಪಡೆಯ ಎಸಿಪಿ ಚಂದ್ರಶೇಖರ್, ಆರ್‌ಎಫ್‌ಒ ಸಂತೋಷ್ ಹೂಗಾರ್ ಸೇರಿದಂತೆ ಇನ್ನಿತರರು ಪುಷ್ಪಾರ್ಚನೆ ಮಾಡಿದರು. ಬಳಿಕ ಸಾಲಾನೆಗಳು ಮೆರವಣಿಗೆಯಲ್ಲಿ ಸಾಗಿದವು. ಆ ನಂತರ ಪೊಲೀಸ್ ತುಕಡಿಗಳು ಪಥಸಂಚಲನದ ಮೂಲಕ ಸಾಲಾನೆ ಹಿಂಬಾಲಿಸಿದವು. ಅಂತಿಮವಾಗಿ ಅಂಬಾರಿ ಆನೆ ಅಭಿಮನ್ಯು, ಕುಮ್ಕಿ ಆನೆಗಳಾದ ವಿಜಯ, ವರಲಕ್ಷ್ಮಿ ಗಣ್ಯರಿಗೆ ಸೆಲ್ಯೂಟ್ ಹೊಡೆಯುವಂತೆ ಸೊಂಡಿಲೆತ್ತಿ ಗೌರವಿಸಿದ ನಂತರ ಮುಂದೆ ಸಾಗಿದವು.

ನಾಳೆ ಹಾಗೂ ಅ.23ರಂದು ಪೂರ್ಣ ಪ್ರಮಾಣದ ತಾಲೀಮು: ಇಂದು ಜಂಬೂಸವಾರಿ ತಾಲೀಮು ನಡೆಸಲಾಗಿತ್ತಾದರೂ, ನಾಳೆ(ಅ.20) ಹಾಗೂ ಅ.23ರಂದು ಪೂರ್ಣ ಪ್ರಮಾಣದ ತಾಲೀಮು ನಡೆಸಲಾಗುತ್ತದೆ. ಈ ವೇಳೆ ಪುಷ್ಪಾರ್ಚನೆ ಮಾಡುವ ಸಂದರ್ಭದಲ್ಲಿ ಪೊಲೀಸ್ ಬ್ಯಾಂಡ್ ತಂಡ ನುಡಿಸುವ ರಾಷ್ಟ್ರಗೀತೆ ವೇಳೆ ಕೋಟೆ ಮಾರಮ್ಮ ದೇವಾಲಯದ ಪಾರ್ಕಿಂಗ್ ಸ್ಥಳದಲ್ಲಿ ಫಿರಂಗಿ ದಳ ಒಂದೇ ನಿಮಿಷದಲ್ಲಿ 21 ಕುಶಾಲತೋಪು ಸಿಡಿಸಲಿದೆ ಆನೆ ಮತ್ತು ಕುದುರೆಗಳು ಅರಮನೆ ಆವರಣದಲ್ಲೇ ಇರಲಿವೆ. ಇದರಿಂದ ಅ.24ರಂದು ಜಂಬೂಸವಾರಿ ದಿನ ಸಿಡಿಮದ್ದಿನ ಶಬ್ದ ಕೇಳುವ ಮಾದರಿಯಲ್ಲೇ ಎರಡು ದಿನ ಪೂರ್ಣ ಪ್ರಮಾಣದ ತಾಲೀಮು ನಡೆಸಲು ನಿರ್ಧರಿಸಲಾಗಿದೆ.

ತಾಲೀಮಿನ ವೇಳೆ ಪಶುವೈದ್ಯ ಡಾ.ಮುಜೀಬ್ ರೆಹಮಾನ್, ಸಹಾಯಕರಾದ ರಂಗರಾಜು, ಅಕ್ರಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗಜಪಡೆಗೆ ಅಂತಿಮ ಹಂತದ ತಯಾರಿ ನೀಡಲಾಗುತ್ತಿದೆ

ಜಂಬೂಸವಾರಿಗೆ ಇನ್ನು 4 ದಿನವಿದ್ದು, ಈಗಾಗಲೇ ಗಜಪಡೆ ಸಜ್ಜಾಗಿದೆ. ಇಂದು ಅರಮನೆ ಆವರಣದಲ್ಲಿ ಜಂಬೂಸವಾರಿಯ ತಾಲೀಮು ನಡೆಸಲಾಗಿದೆ. ಈಗಾಗಲೇ ಎಲ್ಲಾ ಆನೆಗಳು ಆರೋಗ್ಯದಿಂದ ಕೂಡಿದ್ದು, ಮೆರವಣಿಗೆಯಲ್ಲಿ ಸಾಗಲು ಉತ್ಸುಕವಾಗಿವೆ. ಜನರಲ್ಲಿ ದಸರಾ ಆನೆಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರಸಪ್ರಶ್ನೆ ನಡೆಸಲಾಗುತ್ತಿದೆ. ಈ ರಸಪ್ರಶ್ನೆಯಲ್ಲಿ ನಿಶಾನೆ, ಸಾಲಾನೆ, ಕುಮ್ಕಿ ಆನೆಯ ಬಗ್ಗೆ ಪ್ರಶ್ನೆ ಕೇಳಲಾಗಿದ್ದು, ಜನಾಭಿಪ್ರಾಯ ಹೇಗಿರುತ್ತದೆಂದು ಇನ್ನೆರಡು ದಿನದಲ್ಲಿ ಗೊತ್ತಾಗಲಿದೆ. ಈ ನಡುವೆ ಗಜಪಡೆಯ ಮೇಲೆ ಹೆಚ್ಚಿನ ಕಾಳಜಿವಹಿಸಲಾಗಿದೆ.

- **ಸೌರಭ್ ಕುಮಾರ್,** ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ದಸರಾ ಆನೆಗಳೊಂದಿಗೆ ಬೆರೆತ ಶಿವಣ್ಣ

ತಾತ್ಕಾಲಿಕ ಶಾಲೆಗೆ ಭೇಟಿ; ಮಕ್ಕಳಿಗೆ ಕಿವಿಮಾತು



ಮೈಸೂರು, ಅ.19(ಎಸ್‌ಬಿಡಿ)– ಚಿತ್ರನಟ ಶಿವರಾಜ್‌ಕುಮಾರ್ ಬುಧವಾರ ಅರಮನೆ ಆವರಣದಲ್ಲಿ ಸುತ್ತು ಹಾಕಿ ಸಂಭ್ರಮಿಸಿದರು.

ಆನೆಗಳ ಬಿಡಾರಕ್ಕೆ ತೆರಳಿ ಒಂದೊಂದೇ ಆನೆಯನ್ನು ವೀಕ್ಷಿಸಿದ ಅವರು, ಅವುಗಳೊಂದಿಗೆ ಫೋಟೋ ಕ್ಲಿಕ್ಕಿಸಿಕೊಂಡರು. ಕೆಲ ಆನೆಗಳಿಗೆ ಕಬ್ಬು ನೀಡಿದರು. ಅರ್ಜುನ ಹಾಗೂ ಅಭಿಮನ್ಯು ಆನೆಯ ಆಶೀರ್ವಾದ ಪಡೆದು, ಖುಷಿಪಟ್ಟರು. ಮಾವುತರು ತಮ್ಮ ಆನೆಗಳ ಹೆಸರು ಹಾಗೂ ದಸರಾದಲ್ಲಿ ಅವು ನಿರ್ವಹಿಸುವ ಜವಾಬ್ದಾರಿ ಬಗ್ಗೆ ತಿಳಿಸಿದರು. ಈ ವೇಳೆ ಅವರೊಂದಿಗೆ ಮಾವುತರು, ಕಾವಾಡಿಗಳು ಹಾಗೂ ಪ್ರವಾಸಿಗರು ಫೋಟೋ ತೆಗೆಸಿಕೊಂಡರು.

ಬಳಿಕ ಮಾವುತರು ಹಾಗೂ ಕಾವಾಡಿಗಳ ಮಕ್ಕಳ ತಾತ್ಕಾಲಿಕ ಶಾಲೆಗೆ ಭೇಟಿ ನೀಡಿದ ಶಿವರಾಜ್‌ಕುಮಾರ್, ಕೆಲಹೊತ್ತು ಮಕ್ಕಳೊಂದಿಗೆ ಬೆರೆತರು. ಟಿವಿ, ಥಿಯೇಟರ್‌ನಲ್ಲಿ ನೋಡಿದ್ದ ಇವರನ್ನು ನೇರವಾಗಿ ಕಂಡು ಮಕ್ಕಳು ಸಂತಸಪಟ್ಟರು. ಹಸ್ತಲಾಘವ ಮಾಡಲು ಮುಗಿಬಿದ್ದರು. ಆಗ ಶಿವರಾಜ್‌ಕುಮಾರ್, ತಮ್ಮ ಬಳಿ ಬಂದ ಮಕ್ಕಳ ಹೆಸರು ಕೇಳಿ, ನೀನು ಎಷ್ಟನೇ ತರಗತಿ ಓದುತ್ತಿದ್ದೀಯಾ, ಚೆನ್ನಾಗಿ ಓದಬೇಕು ಎಂದು ಕಿವಿಮಾತು ಹೇಳಿದರಲ್ಲದೆ ಅವರೊಂದಿಗೆ ಫೋಟೋಗೆ ಪೋಸ್ ನೀಡಿದರು.

ಬೋರ್ಡ್‌ನಲ್ಲಿ ಹುಲಿ ಚಿತ್ರ ಬಿಡಿಸಿದ್ದನ್ನು ಗಮನಿಸಿದ ಅವರು, ಈ ಚಿತ್ರ ಬಿಡಿಸಿದ್ದು ಯಾರು ಎಂದು ತಿಳಿದುಕೊಂಡು ಆ ವಿದ್ಯಾರ್ಥಿಯನ್ನು ಪ್ರಶಂಸಿಸಿದರು. ಈ ವೇಳೆ ಕೆಲ ಮಕ್ಕಳು, ಶಿವರಾಜ್‌ಕುಮಾರ್ ಚಿತ್ರಗಳ ಜನಪ್ರಿಯ ಡೈಲಾಗ್‌ಗಳನ್ನು ಹೇಳಿ ಗಮನ ಸೆಳೆದರು. 'ಸೈಲೆಂಟ್ ಆಗಿದ್ರೆ ರಾಮ, ವಯಲೆಂಟ್ ಆದ್ರೋ ರಾವಣ' ಡೈಲಾಗ್ ಕೇಳಿ ನೆರೆದಿದ್ದವರೆಲ್ಲಾ ನಗೆಗಡಲಲ್ಲಿ ತೇಲಿದರು. ಮಕ್ಕಳ ಉತ್ಸಾಹ, ಪ್ರತಿಭೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಶಿವರಾಜ್‌ಕುಮಾರ್, ಶಾಲೆಯ ಶಿಕ್ಷಕರನ್ನೂ ಮಾತನಾಡಿಸಿದರು. ಈ ವೇಳೆ ಶಿಕ್ಷಕಿ ಮಂಜುಳಾ, ಮಕ್ಕಳು ತುಂಬಾ ಆಸಕ್ತಿಯಿಂದ ಕಲಿಯುತ್ತಾರೆ. ಶಿಕ್ಷಣ ಇಲಾಖೆಯಿಂದಲೇ ಪಠ್ಯಪುಸ್ತಕ, ಸಮವಸ್ತ್ರ ನೀಡಲಾಗಿದೆ. ಪಾಠದ ಜೊತೆಗೆ ಹಾಡು, ನೃತ್ಯ, ಕ್ರೀಡೆ, ಹೀಗೆ ವಿವಿಧ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಾರೆ. ಮಕ್ಕಳಿಗೆ ಆರೋಗ್ಯ ತಪಾಸಣೆಯನ್ನು ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ಚಲನಚಿತ್ರ ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್, ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ಡಿಡಿಪಿಐ ಹೆಚ್.ಕೆ. ಪಾಂಡು ಮತ್ತಿತರರು ಉಪಸ್ಥಿತರಿದ್ದರು.

ಸರ್ಕಾರದ ವಿರುದ್ಧ ಜಂಬೂ ಸವಾರಿಯಂದು ರಸ್ತೆ ತಡೆ

ಕುರುಬೂರು ಶಾಂತಕುಮಾರ್ ಘೋಷಣೆ



ಮೈಸೂರು, ಅ.19(ಜಿಎ)–ರೈತರು ಸಂಕಷ್ಟದಲ್ಲಿದ್ದರೂ ಜಗಮಗಿಸುವ ವಿದ್ಯುತ್ ಮೋಜಿನಲ್ಲಿರುವ ಸರ್ಕಾರದ ನಡೆ ಖಂಡಿಸಿ ಜಂಬೂಸವಾರಿ ದಿನವಾದ ಅ.24ರಂದು ಮೈಸೂರು ಚಾಮರಾಜನಗರ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ ರಸ್ತೆ ಬಂದ್ ನಡೆಸಲಾಗುವುದು ಎಂದು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಘೋಷಿಸಿದರು.

ನಗರದ ಕುವೆಂಪು ಉದ್ಯಾನವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ದೇಶದ ಜನರ ಆಹಾರ ಉತ್ಪಾದನೆ ಮಾಡುವ ರೈತರು ಕತ್ತಲಲ್ಲಿದ್ದರೆ, ಜನಪ್ರತಿನಿಧಿಗಳು ಮೋಜಿನಲ್ಲಿದ್ದಾರೆ. ಬರಗಾಲದಿಂದ ನರಳುತ್ತಿರುವ ರೈತನ ಕೃಷಿ ಪಂಪ್‌ಸೆಟ್‌ಗಳಿಗೆ ಕೇವಲ 5 ಗಂಟೆ ವಿದ್ಯುತ್, ಕೈಗಾರಿಕೆಗಳಿಗೆ ಸಂಪೂರ್ಣ ವಿದ್ಯುತ್ ಪೂರೈಕೆಯಾಗುತ್ತಿದೆ. ಮತ್ತೊಂದೆಡೆ ಬರಗಾಲವಿದ್ದರೂ ಕಾವೇರಿ ಅಚ್ಚುಕಟ್ಟು ಭಾಗದ ರೈತರಿಗೆ ಬೆಳೆ ಬೆಳೆಯಲು ನೀರು ಬಿಡದೆ ತಮಿಳುನಾಡಿಗೆ ನೀರು ಹರಿಸಿ ರೈತರಿಗೆ ದ್ರೋಹ ಬಗೆದ ಸರ್ಕಾರಕ್ಕೆ ಎಚ್ಚರಿಸಲು ದಸರಾ ದಿನದಂದು ರಸ್ತೆ ಬಂದ್ ಚಳುವಳಿ ನಡೆಸುತ್ತೇವೆ ಎಂದರು.

ಕಬ್ಬಿನಿಂದ ಯಥನಾಲ್ ಉತ್ಪಾದನೆಯನ್ನು ಬೆಲ್ಲದ ಗಾಣಗಳಲ್ಲಿ ಉತ್ಪಾದಿಸಲು ರೈತರಿಗೆ ಅವಕಾಶ ಕೊಡಬೇಕು. ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ವಿದ್ಯುತನ್ನು ಸಂಪೂರ್ಣವಾಗಿ ಸರ್ಕಾರ ಖರೀದಿಸಿ ಇದು ಹಣವನ್ನು ರೈತರ ಕಬ್ಬಿನ ಬಿಲ್ ಬಾಕಿಗೆ ಬಳಸಬೇಕು. ಆದರಿಂದ ಕಬ್ಬಿನ ಬೆಳೆ ಸಾಲದ ಅವಧಿಯನ್ನು 18 ತಿಂಗಳಿಗೆ ವಿಸ್ತರಿಸಬೇಕು. ಕಬ್ಬಿನಿಂದ ಬರುವ ಸಕ್ಕರೆ ಇಳುವರಿ ಸಕ್ಕರೆ ಕಾರ್ಖಾನೆಗಳು ಪರಿಶೀಲಿಸಿ ಮರು ಕೊಡುವ ಕಾರಣ ಇಳುವರಿ ನ್ಯಾಯ ಸಮ್ಮತವಾಗಿ ಕೊಡುತ್ತಿಲ್ಲ. ತೂಕದಲ್ಲೂ ರೈತರಿಗೆ ಮೋಸವಾಗುತ್ತಿದೆ ಇದನ್ನು ತಪ್ಪಿಸಲು ವೈಜ್ಞಾನಿಕ ಮಾನದಂಡಗಳನ್ನು ಅನುಸರಿಸುವಂತೆ ಸರ್ಕಾರ ಯೋಜನೆ ರೂಪಿಸಬೇಕು ಎಂದು ಆಗ್ರಹಿಸಿದರು.

ಕಬ್ಬಿಗೆ ಬೆಂಕಿ ಬಿದ್ದಾಗ ಸಕ್ಕರೆ ಕಾರ್ಖಾನೆಗಳು ಶೇ.25ರಷ್ಟು ಹಣ ಕಡಿತ ಮಾಡಿಕೊಂಡು ಪಾವತಿಸುತ್ತಿದ್ದಾರೆ. ಇದನ್ನು ತಪ್ಪಿಸಲು ಸಕ್ಕರೆ ನಿಯಂತ್ರಣ ಕಾಯ್ದೆ ಕಾನೂನು ತಿದ್ದುಪಡಿ ಮಾಡಬೇಕು. ಅತಿವೃಷ್ಟಿ, ಪ್ರವಾಹ ಹಾನಿ, ಬರಗಾಲ ತುತ್ತಾದಾಗ ಕಬ್ಬು ಬೆಳೆ ನಷ್ಟ ಪರಿಹಾರ ಸಿಗುವಂತಾಗಲು ಎನ್‌ಡಿಆರ್‌ಎಫ್ ಮಾನದಂಡ ತಿದ್ದುಪಡಿ ಮಾಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಸೋಮಶೇಖರ್, ಹತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರ ಶಂಕರ, ಹಳ್ಳಿಕೆರೆಹುಂಡಿ ಭಾಗ್ಯರಾಜ್, ಕುರುಬೂರ್ ಸಿದ್ದೇಶ್, ವೆಂಕಟೇಶ್, ರಾಜಣ್ಣ, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಕೆ.ಎಸ್.ಭಗವಾನ್ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಅ.19(ಜಿಎ)– ಒಕ್ಕಲಿಗರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಪ್ರೊ.ಕೆ.ಎಸ್. ಭಗವಾನ್ ಬಂಧಿಸುವಂತೆ ಆಗ್ರಹಿಸಿ ಗುರುವಾರ ಜಿಲ್ಲಾ ಒಕ್ಕಲಿಗರ ಸಂಘ ನಗರದ ನ್ಯಾಯಾಲಯದ ಮುಂಭಾಗ ರಸ್ತೆ ತಡೆದು ಪ್ರತಿಭಟನೆ ನಡೆಸಿತು.

ಒಕ್ಕಲಿಗರನ್ನು ಅವಹೇಳನ ಮಾಡಿದ ಭಗವಾನ್ ಗಡಿಪಾರು ಮಾಡಿ', 'ಭಗವಾನ್ ಬಂಧಿಸಿ' ಎಂಬ ಭಿತ್ತಿಪತ್ರಗಳನ್ನು ಹಿಡಿದು ಘೋಷಣೆ ಕೂಗಿದರು. ಪ್ರತಿಭಟನಾಕಾರರು ರಸ್ತೆ ತಡೆ ನಡೆಸಲು ಯತ್ನಿಸಿದಾಗ ಪೊಲೀಸರು ತಡೆದರು. ಈ ವೇಳೆ ಮಾತಿನ ಚಕಮಕಿ ನಡೆಯಿತು.

ಷರತ್ತುಬದ್ಧ ಅನುಮತಿ ಇದ್ದರೂ ಪ್ರಚೋದನಕಾರಿ ಭಾಷಣ ಹಾಗೂ ಮೆರವಣಿಗೆ ನಡೆಸಿದ್ದು ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ. ಮೇಲಾಧಿಕಾರಿ ಒತ್ತಡದಿಂದ ಅವರನ್ನು ಬಂಧಿಸಲು ಸಾಧ್ಯವಾಗದಿದ್ದರೆ ನಮ್ಮನ್ನೇ ಬಂಧಿಸಿ' ಎಂದು ಪೊಲೀಸರನ್ನು ಒತ್ತಾಯಿಸಿದರು. ಭಗವಾನ್ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು ಆಕ್ರೋಶ ವ್ಯಕ್ತಪಡಿಸಿದರು.

ಮುಂದಿನ 48 ಗಂಟೆಗಳಲ್ಲಿ ಭಗವಾನ್ ಬಂಧಿಸದಿದ್ದಲ್ಲಿ ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಕಪ್ಪು ಬಾವುಟ ಪ್ರದರ್ಶನ ಮಾಡುತ್ತೇವೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಚೇತನ್ ತಿಳಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್, ಎಂ.ಬಿ.ಮಂಜೇಗೌಡ, ಮೈಸೂರು ಹಾಗೂ ಚಾಮರಾಜನಗರ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಉಪಾಧ್ಯಕ್ಷ ರವಿ ರಾಜಕೀಯ, ಪ್ರಶಾಂತ್‌ಗೌಡ, ಬನ್ನೂರು ಮಹೇಶ್ ಖಜಾಂಚಿ ಆರ್. ಲೋಕೇಶ್, ನಿರ್ದೇಶಕರಾದ ಕೆಪಿ ನಾಗಣ್ಣ, ಕುಮಾರ್ ಗೌಡ, ನಂಜನಗೂಡು ಗೋಪಾಲ್, ಗುರುರಾಜ್, ಗಿರೀಶ್ ಗೌಡ, ಸುಶೀಲ ನಂಜಪ್ಪ ಉಮೇಶ್, ಎ ರವಿ, ನಗರಪಾಲಿಕೆ ಸದಸ್ಯೆ ಶಾಂತಕುಮಾರಿ, ಮುಖಂಡರಾದ ಸುಕೃತ್ ಗೌಡ, ಉಮಾ ಶಂಕರ್, ವಿಕ್ರಾಂತ್ ದೇವೇಗೌಡ, ಕೆ.ವಿ.ಶ್ರೀಧರ್ ರವಿಕುಮಾರ್, ಕಿರಣ್ ಮಾದೇಗೌಡ, ಕಾರ್ತಿಕ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಕಲೆ, ಸಂಸ್ಕೃತಿಯನ್ನು ರಾಜಕಾರಣ ಕಡೆಗಣಿಸಬಾರದು



ಮೈಸೂರು, ಅ.19(ಜಿಎ)–ಯಾವುದೇ ರಾಜಕಾರಣವೂ ಕಲೆ ಮತ್ತು ಸಂಸ್ಕೃತಿಯನ್ನು ಕಡೆಗಣಿಸಬಾರದು. ಕಲೆ, ಸಂಸ್ಕೃತಿಯನ್ನು ಆರೋಗ್ಯಕರವಾಗಿ ಉಳಿಸಿದಷ್ಟು ಅದು ನಮ್ಮ ಪ್ರಜಾಪ್ರಭುತ್ವ ಹಾಗೂ ಸಂವಿಧಾನವನ್ನು ರಕ್ಷಿಸುತ್ತದೆ. ಇಂತಹ ವಾತಾವರಣ ಸೃಷ್ಟಿಯಾಗಲಿ. ದಸರಾ ಕವಿಗೋಷ್ಠಿಯು ನಾಡಿನ ಶಾಂತಿಯನ್ನು ಹಾರಿಸುವ ಕಡೆಗೆ ಧ್ವನಿ ಮೂಡಿಸಲಿ ಎಂದು ಕವಿ ಎಸ್.ಜಿ.ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ದಸರಾ ಅಂಗವಾಗಿ ನಗರದ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಪ್ರಾದೇಶಿಕ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಬರೆದಂತೆ ಬದುಕುವುದು ನಮ್ಮ ಹೊಣೆಗಾರಿಕೆ. ಸಾಹಿತ್ಯ ಬರೆಯುವ ಪ್ರತಿಯೊಬ್ಬರಿಗೂ ಕೂಡ ಸಾಮಾಜಿಕ ಜವಾಬ್ದಾರಿ ಇರಬೇಕು ಎಂದರು.

ಜಾಗತಿಕ ವಾತಾವರಣದೊಳಗೆ ಯಾರೂ ಸಂತೋಷ ಪಡುವಂತಹ ಸ್ಥಿತಿಯಲ್ಲಿ ಇಲ್ಲ. ನಮ್ಮ ದೇಶವನ್ನು ಒಳಗೊಂಡಂತೆ ಇಡೀ ಜಗತ್ತಿನ ವ್ಯಾಪ್ತಿಯ ಒಳಗೆ ನೋಡಿದರೆ ಮಕ್ಕಳು, ಮಹಿಳೆಯರ ಮೇಲೆ ಆಗುತ್ತಿರುವಂತಹ ಹಲ್ಲೆಯಿಂದ ಹಿಡಿದು ಯುದ್ಧ ಉಂಟು ಮಾಡುತ್ತಿರುವ ಭೀತಿ ಮತ್ತು ಅಮಾನವೀಯತೆಯ ವಿಜೃಂಭಣೆಯನ್ನು ನೋಡಿದಾಗ ಮಾತು ಕಟ್ಟುತ್ತದೆ. ಜಗತ್ತಿನ ಯಾವ ಮೂಲೆಯೂ ಸುರಕ್ಷಿತವಾಗಿ ಉಳಿಯಲಾರದ ವಾತಾವರಣ ಉಂಟಾಗಿದ್ದು, ಜನಾಂಗೀಯ ದ್ವೇಷ ಇಂದು ಇಡೀ ಜಗತ್ತಿಗೆ ವ್ಯಾಪಿಸಿದೆ ಎಂದು ಬೇಸರಿಸಿದರು.

ಕಾವ್ಯಕ್ಕೆ, ಸಾಹಿತ್ಯಕ್ಕೆ, ಕಲೆಗೆ ಒಂದು ಹೊಣೆಗಾರಿಕೆ ಇದೆ. ಅದು ಸಾಮಾಜಿಕ ಹೊಣೆಗಾರಿಕೆ. ಯಾವುದೇ ಭಾಷೆಯ ಸಾಹಿತ್ಯ, ಕಲೆ ಅನ್ನುವುದು ಕೇವಲ ಭಾಷೆಗೆ ಮಾತ್ರ ಸೀಮಿತವಾದಂತೆ ಮಾತನಾಡುವುದಿಲ್ಲ. ಅದು ವಿಶ್ವವ್ಯಾಪ್ತಿಯೊಳಗೆ ಲೋಕದರ್ಶನವನ್ನು ಕಟ್ಟಿಕೊಡುತ್ತದೆ. ಈಗಿನ ವಾತಾವರಣದೊಳಗಿನ ಸಾಮಾಜಿಕ ಜವಾಬ್ದಾರಿಯನ್ನು ಹೊತ್ತಂತಹ ಮನಸ್ಸುಗಳ ಮಾತುಗಳನ್ನು ಪತ್ರಿಕೆಗಳಲ್ಲಿ ನಾವು ಕಾಣಬಹುದು ಎಂದರು.

ಜಗದ್ಗುರುಗಳು ಎಂದು ಅನಿಸಿಕೊಂಡವರು ಕೂಡ ಅವರವರ ಜಾತಿಗೆ ಜಗದ್ಗುರುಗಳೇ ಹೊರತು ನಿಜವಾದ ಜಗತ್ತಿಗೆ ಗುರುಗಳಲ್ಲ. ನಮಗೆ ನಮ್ಮ ಬರಹಕ್ಕೆ ಸಾಮಾಜಿಕ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ನಾವು ಬದುಕಿದರೆ ಮಾತ್ರ ನಮಗೆ ಮಾತನಾಡುವ ನೈತಿಕ ಶಕ್ತಿ ಮತ್ತು ಧೈರ್ಯ ಇರುತ್ತದೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಪ್ರಾದೇಶಿಕ ಕವಿಗೋಷ್ಠಿಯ ಕಾರ್ಯಾಧ್ಯಕ್ಷೆ ಡಾ.ಎಸ್.ವಿಜಯ್ ಕುಮಾರಿ ಕರಿಕಲ್, ಖ್ಯಾತ ಸಾಹಿತಿ ಡಾ.ಎಚ್.ಟಿ ಪೋತೆ, ಖ್ಯಾತ ಕವಯತ್ರಿ ಚ.ಸರ್ವಮಂಗಳ, ಪ್ರಾದೇಶಿಕ ಕವಿಗೋಷ್ಠಿ ಉಪಸಮಿತಿಯ ವಿಶೇಷ ಅಧಿಕಾರಿ ಡಾ.ಎಂ. ದಾಸೇಗೌಡ ಮತ್ತು ಉಪಸಮಿತಿಯ ಅಧ್ಯಕ್ಷರು ಮಹೇಶ್ ಅಂಬಲಾರೆ ಹಾಗೂ ಉಪಾಧ್ಯಕ್ಷರುಗಳಾದ ದಂಡಿನಕೆರೆ ನಾಗರಾಜು, ರವಿಚಂದ್ರನ್ ಮತ್ತಿತರರು ಉಪಸ್ಥಿತರಿದ್ದರು.

'ಘೋಸ್ಟ್' ಚಿತ್ರದ ನಿರ್ಮಾಪಕ ಸಂದೇಶ್ ಎನ್, ಶಿವರಾಜ್‌ಕುಮಾರ್, ನಿರ್ದೇಶಕ ಶ್ರೀನಿ



ಘೋಸ್ಟ್‌ಟ

48 ಗಂಟೆಯ ಕಥೆ–ದ್ವಿಪಾತ್ರದಲ್ಲಿ ಶಿವಣ್ಣ


ಸ್ಯಾಂಡಲ್‌ವುಡ್‌ನ ಪ್ರತಿಷ್ಠಿತ ಸಂಸ್ಥೆ ಸಂದೇಶ್ ಪ್ರೊಡಕ್ಷನ್ಸ್ ನಿರ್ಮಾಣದ, ಶಿವರಾಜ್‌ಕುಮಾರ್ ನಟಿಸಿರುವ ಬಹುನಿರೀಕ್ಷಿತ ಚಿತ್ರ 'ಘೋಸ್ಟ್' ಗುರುವಾರ ದೇಶಾದ್ಯಂತ 500ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆಕಂಡಿದೆ. ಚಿತ್ರಕ್ಕೆ ಎಲ್ಲಾ ಕಡೆ ಪ್ರೇಕ್ಷಕರಿಂದ ಭರ್ಜರಿ ರೆಸ್ಪಾನ್ಸ್ ದೊರಕುತ್ತಿದೆ, ರಿಲೀಸ್‌ಗೂ ಮುನ್ನ ಶಿವರಾಜಕುಮಾರ್ ಅವರ ನಿವಾಸದಲ್ಲಿ ಹಾಜರಿದ್ದ ತಂಡ ಮಾಹಿತಿ ಹಂಚಿಕೊಂಡಿತು,

ನಿರ್ಮಾಪಕ ಸಂದೇಶ್ ಮಾತನಾಡಿ, ನಮ್ಮ ಚಿತ್ರ ಕನ್ನಡದಲ್ಲೇ 375 ಚಿತ್ರಮಂದಿರಗಳಲ್ಲಿ ರಿಲೀಸಾಗಿದೆ, ಉಳಿದಂತೆ ಹಿಂದಿ, ತಮಿಳು, ಮಲಯಾಳಂ ಸೇರಿ 600ಕ್ಕೂ ಹೆಚ್ಚು ಥಿಯೇಟರ್‌ಗಳಲ್ಲಿ ಬಿಡುಗಡೆಯಾಗುತ್ತಿದೆ. ತೆಲುಗು ವರ್ಷನ್ ಮಾತ್ರ ಒಂದು ವಾರ ಲೇಟಾಗಿ ರಿಲೀಸಾಗುತ್ತಿದೆ, ನಮ್ಮ ಪ್ರೊಡಕ್ಷನ್‌ನಲ್ಲಿ ಶಿವಣ್ಣ ಮೂರನೇ ಬಾರಿಗೆ ಕೆಲಸ ಮಾಡಿದ್ದಾರೆ. ಅಂದುಕೊಂಡ ಹಾಗೆ ವರ್ಷದೊಳಗೇ ಸಿನಿಮಾ ರಿಲೀಸ್ ಮಾಡುತ್ತಿದ್ದೇವೆ, ಸಿನಿಮಾ ಇಷ್ಟು ವ್ಯವಸ್ಥಿತವಾಗಿ ಬಿಡುಗಡೆಯಾಗಲು ನಿರ್ದೇಶಕ ಶ್ರೀನಿ ಅವರ ಪರಿಶ್ರಮವೇ ಕಾರಣ, ಯುಎಸ್‌ಎ, ಯುಕೆ, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಸಿಂಗಪೂರ್ ಹಾಗೂ ಯೂರೋಪ್ ಸೇರಿದಂತೆ ಸಾಗರದಾಚೆಯ ದೇಶಗಳಲ್ಲೂ ಘೋಸ್ಟ್ ರಿಲೀಸಾಗುತ್ತಿದೆ, ನಮ್ಮ ಬ್ಯಾನರ್‌ನಲ್ಲೇ ಅತೀ ಹೆಚ್ಚು ಬಜೆಟ್‌ನಲ್ಲಿ ನಿರ್ಮಾಣವಾದ ಚಿತ್ರವಿದು ಎಂದು ಹೇಳಿದರು.

ನಂತರ ಶಿವಣ್ಣ ಮಾತನಾಡಿ, ಈ ಚಿತ್ರದಲ್ಲಿ ನಾನು ಮೂರು ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದೇನೆ. ಅನುಪಮ್ ಖೇರ್ ಜೊತೆ ಸ್ಕ್ರೀನ್ ಶೇರ್ ಮಾಡಿದ್ದು ನಿಜಕ್ಕೂ ಒಳ್ಳೇ ಅನುಭವ, ನಾವು ಮುಂಬಯಿಯಲ್ಲಿ ಪ್ರೊಮೋಷನ್‌ಗೆ ಹೋದಾಗ ಪಾಸಿಟಿವ್ ಪ್ರತಿಕ್ರಿಯೆ ಸಿಕ್ತು ಎಂದು ಹೇಳಿದರು.

ನಿರ್ದೇಶಕ ಶ್ರೀನಿ ಮಾತನಾಡುತ್ತಾ, 'ಘೋಸ್ಟ್' ಕೇವಲ 48 ಗಂಟೆಗಳಲ್ಲಿ ನಡೆಯುವ ಈ ಚಿತ್ರಕ್ಕೆ ಕಥೆ. ಈ ಸಬ್ಜೆಕ್ಟ್ ಮಾಡಿದಾಗಲೇ ನಾಯಕ ಶಿವಣ್ಣ ಅಂದುಕೊಂಡಿದ್ದೆವು, ಅವರಿಗೆ ನಾನು ಈ ಕಾನ್ಸೆಪ್ಟ್ ಹೇಳಿದ್ದು ಮೈಸೂರಿನ ಶಕ್ತಿಧಾಮದಲ್ಲಿ, ಒನ್‌ಲೈನ್ ಕೇಳಿಯೇ ಒಪ್ಪಿಕೊಂಡಿದ್ದರು, ಚಿತ್ರದ 80% ಕಥೆ ಜೈಲಲ್ಲೇ ನಡೆಯುತ್ತದೆ, ಜೈಲ್ ಸೆಟ್ಟನ್ನು ಮಿನರ್ವ ಮಿಲ್‌ನಲ್ಲಿ ಹಾಕಿದ್ದೆವು, ಅಲ್ಲಿ ನಮ್ಮದೇ ಕೊನೆಯ ಸೆಟ್. ಶಿವಣ್ಣ ಪೂರ್ತಿ ಇನ್‌ವಾಲ್ವ್ ಆಗಿ ಸಿನಿಮಾ ಮುಗಿಸಿಕೊಟ್ಟರು. ಅದಕ್ಕೆ ಸರಿಯಾಗಿ ನಿರ್ಮಾಪಕರು ನನಗೆ ಪೂರ್ತಿ ಸ್ವಾತಂತ್ರ್ಯ ಕೊಟ್ಟಿದ್ದರಿಂದ ಉತ್ತಮ ತಂತ್ರಜ್ಞರ ಕೈಲಿ ಕೆಲಸ ಮಾಡಿಸಿಕೊಳ್ಳಲು ಅನುಕೂಲವಾಯಿತು, ಸಮಾಜದಲ್ಲಿ ಏನೋ ಒಂದು ವ್ಯವಸ್ಥೆ ಏರುಪೇರಾದರೆ ಏನಾಗಬಹುದು ಎಂದು ಚಿತ್ರದಲ್ಲಿ ಹೇಳಿದ್ದೇವೆ ಎಂದರು. ಈ ಚಿತ್ರವನ್ನು ಪೆನ್ ಸ್ಟುಡಿಯೋ ಬಿಡುಗಡೆ ಮಾಡುತ್ತಿದೆ, ಆರ್‌ಆರ್‌ಆರ್, ಜವಾನ್ ಸೇರಿದಂತೆ ಅನೇಕ ಸೂಪರ್‌ಹಿಟ್ ಚಿತ್ರಗಳನ್ನು ವಿತರಣೆ ಮಾಡಿರುವ ಪೆನ್ ಸ್ಟುಡಿಯೋ 'ಘೋಸ್ಟ್' ವಿತರಣಾ ಹಕ್ಕನ್ನು ಪಡೆದುಕೊಂಡಿದೆ. ಮಹೇನ್‌ಸಿಂಹ ಅವರ ಛಾಯಾಗ್ರಹಣ, ಅರ್ಜುನ್ ಜನ್ಯ ಅವರ ಸಂಗೀತ ಈ ಚಿತ್ರಕ್ಕಿದೆ. ಜಯರಾಂ, ಸತ್ಯಪ್ರಕಾಶ್, ಪ್ರಶಾಂತ್ ನಾರಾಯಣನ್, ದತ್ತಣ್ಣ, ಅಭಿಜಿತ್ ಪ್ರಮುಖ ಪಾತ್ರಗಳಲ್ಲಿದ್ದಾರೆ.

'ಶುಗರ್ ಫ್ಯಾಕ್ಟರಿ' ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ ಹಾಗೂ ಸೋನಾಲ್



ಕಾಶ್ಮೀರದಲ್ಲಿ 'ಶುಗರ್ ಫ್ಯಾಕ್ಟರಿ' ಡ್ಯುಯೆಟ್ ಹಾಡು...

ತನ್ನ ಟೈಟಲ್ ಮೂಲಕವೇ ಕುತೂಹಲ ಕೆರಳಿಸಿರುವ ಚಿತ್ರ 'ಶುಗರ್ ಫ್ಯಾಕ್ಟರಿ'. ದೀಪಕ್ ಅರಸ್ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ರೊಮ್ಯಾಂಟಿಕ್ ಹಾಡು ಬಿಡುಗಡೆಯಾಗಿದೆ, ನವೆಂಬರ್‌ನಲ್ಲಿ ಬಿಡುಗಡೆಯಾಗಲಿರುವ ಈ ಚಿತ್ರಕ್ಕೆ ಮನಸಾಲಜಿ ನಂತರ ದೀಪಕ್ ಅರಸ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್‌ಕಟ್ ಹೇಳಿದ್ದಾರೆ. ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿರೋ ಈ ಚಿತ್ರದ ಹಾಡು ಹಾಗೂ ಟೀಸರ್, ಟ್ರೈಲರ್ ರಿಲೀಸ್ ಮಾಡುವ ಮೂಲಕ ಚಿತ್ರತಂಡ ಚಿತ್ರದ ಕುರಿತು ಮಾಹಿತಿ ನೀಡುತ್ತಿದೆ. ಈಗ ಸಾಹಿತಿ ಜಯಂತ್ ಕಾಯ್ಕಿಣಿ ರಚನೆಯ ಜಹಾಪನಾ ಎಂಬ ಪ್ರೇಮಗೀತೆಯೊಂದು ಬಿಡುಗಡೆಯಾಗಿದೆ. ನಿಹಾಲ್ ತಾವ್ರೊ ಹಾಗೂ ಅಮೃತಾ ನಾಯಕ್ ದನಿಯಾಗಿರುವ ಈ ಹಾಡಲ್ಲಿ ಡಾರ್ಲಿಂಗ್ ಕೃಷ್ಣ ಹಾಗೂ ಸೋನಾಲ್ ಮಾಂತೆರೊ ಹೆಜ್ಜೆ ಹಾಕಿದ್ದಾರೆ. ಉತ್ತರ ಭಾರತದ ಕಾಶ್ಮೀರದಲ್ಲಿ ಚಿತ್ರೀಕರಿಸಲಾಗಿರುವ ಈ ಹಾಡಿಗೆ ಕಬೀರ್ ರಫಿ ಸಂಗೀತ ಸಂಯೋಜನೆ ಮಾಡಿದ್ದಾರೆ. ಡಾರ್ಲಿಂಗ್ ಕೃಷ್ಣ ಅವರ ಸಿನಿಜರ್ನಿಯಲ್ಲೇ 'ಶುಗರ್ ಫ್ಯಾಕ್ಟರಿ' ಬಿಗ್ ಬಜೆಟ್ ಚಿತ್ರವೆಂದು ಹೇಳಲಾಗುತ್ತಿದೆ. ಆರ್. ಗಿರೀಶ್ ಅವರ ನಿರ್ಮಾಣದ ಈ ಚಿತ್ರದಲ್ಲಿ ಸೋನಾಲ್ ಮಾಂತೆರೊ, ಅದ್ವಿತಿ ಶೆಟ್ಟಿ ಹಾಗೂ ರುಹಾನಿಶೆಟ್ಟಿ ಕೃಷ್ಣ ಹೀಗೆ ಮೂವರು ಬೆಡಗಿಯರು ನಾಯಕಿಯರಾಗಿ ಅಭಿನಯಿಸಿದ್ದಾರೆ.





ರಿಷಬ್ ಐಕಾನಿಕ್ ನಿರ್ದೇಶಕ, ರಕ್ಷಿತ್ ಟ್ರೆಂಡಿಂಗ್ ನಟ

ಕಾಂತಾರ ಖ್ಯಾತಿಯ ನಿರ್ದೇಶಕ ರಿಷಭ್ ಶೆಟ್ಟಿ ಈಗ ಐಕಾನಿಕ್ ಡೈರೆಕ್ಟರ್ ಆಗಿದ್ದಾರೆ. ಅಲ್ಲದೆ 777 ಚಾರ್ಲಿ ನಾಯಕ ರಕ್ಷಿತ್‌ಶೆಟ್ಟಿ ಟ್ರೆಂಡಿಂಗ್ ಆ್ಯಕ್ಟರ್ ಆಗಿದ್ದಾರೆ. ಅವರಿಬ್ಬರೂ ಇಂಥದ್ದೊಂದು ಪ್ರಶಸ್ತಿಗೆ ಭಾಜನರಾಗಿದ್ದು, ಇನ್ನೋವೇಟೀವ್ ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವದ ಸಮಾರಂಭದಲ್ಲಿ. ಇನ್ನೋವೇಟೀವ್ ಮಲ್ಟಿಪ್ಲೆಕ್ಸ್‌ನಲ್ಲಿ ನಡೆದ ಚಲನ ಚಿತ್ರೋತ್ಸವ ಕಾರ್ಯಕ್ರಮದಲ್ಲಿ ರಕ್ಷಿತ್‌ಶೆಟ್ಟಿ ಮತ್ತು ರಿಷಭ್‌ಶೆಟ್ಟಿ ಅವರಿಗೆ ಈ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಿಷಭ್, ಕಾಂತಾರ ಚಿತ್ರಕ್ಕೆ ಸಿಕ್ಕ ಪ್ರಶಸ್ತಿಗಳು ಮತ್ತು ಜನಪ್ರಿಯತೆ ಇವೆಲ್ಲ ಸಮಸ್ತ ಕನ್ನಡಿಗರಿಗೆ ಸಲ್ಲಬೇಕು. ಅವರು ಚಿತ್ರಕ್ಕೆ ಕೊಟ್ಟ ಯಶಸ್ಸು ಬೇರೆ ಭಾಷೆಗಳಿಗೆ ತಲುಪಿತು ಎಂದರು. ನಂತರ ರಕ್ಷಿತ್‌ಶೆಟ್ಟಿ ಮಾತನಾಡಿ, ಚಾರ್ಲಿ ನನ್ನ ವೃತ್ತಿಜೀವನದಲ್ಲೇ ವಿಶೇಷ ಚಿತ್ರ, ಪರಂವಾ ಸ್ಟುಡಿಯೋ ಮೂಲಕ ನಿರ್ಮಿಸಿದ ಈ ಚಿತ್ರ ರಾಷ್ಟ್ರಪ್ರಶಸ್ತಿಯನ್ನೂ ಪಡೆದಿದೆ. ಇನ್ನು, ಮನುಷ್ಯರ ಜೊತೆಗೆ ನಟನೆ ಮಾಡಬಹುದು. ಆದರೆ ಚಾರ್ಲಿಯ ಜೊತೆಗೆ ನಟನೆ ಮಾಡುವುದು ಅಷ್ಟು ಸುಲಭವಾಗಿರಲಿಲ್ಲ. 170 ದಿನಗಳ ಚಿತ್ರೀಕರಣ, ಪ್ರತೀ ದೃಶ್ಯಕ್ಕೂ 40 ಟೇಕ್‌ಗಳು, ಪ್ರತಿ ಟೇಕ್‌ನಲ್ಲೂ ಅತ್ಯುತ್ತಮವಾದುದನ್ನೇ ಕೊಡಬೇಕು. ಹಾಗಾಗಿ, ಅದು ಬಹಳ ಕಷ್ಟವಾಗಿತ್ತು. ಚಿತ್ರೀಕರಣದ ಕೊನೆಯ ದಿನ ಕಿರಣ್‌ರಾಜ್, ಚಾರ್ಲಿ 2 ಮಾಡುವುದಕ್ಕೆ ಒಳ್ಳೆಯ ಕಂಟೆಂಟ್ ಇದೆ ಎಂದಿದ್ದರು. ಅದಕ್ಕೆ ನಾನು ಆಗಲ್ಲ ಎಂದಿದ್ದೆ. ಚಾರ್ಲಿಯಂಥ ಪ್ರಾಣಿಗಳ ಜೊತೆ ಕೆಲಸ ಮಾಡುವುದು ಕಷ್ಟ, ಆದರೆ, ಇಂಥ ಪ್ರಶಸ್ತಿಗಳಿಂದ ಅದೆಲ್ಲ ಮರೆತುಹೋಗುತ್ತದೆ ಎಂದರು. ಈ ಸಂದರ್ಭದಲ್ಲಿ ಹಿರಿಯ ನಿರ್ದೇಶಕರಾದ ಭಾರತೀರಾಜ, ರಾಜೇಂದ್ರ ಸಿಂಗ್‌ಬಾಬು, ನಟ ಸಾಯಿಕುಮಾರ್ ಅವರನ್ನು ಸನ್ಮಾನಿಸಲಾಯಿತು. ನಟಿ ರೋಜಾ, ಅಂಬಿಕಾ, ಫಿಲಂ ಚೇಂಬರ್ ಅಧ್ಯಕ್ಷ ಎನ್.ಎಂ.ಸುರೇಶ್, ರಾಕ್‌ಲೈನ್ ವೆಂಕಟೇಶ್ ಹಾಜರಿದ್ದರು.


ಮನ್ ರೇ.. ಇದು ಮನಸುಗಳ ಎಕ್ಸ್ ರೇ



ವಾಸ್ತವ ಮತ್ತು ಭ್ರಮಾಲೋಕದ ಮಧ್ಯೆ ಬದುಕುತ್ತಿರುವ ವ್ಯಕ್ತಿಯೊಬ್ಬನ ಕಥೆ ಇಟ್ಟುಕೊಂಡು ನಿರ್ದೇಶಕ ಗುರುಸಾವನ್ ಅವರು 'ಮನ್ ರೇ' ಎಂಬ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಯುಎಸ್‌ನಲ್ಲಿ ಕೆಲಸ ಮಾಡುತ್ತಿರುವ ತಿಲಕ್‌ರಾಜು ಹಾಗೂ ರಾಜಣ್ಣ ಭೂಮಿಕಾ ಕ್ರಿಯೇಶನ್ಸ್ ಮೂಲಕ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಅಜಂತ್‌ರಾಜ್(ನಂಜುಂಡ), ಐಶ್ವರ್ಯ ರಂಗರಾಜನ್, ಪ್ರಮೋದ್ ಶೆಟ್ಟಿ ಹಾಗೂ ರಜಿನಿ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿರುವ, ಸೈಕಲಾಜಿಕಲ್ ಥ್ರಿಲ್ಲರ್ ಚಿತ್ರ ಇದಾಗಿದ್ದು ಇದರ ಟೀಸರ್ ಬಿಡುಗಡೆಯಾಯಿತು.

ಈ ಸಂದರ್ಭದಲ್ಲಿ ಗುರುಸಾವನ್ ಮಾತನಾಡಿ, ಮನ್‌ರೇ ಎಂದರೆ ಮನಸಿನ ಎಕ್ಸ್‌ರೇ. ತನ್ನದೇ ಆದ ಭ್ರಮಾಲೋಕದಲ್ಲಿ ಬದುಕುತ್ತಿರುವ ವ್ಯಕ್ತಿಯೊಬ್ಬನ ಮನಸಿನಲ್ಲಿ ನಡೆಯುವ ತಳಮಳ, ಯುದ್ಧವನ್ನು ನಾವಿಲ್ಲಿ ಹೇಳಹೊರಟಿದ್ದೇವೆ. ಈ ಸೈಕಲಾಜಿಕಲ್ ಥ್ರಿಲ್ಲರ್ ಕಥೆಯನ್ನು ಕಳೆದ 8 ವರ್ಷಗಳಿಂದ ಡೆವಲಪ್ ಮಾಡಿಕೊಂಡು ಬಂದಿದ್ದೇನೆ. ಆತನ ಇಂಥ ಮನಸ್ಥಿತಿಯಿಂದ ಬೇರೆಯವರಿಗೆ ಏನೇನೆಲ್ಲ ತೊಂದರೆಯಾಗುತ್ತೆ ಎಂಬುದನ್ನು ಹೇಳುತ್ತಿದ್ದೇವೆ. ಯುಎಸ್‌ನಲ್ಲಿ ಕನ್ನಡಪರ ಕೆಲಸಗಳನ್ನು ಮಾಡುತ್ತಿರುವ ತಿಲಕ್‌ರಾಜು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ನವೆಂಬರ್‌ನಲ್ಲಿ ಶೂಟಿಂಗ್ ಆರಂಭಿಸಿ ಮೂಡಿಗೆರೆ, ಚಿಕ್ಕಮಗಳೂರು ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ಮಾಡುತ್ತಿದ್ದೇವೆ ಎಂದರು.

ಸಿನಿಪದಬಂಧ–496



ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________

ವಿಜೇತರು: ನಂದಿನಿ ಸಿ. D/o ಸಿ.ಎಸ್.ಆರಾಧ್ಯ, ಅಗಸನಪುರ, ಮಳವಳ್ಳಿ (ತಾ.)571475

ಎಡದಿಂದ ಬಲಕ್ಕೆ

1. ಒಂಬತ್ತು ಇರುಳಿನ ಹಬ್ಬ! 4
2. ಎಷ್ಟೊಂದು ಸುಂದರ ನಮ್ಮ ಈ ಹಬ್ಬ! 6
4. ನವರಾತ್ರಿಯ ಎಂಟನೇ ದಿನಕ್ಕೆ ಮಹಾಲಕ್ಷ್ಮಿ ಅಭಿನಯವಿದೆ 4
6. ಕೆಆರ್‌ಎಸ್ ನೆನಪಾದರೆ ದರ್ಶನ್ ಚಿತ್ರ ಪ್ರತ್ಯಕ್ಷ! 4
7. ಅನಂತ್‌ನಾಗ್‌ನ ಸೊಬಗಿನ ರಾಜಗೃಹ 7
9. ನಕ್ಷತ್ರದಂತಿರುವ ನಟಿ 2
10. ಆನೆಯನ್ನು ಹೀಗೂ ಕರೆಯಿರಿ 2
12. _ _ _ _ ಕಂಠೀರವ 4
14. ನೈದಿಲೆಗೆ ಸಂಭ್ರಮವಾಗಲು ಮಧುಮಾಸದಲ್ಲಿ ಬಂದವನು 3
16. ನಗು ನಗುತಾ _ _ 2
18. ಶಶಿಕುಮಾರ್ ಹೇಳಿದಂತೆ ಅವರ ಕುಟುಂಬ ಸಂತೋಷದ ಕಡಲಂತೆ! 11



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 495ರ ಉತ್ತರ

ಬಂ	ಗಾ	ರ	ದ	ಜಿಂ	ಕೆ		ಪ್ರೇ	ಮಾ	ಯ	ಣ
ಧ		ವಿ			ವಿ		ಮ			
ಮು	ಗ್ಧ	ಮಾ	ನ	ವ		ಹೊ	ಸ	ಜೀ	ವ	ನ
ಕ್ತ		ಮ		ಚ			ದ			ಮ್ಮ
			ಕ	ನ	ಸು	ನ	ನ	ಸು		ಊ
ಅ	ಮ್ಮ								ತೇ	ರು
ಪ		ಕ	ನ	ಸಿ	ನ	ರಾ	ಣಿ			
ರಂ			ವ			ಕ್ಷ		ತ್ನ		ಗೃ
ಜೀ	ವ	ಕ್ಕೆ	ಜೀ	ವ		ಸ	ಮ	ರ	ಸಿಂ	ಹ
			ವ		ಕು			ಸ್ಯ		ಲ
ಸ	ಮ್ಮಿ	ಲ	ನ		ಲ	ಕ್ಷ್ಮೀ	ಮ	ಹಾ	ಲ	ಕ್ಷ್ಮೀ

ಮೇಲಿನಿಂದ ಕೆಳಕ್ಕೆ

1. ಶೈಲಾಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟ, ಕೂಷ್ಮಂಡ, ಸ್ಕಂದಮಾತಾ, ಕಾಳರಾತ್ರಿ, ಕಾತ್ಯಾಯಿನಿ, ಮಹಾಗೌರಿ ಮತ್ತು ಸಿದ್ಧಿಧಾತ್ರಿ 4
2 .ಬಿಎಸ್ ರಂಗಾ ನಿರ್ದೇಶನದಲ್ಲಿ ರಕ್ಕಸನನ್ನು ಕೊಂದ ದೇವಿಯ ಕತೆ 8
3. ಅರಸನನ್ನು ಆರತಿ ಹೀಗೆ ಕರೆಯಲು ಎ.ವಿ.ಶೇಷಗಿರಿರಾವ್ ನಿರ್ದೇಶಕ 6
5. ಹತ್ತನೇಯ ದಿನದ ಗೆಲುವಿನ ಹಬ್ಬ ಇಲ್ಲಿ ತಲೆಕೆಳಗು 6
7. ಆನೆಯ ಮೇಲೆ ಕಂಡ ಆಸನ 3
8. ಮೈಸೂರಿನ ಪ್ರೇಕ್ಷಣೆಯ ಸ್ಥಳಗಳನ್ನು ಹಾಡಿನಲ್ಲಿ ಕಣ್ಮುಂದೆ ತಂದ ಪ್ರೇಮ್ ಚಿತ್ರ 5
11. ರಾಕ್‌ಲೈನ್ ವೆಂಕಟೇಶ್ "ಪರಾಕ್ರಾಮಿ" ಇಲ್ಲಿ ತಲೆಕೆಳಗು 2
13.ಶ್ರೀಮುರಳಿ–ರಚಿತಾರಾಮ್ ಅಭಿನಯದ ಚಿತ್ರ 4
14. ಶ್ರೀಗಂಧದಂತಿರುವ ಕನ್ನಡದ ಚಾನೆಲ್ 3
15. ವೃಕ್ಷದ ನಡುವೆ ಬಂದ ದೊರೆ 3
17. ಯುವರಾಜ ಚಿತ್ರದ ನಾಯಕಿ ಇಲ್ಲಿ ರೇ ಕಳೆದುಕೊಂಡಿದ್ದಾಳೆ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಕಾರು ಡಿಕ್ಕಿ ಹೊಡೆದು ಬೈಕ್ ಸವಾರ ಸಾವು



ಹುಣಸೂರು, ಅ.19– ಕಾರು ಡಿಕ್ಕಿ ಹೊಡೆದು ಬೈಕ್ ಸವಾರ ಮೃತಪಟ್ಟಿರುವ ಘಟನೆ ನಗರದ ಆರ್‌ಟಿಓ ಕಚೇರಿ ಬಳಿಯ ಮೈಸೂರು–ಮಂಗಳೂರು ಹೆದ್ದಾರಿಯ ಬೈಪಾಸ್‌ನಲ್ಲಿ ನಡೆದಿದೆ.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದ ಪುರದ ಹಾಸಿಗೆ ರಿಪೇರಿಗಾರ ಅಬ್ದುಲ್ ಜಬ್ಬಾರ್(56) ಮೃತಪಟ್ಟಿದ್ದಾರೆ. ಈತ ಬೈಕ್‌ನಲ್ಲಿ ಮೈಸೂರಿನಿಂದ ಹಾಸಿಗೆ ಬಟ್ಟೆ ತೆಗೆದುಕೊಂಡು ಸ್ವಗ್ರಾಮ ಬೆಟ್ಟದಪುರಕ್ಕೆ ತೆರಳುತ್ತಿದ್ದರು. ಈ ವೇಳೆ ಪಿರಿಯಾಪಟ್ಟಣ ಕಡೆಯಿಂದ ಮೈಸೂರಿಗೆ ಹೋಗುತ್ತಿದ್ದ ಕಾರು ಆರ್‌ಟಿಓ ಕಚೇರಿ ಬಳಿಯ ಹೆದ್ದಾರಿ ಬೈಪಾಸ್‌ನಲ್ಲಿ ಡಿಕ್ಕಿ ಹೊಡೆದ ಪರಿಣಾಮ ಜಬ್ಬಾರ್‌ಗೆ ತೀವ್ರ ಪೆಟ್ಟು ಬಿದ್ದಿದೆ.

ಸ್ಥಳೀಯರು ತಕ್ಷಣ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮೃತಪಟ್ಟಿದ್ದಾರೆ. ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಹಿತಿಗಳ ಮಾತು ಸಮಾಜಕ್ಕೆ ಬೆಳಕಾಗಬೇಕು

ಗ್ರಾಮೀಣ ದಸರಾ ಕವಿಗೋಷ್ಠಿಯಲ್ಲಿ ಡಾ.ವೈ.ಡಿ.ರಾಜಣ್ಣ ಅಭಿಮತ



ಹೆಚ್.ಡಿ.ಕೋಟೆ, ಅ.19–ಗದ್ಯಕಿಂತ ಪದ್ಯ ಶ್ರೇಷ್ಠವಾದದ್ದು, ಆದ್ದರಿಂದ ಸಾಹಿತಿಗಳ ಮಾತು ಸಮಾಜಕ್ಕೆ ಬೆಳಕಾಗಬೇಕೆ ಹೊರತು ಬೆಂಕಿಯಾಗಬಾರದು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ನಿಕಟಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಅಭಿಪ್ರಾಯಪಟ್ಟರು.

ತಾಲೂಕಿನ ತುಂಬಸೋಗೆ ಗ್ರಾಮದ ಎಂಎಂಕೆ ಸ್ವತಂತ್ರ ಪದವಿಪೂರ್ವ ಕಾಲೇಜಿನಲ್ಲಿ ಗುರುವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಮತ್ತು ಎಂಎಂಕೆ ಕಾಲೇಜು ವತಿಯಿಂದ ಆಯೋಜಿಸಿದ್ದ ಗ್ರಾಮೀಣ ದಸರಾ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, 300 ಸಾಲಿನಲ್ಲಿ ಹೇಳುವ ಗದ್ಯವನ್ನು ಮೂರೇ ಸಾಲಿನಲ್ಲಿ ಹೇಳುವುದು ಕವಿತೆ. ಕವಿತೆಗಳಿಗೆ ತನ್ನದೆ ತೂಕ ಹಾಗೂ ಗೌರವವಿದೆ. ಆದ್ದರಿಂದ ಬರವಣಿಗೆಗಾರರು ಸಾಮಾಜಿಕ ಹೊಣೆಗಾರಿಕೆಯಿಂದ ಬರೆದು ಮಾತನಾಡಬೇಕು ಎಂದು ಹೇಳಿದರು.

ಸಾಮಾಜಿಕ ಆತಂಕ, ಸಂಘರ್ಷ, ಸಮಸ್ಯೆಗಳ ನಡುವೆ ಕವಿತೆಗಳು ಸಮಾಜಕ್ಕೆ ಬೆಳಕು ಚೆಲ್ಲುವಂತಿರಬೇಕು. ಕವಿ ಅಥವಾ ಸಾಹಿತಿಯಾದವರು ಹಿಂದಿನ ಕವಿಪುಂಗವರ ಬಗ್ಗೆ ಹೆಚ್ಚು ಅಧ್ಯಯನ ಮಾಡಿ ಕವಿ ಪರಂಪರೆಯನ್ನು ಉಳಿಸಬೇಕಾಗಿದೆ. ಕವಿ ಸಮಾಜವನ್ನು ತಿದ್ದುವ ಬೆಳಕಾಗುವ ವ್ಯಕ್ತಿಯಾಗಬೇಕೇ ವಿನಃ ಸಮಾಜವನ್ನು ಕೆರಳಿಸುವ ಹಾಗೂ ಒಡೆಯುವ ಕೆಲಸ ಮಾಡಬಾರದು.

ಎಚ್.ಡಿ.ಕೋಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ 6–7 ವರ್ಷಗಳಿಂದ ತಾಲೂಕು ಮಟ್ಟದಲ್ಲಿ ಉತ್ತಮವಾಗಿ ಕವಿಗೋಷ್ಠಿಯನ್ನು ಏರ್ಪಡಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಡಾ.ಎಸ್.ಪುಟ್ಟಪ್ಪ ಮುಡಿಗುಂಡ ಮಾತನಾಡಿ, ಒಬ್ಬ ಶ್ರೇಷ್ಠ ಕವಿಯಾಗಲು ನೂರಾರು ಕವಿತೆಗಳನ್ನು ಓದಿ ಅಧ್ಯಯನ ಮಾಡಬೇಕು. ಹಿಂದಿನ ಕವಿಪುಂಗವರು ಹೇಳಿದ್ದನ್ನು ಓದಬೇಕು. ಯುಗ ಯುಗಾಂತರದ ವಿಚಾರಗಳನ್ನು ಮುಂದಿನ ಪೀಳಿಗೆಗಳಿಗೆ ತಿಳಿಸುವುದರಲ್ಲಿ ಕವಿತೆಗಳ ಮಹತ್ವ ದೊಡ್ಡದು ಎಂದರು.

ಇದೇ ವೇಳೆ ಡಾ.ಕಿರಣ್ ಸಿಡ್ಲೇಹಳ್ಳಿ, ಉಪನ್ಯಾಸಕ ಕಾಳೇಗೌಡ, ಕೆ.ರಮೇಶ್, ಎಂ.ಕುಮಾರಿ, ಬಾಲಸುಬ್ರಹ್ಮಣ್ಯ, ತೆರಣಿ ಮಂಟಿ ಭಾಸ್ಕರ್, ಶಿವಕುಮಾರ್, ಎಸ್.ಎಸ್. ಮಹದೇವಯ್ಯ, ಹೇಮಪ್ರಿಯಾ, ವೈಷ್ಣವಿ, ಸಂಜಯ್ ಅವರು 'ಕಾವೇರಿ ನೀ ಹುಟ್ಟಿದೆ ಬ್ರಹ್ಮಗಿರಿಯಲ್ಲಿ ತುಸು ಕಾಲ ಕನ್ನಡಿಗರ ಎದೆಯಲ್ಲಿ, ಎಲ್ಲಾ ಬಂಧವಾ ಬಿಟ್ಟು ಹೋಗು, ನಾಲ್ಕು ದಿನದ ಬದುಕಲ್ಲಿ, ಅಪ್ಪನ ಅಳುವು ಯಾರಿಗೂ ಗೊತ್ತಾಗದ ಹಾಗೆ, ಯುದ್ಧ ಯುದ್ಧ ಯಾಕಾಗಿ ಸಾಲು ಸಾಲು ಯುದ್ಧ ಎಂಬ ಕವಿತೆ. ಓದಬೇಕು ನೀ ಓದಬೇಕು ಅತ್ತಿತ್ತ ಗಮನಹರಿಸದೆ ಓದಬೇಕು. ಪಾಮರರಲ್ಲೆ ಪಾಮರಳು ನಾನು, ಮುಳುಗಡೆ ಮುಳುಗಡೆ, ಊರು ಬಿಟ್ಟು ನಡೆ, ಕನ್ನಡ ನಾಡು–ನುಡಿ, ಮೈಸೂರು ದಸರಾ ಹಾಗೂ ಡಾ.ಶಿವಕುಮಾರ ಸ್ವಾಮೀಜಿ ಕುರಿತು ಕವನ ವಾಚಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ, ಎಂಎಂಕೆ ಸ್ವತಂತ್ರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಎಸ್.ಪಿ.ಪ್ರಕಾಶ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಎಸ್.ಮಹದೇವು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಂಟಿ ಕಾರ್ಯದರ್ಶಿ ಕೆ.ಕೆಂಪಣ್ಣ, ಗೌರವ ಕಾರ್ಯದರ್ಶಿ ಗಿರೀಶ್ ಮೂರ್ತಿ, ಮಹದೇವಮ್ಮ ಮುಂತಾದವರು ಹಾಜರಿದ್ದರು.

ತನ್ನ ಮಗುವನ್ನೇ ಕೆರೆಗೆ ಎಸೆದ ಅಪ್ಪ

ಪಿರಿಯಾಪಟ್ಟಣ, ಅ.19– ತಾಲೂಕಿನ ಮಾಕೋಡು ಗ್ರಾಮದಲ್ಲಿ ತಂದೆಯೇ ತನ್ನ ಗಂಡು ಮಗುವನ್ನು ಕೆರೆಗೆ ಎಸೆದು ಕೊಲೆ ಮಾಡಿರುವ ಘಟನೆ ನಡೆದಿದೆ.

ಗ್ರಾಮದ ಗಣೇಶ್ ತನ್ನ ಒಂದೂವರೆ ವರ್ಷದ ಗಂಡು ಮಗುವನ್ನು ಅ.15ರಂದು ಕೊಂದುಹಾಕಿದ್ದಾನೆ. ಆರೋಪಿ ಗಣೇಶ್‌ನನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಈತ 2014ರಲ್ಲಿ ಬೆಂಗಳೂರಿನ ದೇವನಹಳ್ಳಿ ತಾಲೂಕಿನ ದಿಡ್ಡಸನ್ನೆ ಗ್ರಾಮದ ನಾರಾಯಣಸ್ವಾಮಿ ಅವರ ಪುತ್ರಿ ಲಕ್ಷ್ಮೀಯನ್ನು ವಿವಾಹವಾಗಿದ್ದ. ನಂತರ ದೇವನಹಳ್ಳಿಯಲ್ಲೇ ವಾಸವಾಗಿದ್ದ. ಈ ದಂಪತಿಗೆ ಹಾರಿಕಾ ಮತ್ತು ದೀಕ್ಷಾ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಮೂರನೇ ಹೆರಿಗೆ ವೇಳೆ ಪತ್ನಿ ಲಕ್ಷ್ಮೀ ಗಂಡು ಮಗುವಿಗೆ ಜನ್ಮ ನೀಡಿ ಮೃತಪಟ್ಟಿದ್ದರು.

ಬಳಿಕ ಗಣೇಶ್ ಇಬ್ಬರು ಹೆಣ್ಣು ಮಕ್ಕಳನ್ನು ಅತ್ತೆ–ಮಾವನೊಂದಿಗೆ ಬಿಟ್ಟು ಸ್ವಗ್ರಾಮ ಮಾಕೋಡು ಗ್ರಾಮದಲ್ಲಿ ಮಗನೊಂದಿಗೆ ವಾಸವಾಗಿದ್ದ. ಆದರೆ, ಮಗುವನ್ನು ನನ್ನ ತಾಯಿ ಹಾಗೂ ಅತ್ತೆ ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಹಾಗೂ ಮಗು ಸದಾ ಅಳುತ್ತಿದ್ದರಿಂದ ಬೇಸತ್ತು ಕೆರೆಗೆ ಎಸೆದು ಕೊಲೆ ಮಾಡಿರುವುದಾಗಿ ಆರೋಪಿ ಗಣೇಶ್ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಅನೇಕ ಬಾರಿ ನಮಗೆ ಮೊಮ್ಮಗನನ್ನು ವಾಪಸ್ ನೀಡುವಂತೆ ಕೇಳಿಕೊಂಡರೂ ನಮಗೆ ನೀಡಲಿಲ್ಲ ಎಂದು ಅತ್ತೆ ಅಂಜನಮ್ಮ ಪಿರಿಯಾಪಟ್ಟಣ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಸಂಬಂಧ ಪಿರಿಯಾಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾರ್ ತೆರೆಯದಂತೆ ಮನವಿ ಸಲ್ಲಿಕೆ



ನಂಜನಗೂಡು, ಅ.19–ನಗರದ ಗುಂಡ್ಲುಪೇಟೆ ಮುಖ್ಯರಸ್ತೆಯ ಬಸವೇಶ್ವರ ವೃತ್ತದಲ್ಲಿ ಜೆಎಸ್‌ಎಸ್ ಕಾಲೇಜು ಹಾಗೂ ಶರಣ ಸಂಗಮ ಮಠಕ್ಕೆ ತೆರಳುವ ಹಾದಿಯಲ್ಲಿ ಬಾರ್ ಆ್ಯಂಡ್ ರೆಸ್ಟೋರೆಂಟ್ ಪ್ರಾರಂಭಿಸಲು ಸಿದ್ಧತೆ ನಡೆದಿದ್ದು, ಬಾರ್ ಆರಂಭಿಸದಂತೆ ಅಬಕಾರಿ ಇಲಾಖೆಗೆ ಸೂಚಿಸುವಂತೆ ಕರ್ನಾಟಕ ಪ್ರತಿಧ್ವನಿ ವೇದಿಕೆ, ವೀರಶೈವ ವಿವಿಧ ಸಂಘಟನೆಗಳು ಹಾಗೂ ದೇವೀರಮ್ಮನಹಳ್ಳಿ ಗ್ರಾಮಸ್ಥರು ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಮನವಿ ಸಲ್ಲಿಸಿದರು.

ತಾಲೂಕು ಮಟ್ಟದಲ್ಲಿ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಸರ್ಕಾರಿ ಪದವಿ ಕಾಲೇಜು ಹಾಗೂ ನ್ಯಾಕ್ ಮಾನ್ಯತೆ ಪಡೆದಿರುವ ಜೆಎಸ್‌ಎಸ್ ಪದವಿ ಕಾಲೇಜು ಸೇರಿದಂತೆ ಶರಣ ಸಂಗಮ ಮಠಕ್ಕೆ ಹೋಗಲು ಬಸವೇಶ್ವರ ವೃತ್ತದಲ್ಲಿ ರಸ್ತೆಯಿದ್ದು, ಈ ವೃತ್ತದಲ್ಲಿ ಬಾರ್ ಆ್ಯಂಡ್ ರೆಸ್ಟೋರೆಂಟ್ ತೆರೆಯಲು ಸಿದ್ಧತೆ ನಡೆಸಲಾಗಿದೆ. ಇದರಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಸ್ಥಳೀಯರಿಗೆ ತೊಂದರೆಯಾಗಲಿದೆ. ಆದ್ದರಿಂದ ಇಲ್ಲಿ ಬಾರ್ ತೆರೆಯದಂತೆ ಅಬಕಾರಿ ಇಲಾಖೆಗೆ ಸೂಚಿಸುವಂತೆ ಮನವಿಯಲ್ಲಿ ಒತ್ತಾಯಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಶಾಸಕರು, ಬಸವೇಶ್ವರ ವೃತ್ತದಲ್ಲಿ ಬಾರ್ ತೆರೆಯಲು ಅನುಮತಿ ನೀಡದಂತೆ ಅಬಕಾರಿ ಅಧಿಕಾರಿಗಳಿಗೆ ನಿರ್ದೇಶನ ನೀಡುವುದಾಗಿ ಭರವಸೆ ನೀಡಿದರು. ಈ ಸಂದರ್ಭ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಪ್ರತಿಧ್ವನಿ ವೇದಿಕೆ ಅಧ್ಯಕ್ಷ ತ್ರಿನೇಶ್, ಕೆ.ಗುರುಸಿದ್ಧಪ್ಪ, ಟಿಎಪಿಸಿಎಂಎಸ್ ನಿರ್ದೇಶಕಿ ಮಂಜುಳಾ ಮಧು, ನಂದಿನಿ ಮಹೇಶ್, ಕೋಮಲಾ ಮತ್ತಿತರರು ಹಾಜರಿದ್ದರು.

ಸಮಸ್ಯೆ ಪರಿಹಾರಕ್ಕೆ ಜನಸಂಪರ್ಕ ಸಭೆ ಮುಖ್ಯ



ಮಲ್ಕುಂಡಿ, ಅ.19–ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ಬಗೆಹರಿಸಲು ಜನಸಂಪರ್ಕ ಸಭೆ ಮುಖ್ಯವಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ಸಮೀಪದ ದುಗ್ಗಹಳ್ಳಿ ಗ್ರಾಪಂ ವ್ಯಾಪ್ತಿಯ ಕಾರ್ಯ, ಮಾದಪುರ, ಎಂ.ಕೊಂಗಳ್ಳಿ, ಶೆಟ್ಟಹಳ್ಳಿ, ಕಗ್ಗಲೂರು, ಯಾಲ್ಲಹಳ್ಳಿ, ಗ್ರಾಮಗಳಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ದುಗ್ಗಹಳ್ಳಿ ಗ್ರಾಮದಲ್ಲಿ ಹಲವು ಸಮಸ್ಯೆಗಳು ಇವೆ. ಇವುಗಳನ್ನು ಹಂತ ಹಂತವಾಗಿ ಬಗೆಹರಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ನನ್ನ ತಂದೆ ದಿ.ಧ್ರುವನಾರಾಯಣ್ ಈ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಬಹಳ ಕನಸು ಕಂಡಿದ್ದರು. ಅವರ ಕನಸನ್ನು ನನಸು ಮಾಡುವ ಜವಾಬ್ದಾರಿ ನನ್ನ ಮೇಲಿದೆ. ಅವರಂತೆ ನಾನು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಗ್ರಾಪಂ ಅಧ್ಯಕ್ಷ ಶಿವನಾಗಪ್ಪ ಮಾತನಾಡಿ, ಗ್ರಾಮದಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು, ಜನರಿಗೆ ಓಡಾಡಲು ತುಂಬಾ ತೊಂದರೆಯಾಗಿದೆ. ಜಲಜೀವನ್ ಯೋಜನೆಯ ಕಾಮಗಾರಿಗಾಗಿ ರಸ್ತೆಗಳನ್ನು ಹಾಳುಮಾಡುತ್ತಿದ್ದಾರೆ. ಗ್ರಾಮಕ್ಕೆ ಹೆಚ್ಚಿನ ಮೂಲಸೌಕರ್ಯ ಒದಗಿಸಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಗ್ರಾಪಂ ಉಪಾಧ್ಯಕ್ಷೆ ಪದ್ಮಾ, ಸದಸ್ಯೆ ಸುಮಲಾಂಬಿಕಾ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ತಹಶೀಲ್ದಾರ್ ಶಿವಕುಮಾರ್, ತಾಪಂ ಇಓ ರಾಜೇಶ್, ಉಪ ತಹಶೀಲ್ದಾರ್ ಶಿವಕುಮಾರ್, ಪಿಡಿಓ ಜ್ಯೋತಿ, ತಾಲೂಕು ಆಡಳಿತ ಅಧಿಕಾರಿಗಳು ಹಾಜರಿದ್ದರು.

ಹೆಜ್ಜೇನು ದಾಳಿಗೆ ರೈತ ಬಲಿ



ಹುಣಸೂರು, ಅ.19– ಹೆಜ್ಜೇನು ದಾಳಿಯಿಂದ ತೀವ್ರವಾಗಿ ಅಸ್ವಸ್ಥಗೊಂಡು ರೈತನೋರ್ವ ಮೃತಪಟ್ಟಿರುವ ಘಟನೆ ಗುರುವಾರ ತಾಲೂಕಿನ ತಟ್ಟೆಕೆರೆ ಗೇಟ್ (ಹೊಸಕೋಟೆ)ಯಲ್ಲಿ ನಡೆದಿದೆ.

ಗ್ರಾಮದ ಲೇ.ಶ್ರೀನಿವಾಸ್ ಅವರ ಮಗ ಲಕ್ಷ್ಮಣ್(58) ಮೃತ ರೈತ. ಈತ ಮನೆ ಬಳಿಯ ಜಮೀನಿನ ಮರದಲ್ಲಿ ಮೇಕೆಗೆ ಸೊಪ್ಪು ಕೀಳುತ್ತಿದ್ದ ವೇಳೆ ಜೇನು ಹುಳುಗಳು ದಾಳಿ ನಡೆಸಿವೆ. ಇದರಿಂದ ತೀವ್ರ ಅಸ್ವಸ್ಥಗೊಂಡಿದ್ದ ಈತನನ್ನು ತಕ್ಷಣ ಹುಣಸೂರಿನ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿತ್ತಾದರೂ ಮೃತಪಟ್ಟಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ರಾಜ್ಯಮಟ್ಟಕ್ಕೆ ಬೆಣಗಾಲು ಶಾಲೆ ವಿದ್ಯಾರ್ಥಿಗಳು ಆಯ್ಕೆ



ಬೆಟ್ಟದಪುರ, ಅ.19–ಪಿರಿಯಾಪಟ್ಟಣ ತಾಲೂಕಿನ ಬೆಣಗಾಲು ಪ್ರೌಢಶಾಲೆಯ ವಿದ್ಯಾರ್ಥಿಗಳು ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಚಾಮರಾಜನಗರದ ಜೆಎಸ್‌ಎಸ್ ಕಾಲೇಜು ಮೈದಾನದಲ್ಲಿ ಅ.16 ಮತ್ತು 17 ರಂದು ನಡೆದ ಪ್ರೌಢಶಾಲೆಯ ವಿಭಾಗ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಬೆಣಗಾಲು ಪ್ರೌಢಶಾಲೆ ತಂಡ ಪ್ರಥಮ ಸ್ಥಾನ ಗಳಿಸಿ, ರಾಜ್ಯಮಟ್ಟಕ್ಕೆ ಆಯ್ಕೆಯಾಗಿದೆ. ಶಾಸಕರಾದ ಪುಟ್ಟರಂಗಶೆಟ್ಟಿ, ಗಣೇಶ ಪ್ರಸಾದ್, ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ಡಿಡಿಪಿಐ ರಾಮಚಂದ್ರ ರಾಜೇ ಅರಸ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಶಂಕರ್ ಪ್ರಶಸ್ತಿ ನೀಡಿದರು.

ತಂಡದ ಆಟಗಾರರಾದ ಕೆ.ವಿ.ಕೇಶವ, ರವಿಕಿರಣ್, ಬಿ.ಆರ್.ಅಣ್ಣಯ್ಯ, ನಿತಿನ್ ಕುಮಾರ್, ಪ್ರಶಾಂತ್ ಅವರನ್ನು ತರಬೇತುದಾರ ಎಂ.ವಿ.ಸ್ವಾಮಿ, ವ್ಯವಸ್ಥಾಪಕ ಹೆಚ್.ಕೆ.ಮಹೇಶ್, ಇ.ಸುಲೇಮಾನ್, ಮುಖ್ಯ ಶಿಕ್ಷಕಿ ಹೆಚ್.ಬಿ.ನೂರುಲ್ಲಾ, ಸಹಶಿಕ್ಷಕರು, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಅಭಿನಂದಿಸಿದ್ದಾರೆ.



ತಿ.ನರಸೀಪುರ ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಹಾಗೂ ಕಾಂಗ್ರೆಸ್ ಹಿರಿಯಮುಖಂಡ ಪಿ.ಪುಟ್ಟರಾಜು ಅವರಿಗೆ ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಶ್ರದ್ಧಾಂಜಲಿ ಸಲ್ಲಿಸಿ, ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಶ್ರೀನಿವಾಸ್, ಶಂಕರ್, ಮಾದು, ಸಿದ್ದಪ್ಪ, ರಮೇಶ್, ಲಕ್ಷ್ಮಣ, ವಿಚಾರವಾದಿ ಕೆ.ಎನ್. ಪ್ರಭುಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ತೋಟದಪ್ಪ ಬಸವರಾಜು, ಶಿವಕುಮಾರ್ ಇದ್ದರು.

ಸರಗೂರಿನಲ್ಲಿ ಡೆಂಘಿ ರಥ ವಾಹನಕ್ಕೆ ಚಾಲನೆ



ಸರಗೂರು: ಪಟ್ಟಣದಲ್ಲಿ ಡೆಂಘಿ ರಥ ವಾಹನಕ್ಕೆ ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್ ಮತ್ತು ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಚಾಲನೆ ನೀಡಿದರು.

ನಂತರ ಮಾತನಾಡಿದ ಡಾ.ಟಿ.ರವಿಕುಮಾರ್, ಮೈಸೂರು ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಡೆಂಘಿ ರಥ ವಾಹನ ಸಂಚರಿಸಿ ಡೆಂಘಿ ಜ್ವರದ ಬಗ್ಗೆ ಅರಿವು ಮೂಡಿಸಲಿದೆ. ಮಳೆಗಾಲದಲ್ಲಿ ಸೊಳ್ಳೆಗಳ ಉತ್ಪತ್ತಿ ಜಾಸ್ತಿಯಾಗಿ ಡೆಂಘಿ, ಚಿಕೂನ್ ಗುನ್ಯಾ, ಮಲೇರಿಯಾ, ಆನೆಕಾಲು ರೋಗ, ಮೆದುಳು ಜ್ವರ ಹರಡಲಿವೆ. ಆದ್ದರಿಂದ ರೋಗ ಲಕ್ಷಣಗಳು ಮತ್ತು ತಡೆಗಟ್ಟುವಿಕೆ ಬಗ್ಗೆ ಜನರಿಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ಇದೇ ವೇಳೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಡೆಂಘಿ ರಥ ವಾಹನ ಸಂಚರಿಸಿ, ನಂತರ ಸಾಗರೆ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಹಳ್ಳಿಗಳಿಗೆ ತೆರಳಿತು. ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಉಮಾ ರಾಮಚಂದ್ರ, ವೈದ್ಯಾಧಿಕಾರಿ ಡಾ.ಪಾರ್ಥಸಾರಥಿ, ಪಪಂ ಸದಸ್ಯರಾದ ಶಿವಕುಮಾರ್, ದಿವ್ಯ ನವೀನ್ ಕುಮಾರ್, ನೂರಾಳ ಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ದೇವಲಾಪುರ ಸಿದ್ದರಾಜು, ಆರೋಗ್ಯ ಸಿಬ್ಬಂದಿ ಜಯರಾಮು, ನಾಗೇಂದ್ರ ರವಿರಾಜ್, ಸರಳಾ, ಜಗದೀಶ್, ಶಾಂತಿ, ಮಾನಸ, ಸಹನಾ ಹಾಜರಿದ್ದರು.

ಕೆ.ಪಿ.ಸಂಸ್ಕೃತಿಗೆ ಪಿಹೆಚ್.ಡಿ



ಮೈಸೂರು: ಡಾ. ಕೆ.ಎಸ್.ರಂಗಪ್ಪ ಅವರ ಮಾರ್ಗದರ್ಶನದಲ್ಲಿ ಕೆ.ಪಿ. ಸಂಸ್ಕೃತಿ ಅವರು ರಸಾಯನ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಬೆಟ್ಟದ ತಪ್ಪಲಿನ ದೇವಿವನದ ಮುಖ್ಯ ದ್ವಾರವನ್ನು ಅರಣ್ಯ ಇಲಾಖೆ ವತಿಯಿಂದ ಸುಂದರವಾಗಿ ನಿರ್ಮಿಸಿರುವುದು.

ಮಕ್ಕಳು ಧಮ್ಮ ಮಾರ್ಗದಲ್ಲಿ ಸಾಗಬೇಕು



ನಂಜನಗೂಡು, ಅ.19– ಇಂದಿನ ಮಕ್ಕಳು ಬುದ್ಧನ ಶಾಂತಿ ಹಾಗೂ ಧಮ್ಮ ಮಾರ್ಗದಲ್ಲಿ ಸಾಗಿ ಉತ್ತಮ ವ್ಯಕ್ತಿತ್ವ ಮೈಗೂಡಿಸಿಕೊಳ್ಳಬೇಕು ಎಂದು ಬುದ್ಧ ವಿಹಾರದ ಭಿಕ್ಕು ಗೌತಮ ಬಂತೇಜಿ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಛಲವಾದಿ ಮಹಾಸಭಾ ವತಿಯಿಂದ ಮಕ್ಕಳಿಗೆ ಆಯೋಜಿಸಿದ್ದ 'ಧಮ್ಮದ ಬೆಳಕಿನಲ್ಲಿ ಅಂಬೇಡ್ಕರ್ ಅರಿವು' ವಿಚಾರ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರ ಸಮಾನತೆಯ ಹಾದಿಯಲ್ಲಿ ಸಾಗುವ ಮೂಲಕ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು. ನಮ್ಮೊಳಗಿನ ತೊಳಲಾಟ, ತಾಕಲಾಟಗಳಿಗೆ ನಮ್ಮಲ್ಲಿಯೇ ಪರಿಹಾರವಿದೆ ಎಂಬ ವೈಜ್ಞಾನಿಕ ಸತ್ಯವನ್ನು ಬುದ್ಧ ಜಗತ್ತಿಗೆ ಸಾರಿದ್ದಾರೆ. ಸರಳ ಹಾಗೂ ಸುಂದರ ಮಾರ್ಗಗಳನ್ನು ಜಗತ್ತಿಗೆ ಬೋಧಿಸಿದ ಅವರು, ಧ್ಯಾನ ಮಾರ್ಗವನ್ನು ಅನುಸರಿಸುವ ಮೂಲಕ ನಮ್ಮನ್ನು ನಾವು ಮೊದಲು ಮನಗಾಣಬೇಕು. ಆಗ ಜಗತ್ತು ಏನೆಂಬ ಅರಿವಾಗುತ್ತದೆ ಎಂದು ಹೇಳಿದರು.

ನಮ್ಮ ವ್ಯಕ್ತಿತ್ವವನ್ನು ಸುಂದರಗೊಳಿಸಿಕೊಂಡು ಅಂಬೇಡ್ಕರ್ ಹಾಕಿಕೊಟ್ಟ ಸಮಾನತೆ, ಭಾವೈಕ್ಯತೆ, ಸಹಬಾಳ್ವೆ, ಭ್ರಾತೃತ್ವದ ನೆರಳಿನಲ್ಲಿ ಜೀವನ ರೂಪಿಸಿಕೊಂಡಾಗ ಬದುಕು ಪರಿಪೂರ್ಣಗೊಳ್ಳುತ್ತದೆ. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಮುಖ್ಯವಾಹಿನಿಗೆ ಬರಬೇಕೆನ್ನುವ ಅಂಬೇಡ್ಕರ್ ಆಶಯ ಸಾಕಾರಗೊಳ್ಳಬೇಕಾದರೆ, ಪ್ರತಿಯೊಬ್ಬರಿಗೂ ಉತ್ತಮ ಶಿಕ್ಷಣ ನೀಡಬೇಕು ಎಂದರು.

ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ಅಭಿನಾಗಭೂಷಣ್ ಮಾತನಾಡಿ, ಇಂದಿನ ಮಕ್ಕಳಿಗೆ ಶಿಕ್ಷಣದ ಜತೆಗೆ ಬುದ್ಧ ಬೋಧಿಸಿದ ಜೀವನ ಕ್ರಮವನ್ನು ಮನನ ಮಾಡುವ ನಿಟ್ಟಿನಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಛಲವಾದಿ ಮಹಾಸಭಾ ತಾಲೂಕು ಅಧ್ಯಕ್ಷ ದೇವರಸನಹಳ್ಳಿ ಉಮೇಶ್, ಉಪಾಧ್ಯಕ್ಷ ಬದನವಾಳು ಪ್ರಶಾಂತ್, ದಸಂಸ ತಾಲೂಕು ಸಂಚಾಲಕ ಶಂಕರಪುರ ಸುರೇಶ್, ಕೂಡ್ಲಾಪುರ ವಾಸುದೇವಮೂರ್ತಿ ಇತರರಿದ್ದರು.

ಅಪರಿಚಿತ ಶವ ಪತ್ತೆ

ನಂಜನಗೂಡು: ತಾಲೂಕಿನ ಗೋಳೂರು ಗ್ರಾಮದ ಪಂಪ್‌ಹೌಸ್ ಬಳಿಯ ಕಪಿಲಾ ನದಿಯಲ್ಲಿ ಬುಧವಾರ ಸಂಜೆ ಅಪರಿಚಿತ ಶವ ಪತ್ತೆಯಾಗಿದೆ.

ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಮೃತಪಟ್ಟಿರಬಹುದು ಎಂದು ಮೇಲ್ನೋಟಕ್ಕೆ ತಿಳಿದು ಬಂದಿದೆ. ಮೃತ ವ್ಯಕ್ತಿಗೆ ಸುಮಾರು 40 ರಿಂದ 45 ವರ್ಷವಾಗಿದ್ದು, ಕಪ್ಪು ಮೈ ಬಣ್ಣ, ದುಂಡುಮುಖ, ಕಪ್ಪು ಬಿಳಿ ಮಿಶ್ರಿತ ತಲೆ ಕೂದಲು, ಗಡ್ಡ ಮೀಸೆ ಇದೆ. ಕತ್ತು ಹಾಗೂ ಬಲಗೈನಲ್ಲಿ ಕಪ್ಪುದಾರವಿದೆ.

ಶವವನ್ನು ನಂಜನಗೂಡು ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿದೆ. ವಾರಸುದಾರರು ಇದ್ದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದು ಎಂದು ಇನ್ಸ್‌ಪೆಕ್ಟರ್ ಸುನೀಲ್‌ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಣಪತ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಿಯೋ (ತ)	4 ಪ್ರದರ್ಶನಗಳು
ಗಾಯಿತ್ರಿ	
ಘೋಸ್ಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವಂತ್ ಕೇಸರಿ (ತೆ)	4 ಪ್ರದರ್ಶನಗಳು
ಸಂಗಂ	
ಲಿಯೋ (ಕ)	3 ಪ್ರದರ್ಶನಗಳು
ಲಿಯೋ (ತ)	1 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಣಪತ್ (ಹಿ)	4 ಪ್ರದರ್ಶನಗಳು
ಪ್ರಭಾ	
ಟೈಗರ್ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಿಯೋ (ತ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ಘೋಸ್ಟ್ (ಕ): ಮ.1.10ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ದಸರಾ ಚಿತ್ರಗಳು: ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ಗಣಪತ್ (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ಯಾರಿಯನ್ 2 (ಹಿಂ): ಬೆ.10.05ಕ್ಕೆ, ಗಣಪತ್ (ಹಿಂ): ಮ.1ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಮ.3.35ಕ್ಕೆ, ರಾ.7ಕ್ಕೆ, ಭಗವಂತ್ ಕೇಸರಿ (ತೆ): ರಾ.10.25ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.15ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, ಲಿಯೋ (ತ): ಮ.1ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಲಿಯೋ (ತ): ಬೆ.9.35ಕ್ಕೆ, ಮ.3.55ಕ್ಕೆ, ಘೋಸ್ಟ್ (ಕ): ಮ.1ಕ್ಕೆ, ರಾ.7.20ಕ್ಕೆ, ಗಣಪತ್ (ಹಿಂ): ರಾ.10.15ಕ್ಕೆ.
ಸ್ಕ್ರೀನ್ 2	ಲಿಯೋ (ತ): ರಾ.10.20ಕ್ಕೆ.
ಸ್ಕ್ರೀನ್ 3	ಭಗವಂತ್ ಕೇಸರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ಟೈಗರ್ ನಾಗೇಶ್ವರ್ ರಾವ್ (ತೆ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, ಗಣಪತ್ (ಹಿಂ): ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, ಘೋಸ್ಟ್ (ಕ): ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, ಲಿಯೋ (ಕ): ಮ.12.15ಕ್ಕೆ, ಲಿಯೋ (ತ): ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಲಿಯೋ (ತ): ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, ಯಾರಿಯನ್ 2 (ಹಿಂ): ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸುಗಳು





14ನೇ ದಿನ, ಶುಕ್ರವಾರ 20-10-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಸ್ಪೆಕ್ಟಾಕುಲರ್ ಕ್ವೆಸ್ಟ್ ಪ್ಲೇಟ್–1600 ಮೀ. ರೇಟೆಡ್ 40 ರಿಂದ 65. ಮ.2.00ಕ್ಕೆ
1. ಐರೀಶ್ ರಾಕ್ ಸ್ಟಾರ್ 2. ಫಿಯರ್‌ಲೆಸ್ ಜೊಯ್ 3. ಜಮಿನಿ

II. ಯಾದವಗಿರಿ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ಗಾಡ್ಸ್ ಪವರ್ 2. ದ ಅಟ್ಲಾಂಟಿಸ್ 3. ಅಗೆನೆಸ್ಟ್ ಆಲ್ ಆಡ್ಸ್

III. ಸುಂದರ್ ಬಾರ್ನ್ಸ್ ಪ್ಲೇಟ್ ಡಿ2–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಚಿರಾಗ್ 2. ಜೇರ್ಸಿಲೆಜೆಂಡ್ 3. ಸ್ಕೈ ಸ್ಟ್ರಾಮ್

IV. A.R.ಸುಬ್ರಮಣ್ಯ ರಾಜ್ ಅರಸ್ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ಪರ್ಗ. ಸಂ.3.30ಕ್ಕೆ
1. ಆಲ್ಡ್ ಗೇಟ್ 2. ಮಿಚಿಗನ್ ಮೆಲೋಡಿ 3. ಕಾಂಟ್ರಿಬ್ಯೂಟರ್

V. ಗೌರ್ನರ್ಸ್ ಕಪ್–2000 ಮೀ. 4 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಶಾಮ್‌ರಾಕ್ 2. ಶುಭಂಕರ್ 3. ಕುಶಾಕ್

VI. ಹಸ್ತಿನಾಪುರ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್). ಸಂ.4.30ಕ್ಕೆ
1 ಸೌಂಡ್ ಆಫ್ ಕ್ಯಾನನ್ಸ್ 2. ಮಾರ್ಕ್‌ಒನ್ 3. ಗಿನ್ ಟೋಕಿ

VII. ಸುಂದರ್ ಬಾರ್ನ್ಸ್ ಪ್ಲೇಟ್ ಡಿ1–1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಟ್ರೆಷರ್ ಚೆಸ್ಟ್ 2 ಸಿಂಯೋಲ್ 3. ಎಲ್‌ವೆ ಡೆನ್

ದಿನದ ಅತ್ಯುತ್ತಮ	: ಶಾಮ್‌ರಾಕ್
ಡಬ್ಬಲ್	: ಚಿರಾಗ್, ಆಲ್ಡ್ ಗೇಟ್
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್ ಸ್ಟರ್ ಪಿಜೆಸಿ

ಪಿ.ಟಿ.ರಾಜೇಶ್ವರಿಗೆ ಪಿಎಚ್‌ಡಿ ಪ್ರದಾನ



ಪಿರಿಯಾಪಟ್ಟಣ: ಪಟ್ಟಣದ ಪಿ.ಟಿ.ರಾಜೇಶ್ವರಿ ಅವರಿಗೆ ರೇವ ವಿಶ್ವವಿದ್ಯಾಲಯ ಪಿಎಚ್‌ಡಿ ಪ್ರದಾನ ಮಾಡಿದೆ. ಡಾ.ಬಿ.ಹರಿಣಿ ಮಾರ್ಗದರ್ಶನದಲ್ಲಿ ಅವರು ವಾಣಿಜ್ಯ ವಿಭಾಗದಲ್ಲಿ ಮಂಡಿಸಿದ implementation of green management practices and its impact on organizational performance of selected SMEs with special reference to Karnataka ಸಂಶೋಧನೆಗೆ ಪಿಎಚ್‌ಡಿ ಪದವಿ ಲಭಿಸಿದೆ. ಇತ್ತೀಚಿಗೆ ನಡೆದ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪ್ರದಾನ ಮಾಡಿದರು.



ಝಗಮಗಿಸುವ ಬೆಳಕಲ್ಲಿ ಮಿಂದಂತೆ ಕಾಣುತ್ತಿರುವ ಮೈಸೂರು ಅರಮನೆ, ಅದರ ಮುಂದಿನ ಚಾಮರಾಜ ಒಡೆಯರ್ ವೃತ್ತ



ದೀಪಾಲಂಕಾರದಲ್ಲಿ ಕಂಗೊಳಿಸುತ್ತಿರುವ ಪುರಭವನ, ದೊಡ್ಡಗಡಿಯಾರ ಸ್ಮಾರಕ; ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆಯ ಗೋಪುರ

ದಸರಾ ಮೆರವಣಿಗೆ, ಪಂಜಿನ ಕವಾಯತು ಉಪಸಮಿತಿ ಸಭೆ




ಮೈಸೂರು, ಅ.19–ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಗುರುವಾರ ದಸರಾ ಮೆರವಣಿಗೆ ಹಾಗೂ ಪಂಜಿನ ಕವಾಯತು ಉಪಸಮಿತಿ ಸಭೆ ನಡೆಯಿತು.

ಸಭೆಯಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಉಪ ಪೊಲೀಸ್ ಆಯುಕ್ತ ಮುತ್ತುರಾಜು, ಸಹಾಯಕ ಆಯುಕ್ತ ಶಾಂತಮಲ್ಲಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಸಮಿತಿಯ ಉಪಾಧ್ಯಕ್ಷ ದೊಡ್ಡಬಾಗಿಲು ಎಂ.ಮಲ್ಲಿಕಾರ್ಜುನಸ್ವಾಮಿ, ಸದಸ್ಯರಾದ ನರಸಿಂಹ ಮಾದನಾಯಕ, ಅನೂಪ್‌ಗೌಡ, ಹೊಸಪುರ ಮಲ್ಲು, ನಾಗೇಶ್, ಹಾಲಿನ ಮಹದೇವಪ್ಪ, ಮಲ್ಲಣ್ಣ, ಕನ್ನಳ್ಳಿ ಲಕ್ಷ್ಮಣ, ಮಹೇಶ್ ಪಿಳ್ಳೆ ಇತರರು ಹಾಜರಿದ್ದರು.

ಇದೇ ವೇಳೆ ಮಾತನಾಡಿದ ಪೊಲೀಸ್ ಆಯುಕ್ತ ಬಿ.ರಮೇಶ್, ದಸರಾ ಮೆರವಣಿಗೆ ಹಾಗೂ ಪಂಜಿನ ಕವಾಯತು ಉಪಸಮಿತಿಯಲ್ಲಿ ಅಧ್ಯಕ್ಷರು ಹಾಗೂ ಉಪಾಧ್ಯಕರನ್ನು ಒಳಗೊಂಡಂತೆ 54 ಸದಸ್ಯರಿದ್ದಾರೆ. ದಸರಾ ಉದ್ಘಾಟನೆ ಹಾಗೂ ಮೆರವಣಿಗೆಗೆ ಆಗಮಿಸುವ ಮುಖ್ಯಮಂತ್ರಿ, ಸಚಿವರು, ಶಾಸಕರು ಹಾಗೂ ಜನಪ್ರತಿನಿಧಿಗಳಿಗೆ ಸ್ವಾಗತ ಕೋರುವ ಮೂಲಕ ಯಶಸ್ವಿ ದಸರಾ ಆಚರಣೆಗೆ ಸಹಕರಿಸಬೇಕು. ಜತೆಗೆ ಪಂಜಿನ ಕವಾಯತಿಗೆ ಆಗಮಿಸುವ ರಾಜ್ಯಪಾಲರನ್ನು ಸ್ವಾಗತಿಸಬೇಕು. ಎಲ್ಲಾ ಸದಸ್ಯರು ಸಮವಸ್ತ್ರ ಧರಿಸುವ ಮೂಲಕ ಯಶಸ್ವಿ ದಸರಾಗೆ ಸಹಕರಿಸುವಂತೆ ಕೋರಿದರು.

ಉಪಸಮಿತಿಯ ಅಧ್ಯಕ್ಷ ಕೆ.ವಜ್ರೇಗೌಡ ಮಾತನಾಡಿ, ದಸರಾ ಮೆರವಣಿಗೆ ಹಾಗೂ ಪಂಜಿನ ಕವಾಯತು ಯಶಸ್ವಿಗೆ ಶ್ರಮಿಸಲಾಗುವುದು. ದಸರಾ ಕಾರ್ಯಕ್ರಮಗಳಿಗೆ ಪಾಸ್‌ಗಳನ್ನು ನೀಡುವಂತೆ ಪೊಲೀಸ್ ಆಯುಕ್ತ ರಿಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ನಮ್ಮ ಬಳಿ ಯಾವುದೇ ಪಾಸ್‌ಗಳು ಇಲ್ಲ. ಪಾಸ್‌ಗಳನ್ನು ಜಿಲ್ಲಾಧಿಕಾರಿ ನೀಡುತ್ತಾರೆ ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ. ಈ ಬಾರಿ ಉಪ ಸಮಿತಿಯವರು ತಮ್ಮ ಆಪ್ತರಿಗೆ ಪಾಸ್ ನೀಡುವುದು ಕಷ್ಟಕರವಾಗಿದೆ ಎಂದರು.

ಓಂ ಶಕ್ತಿ ದೇವಸ್ಥಾನದ ಬಂಗಾರು ಅಡಿಗಳಾರ್ ನಿಧನ



ಚೆನ್ನೈ, ಅ.19– ಶಕ್ತಿ ದೇವಾಲಯಗಳ ಗರ್ಭಗುಡಿಗೆ ಮಹಿಳೆಯರು ಪ್ರವೇಶಿಸಲು ಅವಕಾಶ ಮಾಡಿಕೊಡು ವಂತಹ ಕ್ರಾಂತಿಕಾರಿ ಸುಧಾರಣೆಗಳನ್ನು ತಂದಿದ್ದ ಮತ್ತು 'ಅಮ್ಮ' ಎಂದೇ ಖ್ಯಾತಿ ಪಡೆದಿದ್ದ ಆಧ್ಯಾತ್ಮಿಕ ಗುರು ಬಂಗಾರು ಅಡಿಗಳಾರ್ ಅವರು ಗುರುವಾರ ನಿಧನರಾಗಿದ್ದಾರೆ. 82 ವರ್ಷದ ಅಡಿಗಳಾರ್ ಅವರು ಚೆನ್ನೈ ಸಮೀಪದ ಮೇಲ್ಮರುವತ್ತೂರಿನ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಅಡಿಗಳಾರ್ ಅವರು ವಾಸ್ತವವಾಗಿ, ಮಹಿಳೆಯರು ಮುಟ್ಟಿನ ಸಮಯ ದಲ್ಲಿಯೂ ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸಲು ಅವಕಾಶ ನೀಡಿದ್ದರು. ಶಕ್ತಿ ಆರಾಧನೆಯ ಗುರುತಾಗಿ ಕೆಂಪು ವಸ್ತ್ರಗಳನ್ನು ಬಳಸುವ ಅವರ ಭಕ್ತರು ಅವರನ್ನು 'ಅಮ್ಮ' ಎಂದು ಪೂಜಿಸುತ್ತಾರೆ. ಅಡಿಗಳಾರ್ ಅವರು ಸ್ಥಾಪಿಸಿದ ಇಲ್ಲಿಗೆ ಸಮೀಪದ ಮೇಲ್ಮರುವತ್ತೂರು ದೇವಸ್ಥಾನ ರಾಷ್ಟ್ರಾದ್ಯಂತ ಜನಪ್ರಿಯವಾಗಿದೆ ಅವರಿಗೆ ದೊಡ್ಡ ಭಕ್ತ ಸಮೂಹವಿದೆ. ಅವರ ಆಧ್ಯಾತ್ಮಿಕ ಸೇವೆಯ ಗಮನಾರ್ಹ ವೈಶಿಷ್ಟ್ಯವೆಂದರೆ ಅವರು ನಿರ್ವಹಿಸುವ ದೇವಾಲಯಗಳ ಗರ್ಭಗುಡಿಗೆ ಮಹಿಳೆಯರ ಪ್ರವೇಶ ಮಾಡಿಸುವುದು. ಕೆಲವೆಡೆ ಮುಟ್ಟಿನ ಸಮಯದಲ್ಲಿ ಮಹಿಳೆಯರಿಗೆ ಭಾಗವಹಿಸಲು ಮತ್ತು ಪೂಜೆ ಮಾಡಲು ಅನುಮತಿಸಲಾಗಿದೆ.



PUBLIC NOTICE

My client Dr. G.S. Sunil Kumar, S/o Shivakumar D.G. intends to purchase the schedule property from its owner Sri K. Mahadevu @ Mahadeva S/o Kalaningaiah, aged about 63 years, residing at No. 7/6A, 1st Cross, 5th Main, Jayanagara, Chamaraja Mohalla, Mysore - 570014. If any persons/s who has claims any right, interest, or title of any nature or any lien, charge or enforceable right in relation to the schedule property or has any objection of any nature to the transaction should lodge or report such claims and for objections in writing with supporting documents to the undersigned within 7 (seven) days from the date of publication of this notice. In the event of no such claims or objections have received it will be presumed that no valid claims or objections subsists and my client would proceed to purchase the schedule property as if no such claim or objections exists or that they have been waived or abandoned.

SCHEDULE PROPERTY

All that piece and parcel of the Agricultural land bearing Sy No: 128/5, measuring 30 gunta, situated at Dadadahalli Village, Jayapura Hobli, Mysuru Taluk and Mysuru District and bounded on the East by: Road and Sy no 128/3. 128/2 land, West by: Ashraya Badavane houses, North by: Sy No. 128/1 and South by: Sy no 128/2,128/3.

Sd/- K.T. Vishnu / M. Shivarama
Advocates, No: 5, "Samrudhi", 3rd Stage, Revenue Layout, Hebbal, Mysore-16.
Mob: 9448788669

Mysore
Date: 19/10/2023

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ನಾಗವೇಣಿ ಪಿ. ಕೋಂ ಕೃಷ್ಣಪ್ಪ ಸುಮಾರು 41 ವರ್ಷ, ಮನೆ ನಂ.61, ಲೋಕ ನಾಯಕನಗರ, ಕೆಆರ್‌ಎಸ್ ಮುಖ್ಯರಸ್ತೆ, ಮೈಸೂರು ಅವರು ಮೊಬೈಲ್ ನಂ. 9036101184, 9448922579. ಷೆಡ್ಯೂಲ್ ಸ್ವತ್ತಿನ ವಿವರವಾದ ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಹೆಬ್ಬಾಳ್ 1ನೇ ಹಂತದ 7ನೇ ಮುಖ್ಯರಸ್ತೆ, ನಿವೇಶನ ನಂ. 380 ಆದಕ್ಕೆ ಚಕ್ಕುಬಂದಿ:- ಪೂರ್ವಕ್ಕೆ ನಿವೇಶನ ಸಂಖ್ಯೆ : 381, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 379, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ಸಂಖ್ಯೆ 348 , 349

ಈ ಮಧ್ಯ ಇರುವ ಅಳತೆ ಪೂರ್ವ- ಪಶ್ಚಿಮ 12.00 ಮೀಟರ್‌ಗಳು, ದಕ್ಷಿಣೋತ್ತರ 18.00 ಮೀಟರ್‌ಗಳುಳ್ಳ ಸ್ವತ್ತಾಗಿರುತ್ತದೆ. ಸದರಿ ಸ್ವತ್ತನ್ನು ಶ್ರೀಮತಿ ಸುನಂದಮ್ಮ ರವರಿಂದ ಕ್ರಯಕ್ಕೆ ತೆಗೆದುಕೊಳ್ಳುತ್ತಿದ್ದು ಈ ಸ್ವತ್ತಿಗೆ ಸಂಬಂದಿಸಿದಂತೆ ಈ ಸ್ವತ್ತಿನ ಮೇಲೆ ಯಾರಿಗಾದರು ಹಕ್ಕು ಅಧಿಕಾರ ಇದ್ದಲ್ಲಿ ನಮ್ಮ ಕಕ್ಷಿದಾರರಿಗಾಗಲಿ ಅಥವಾ ನನ್ನ ಕಛೇರಿಗಾಗಲೀ ಖುದ್ದು ಬಂದು ಈ ಪ್ರಕಟಣೆಯಾದ 7 ದಿನಗಳೊಳಗಾಗಿ ಮಾಹಿತಿ ನೀಡುವುದು. ತಪ್ಪಿದ್ದಲ್ಲಿ ಸ್ವತ್ತಿನ ಮೇಲೆ ಯಾರಿಗೂ ಹಕ್ಕು ಅಧಿಕಾರ ಇಲ್ಲವೆಂದು ಪರಿಗಣಿಸಿ ಸದರಿ ಸ್ವತ್ತನ್ನು ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆದುಕೊಳ್ಳಲು ಕಾನೂನು ಬದ್ದರಾಗಿರುತ್ತಾರೆ.

ಮೋಹನ್ ರಾಜು, ವಕೀಲರು,
#2824, 1st A ಮುಖ್ಯರಸ್ತೆ, 8ನೇ ಕ್ರಾಸ್, ಜಯನಗರ, ಮೈಸೂರು- 570014, ಮೊ. 9844286155





6ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನೀವು ನಮ್ಮೆಲ್ಲರ ಮನಸ್ಸಿನಲ್ಲಿ ಹಸಿರಾಗಿರುತ್ತೀರಿ.

ಮಹದೇವಯ್ಯ ಎಸ್.
ರಿ.ಇಂಜಿನಿಯರ್

ದುಃಖತಪ್ತರು: ಪತ್ನಿ: ಸಾವಿತ್ರಮ್ಮ ಮಕ್ಕಳು, ಮೊಮ್ಮಕ್ಕಳು ಕುಟುಂಬವರ್ಗದವರು,

ಸಾರ್ವಜನಿಕರ ಗಮನಕ್ಕೆ

ಆದಾಗಿ, ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮದ ಸರ್ವೆ ನಂ. 12/1ರ ವಿಸ್ತೀರ್ಣ 36 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಸ್ವತ್ತಿನ ಮಾಲೀಕರಾದ ಶ್ರೀಮತಿ ಆಶಾ ಶಿವಪ್ರಕಾಶ್ ಹಾಗೂ ಅವರ ವಾರಸುದಾರರುಗಳ ವಿರುದ್ಧ ಈಗಾಗಲೇ ಮಾನ್ಯ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ: 612/2023ರ ರೀತ್ಯಾ ದಾವೆ ವಿಚಾರಣೆಗಾಗಿ ಬಾಕಿ ಇರುತ್ತದೆ.

ಆದುದರಿಂದ, ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ವ್ಯವಹಾರವನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಮುಂದುವರೆದು, ಈ ಪ್ರಕಟಣೆಯ ಹೊರತಾಗಿಯೂ ಯಾರಾದರೂ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ವ್ಯವಹಾರಗಳಲ್ಲಿ ತೊಡಗಿದಲ್ಲಿ ಮುಂದೆ ಅದರಿಂದ ಉಂಟಾಗ ತಕ್ಕಂತಹ ಪರಿಣಾಮ, ನಷ್ಟ ಇತ್ಯಾದಿಗಳಿಗೆ ಸದರಿಯವರುಗಳೇ ಸಂಪೂರ್ಣ ಜವಾಬ್ದಾರರಾಗಿರುತ್ತಾ ರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮಕ್ಕೆ ಸೇರಿದ ಸರ್ವೆ ನಂ. (ಹಳೇ ಸರ್ವೆ ನಂ. 12/1) ಹೊಸ ಸರ್ವೆ ನಂ. 12/5 ರ ವಿಸ್ತೀರ್ಣ 36 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂ. 25/11 (ಚಿಕ್ಕಮ್ಮ ರವರ ಜಮೀನು) ; ಪಶ್ಚಿಮಕ್ಕೆ : ಉದ್ದೇಶಿತ ರಸ್ತೆ (ಇದೇ ಸರ್ವೆ ನಂಬರಿನ ಉಳಿಕೆ ಸ್ವತ್ತು) ; ಉತ್ತರಕ್ಕೆ: ಸರ್ವೆ ನಂ. 24 (Notradum Convent) ; ದಕ್ಷಿಣಕ್ಕೆ: ಇದೇ ಸರ್ವೆ ನಂಬರಿನ ಉಳಿಕೆ ಸ್ವತ್ತು.

Sd/- V.S. Divya, B.A., B.Ed., LL.B.
Advocate, Law Lexicon Associates
Off: #1411, 1st Floor, 6th Cross, Thyagaraja Road, K.R. Mohalla, Mysuru-570 004.
Mob: 7411177409, 9448479030

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪ್ರಮಾಣ ಪತ್ರ

ಮೈಸೂರು ಸಿಟಿ, ವಿಜಯನಗರ 3ನೇ ಹಂತ, 16ನೇ ಮುಖ್ಯ ರಸ್ತೆ, 'ಸಿ' ಬ್ಲಾಕ್, ಮನೆ ನಂ. 633 ರಲ್ಲಿ ವಾಸವಾಗಿರುವ ಬಿ.ಎಂ. ಮಹದೇವಪ್ಪ ರವರ ಧರ್ಮಪತ್ನಿ ಶ್ರೀಮತಿ ಪ್ರೇಮ ಎನ್. ಪ್ರಮಾಣೀಕರಿಸುವುದೇನೆಂದರೆ, ನನ್ನ ಶಾಲಾ ದಾಖಲಾತಿ, ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಪಾಸ್ ಬುಕ್ ಮತ್ತು ಇತರೆ ದಾಖಲಾತಿಗಳಲ್ಲಿ ನನ್ನ ಹೆಸರನ್ನು ಪ್ರೇಮ ಎನ್. ಎಂದು ನಮೂದಾಗಿರುತ್ತದೆ. ಆದರೆ ಆಧಾರ್ ಕಾರ್ಡ್, ಪಾನ್ ಕಾರ್ಡ್ ಮತ್ತು ಇತರೆ ಕೆಲವು ದಾಖಲಾತಿಗಳಲ್ಲಿ ನನ್ನ ಹೆಸರು ಪ್ರೇಮ ಎಂದು ನಮೂದಾಗಿರುತ್ತದೆ. ಮೇಲ್ಕಂಡ ಎರಡೂ ಹೆಸರುಗಳಾದ ಪ್ರೇಮ ಎನ್. ಮತ್ತು ಪ್ರೇಮ ಎಂಬ ಹೆಸರುಗಳು ನನಗೆ ಸೇರಿದವುಗಳಾಗಿರುತ್ತದೆ ಎಂದು ನೋಟರಿ ಕೃಷ್ಣಮೂರ್ತಿ ರವರ ಮುಂದೆ ದಿನಾಂಕ 19-10-2023ರಂದು ಪ್ರಮಾಣೀಕರಿಸಿರುತ್ತೇನೆ.

ಸಹಿ/– ಪ್ರೇಮ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು

E-mail.adress:apmcnanjanagud@rediffmail.com
Ph No:08221- 225309 Pin:573101
ಕೃ.ಉ.ಮಾಸ(ನಂ)ಲೆ.ವಿ/401/2023–24 ದಿನಾಂಕ: 17.10.2023

ಇ–ಟೆಂಡರ್ ಪ್ರಕಟಣೆ

ನಂಜನಗೂಡು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹೆಚ್ಚುವರಿ ನಿಧಿಯ ಮೊತ್ತ 150–00 ಲಕ್ಷಗಳನ್ನು ಇ–ಪೋರ್ಟಲ್ ಮುಖಾಂತರ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಸಂಬಂಧ ಆಸಕ್ತ ರಾಷ್ಟ್ರೀಕೃತ ಬ್ಯಾಂಕುಗಳಿಂದ ಹಾಗು ಪ್ರಾದೇಶಿಕ ಸಹಕಾರ ಬ್ಯಾಂಕುಗಳಿಂದ (RRBs) ಸ್ಪರ್ಧಾತ್ಮಕ ಇ–ಬಿಡ್ಡಿಂಗ್ ಅನ್ನು ಆಹ್ವಾನಿಸಲಾಗಿದ್ದು ಹೆಚ್ಚಿನ ಮಾಹಿತಿಯನ್ನು ವೆಬ್ ಸೈಟ್: www.kppp.karnataka.gov.in ನಲ್ಲಿ ಪಡೆಯಬಹುದಾಗಿದ್ದು ಟೆಂಡರ್ ಬಿಡ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿ: 30.10.2023ರ 12.00 ಗಂಟೆಯವರೆಗೆ ಹಾಗು ಇ–ಆಕ್ಷನ್ ದಿ: 03.11.2023 ರಂದು ಮದ್ಯಾಹ್ನ 2.30 ಗಂಟೆಗೆ ನಿಗಧಿಪಡಿಸಲಾಗಿದೆ.

ಸಹಿ/– ಕಾರ್ಯದರ್ಶಿ
ಕೃ.ಉ.ಮಾ.ಸ., ನಂಜನಗೂಡು

ಸಹಿ/– ಆಡಳಿತಾಧಿಕಾರಿಗಳು
ಕೃ.ಉ.ಮಾ.ಸ., ನಂಜನಗೂಡು

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರು (ಪೂ & ಪ)ರವರ ಕಛೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು–570024. ಇಮೇಲ್: eeemccmys@gmail.com

ಸಂಖ್ಯೆ:ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ–10/2023–24 ದಿನಾಂಕ: 16.10.2023

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ ಟಿಎನ್–17/2023–24, ದಿನಾಂಕ: 16.10.2023	31	18.10.2023 ಬೆಳಿಗ್ಗೆ 11 ರ ನಂತರ	01.11.2023 ಸಂಜೆ 5.30 ಗಂಟೆಗೆ	02.11.2023 ಸಂಜೆ 5.30ರ ನಂತರ

ಅರ್ಹ ಗುತ್ತಿಗೆದಾರರು (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ(ಪೂ & ಪ) ರವರ ಕಛೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು(ಪೂರ್ವ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸಹಿ/– ಕಾರ್ಯಪಾಲಕ ಅಭಿಯಂತರರು(ಪಶ್ಚಿಮ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/536/23-24